ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 13 ಶುಕ್ರವಾರ 2022

ಸಂಪುಟ: 43 | ಸಂಚಿಕೆ: 27 | ಪುಟಗಳು: 10

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಮತಾಂತರ ನಿಷೇಧ ಕಾಯ್ದೆಗೆ ಸುಗ್ರೀವಾಜ್ಞೆ

ಸಚಿವ ಸಂಪುಟ ಸಭೆಯಲ್ಲಿ ನಿರ್ಧಾರ

ಬೆಂಗಳೂರು, ಮೇ 12– ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ಕಾಯ್ದೆ ಅಥವಾ ಮತಾಂತರ ನಿಷೇಧ ಕಾಯ್ದೆಯನ್ನು ಸುಗ್ರೀವಾಜ್ಞೆ ಮೂಲಕ ಜಾರಿಗೊಳಿಸುವ ಪ್ರಸ್ತಾವಕ್ಕೆ ಸಚಿವ ಸಂಪುಟ ಗುರುವಾರ ಒಪ್ಪಿಗೆ ನೀಡಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ.ಮಾಧುಸ್ವಾಮಿ, ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯದ ಹಕ್ಕು ಸಂರಕ್ಷಣಾ ವಿಧೇಯಕವನ್ನು ನಾವು ವಿಧಾನಸಭೆಯಲ್ಲಿ ಅಂಗೀಕರಿಸಿದ್ದೇವೆ. ಕೆಲವು ಕಾರಣಗಳಿಂದ ಅದು ವಿಧಾನ ಪರಿಷತ್ತಿನಲ್ಲಿ ಅಂಗೀಕಾರವಾಗಲಿಲ್ಲ. ಹೀಗಾಗಿ ಸುಗ್ರೀವಾಜ್ಞೆ ಮೂಲಕ ಮತಾಂತರ ನಿಷೇಧ ಕಾಯ್ದೆ ಜಾರಿಗೆ ತರಲು ಇಂದು ಸಚಿವ ಸಂಪುಟ ನಿರ್ಧರಿಸಿದೆ ಎಂದರು.



ಮತಾಂತರ ನಿಷೇಧ ಮಸೂದೆಯನ್ನು ಮುಂದಿನ ಅಧಿವೇಶನದಲ್ಲಿ ವಿಧಾನಪರಿಷತ್ತಿನಲ್ಲಿ ಮಂಡಿಸಿ ಅಂಗೀಕರಿಸಲಾಗುವುದು ಎಂದರು. ಕಳೆದ ಡಿಸೆಂಬರ್‌ನಲ್ಲಿ ಬೆಳಗಾವಿಯಲ್ಲಿ ನಡೆದ ವಿಧಾನ ಮಂಡಲ ಅಧಿವೇಶನದಲ್ಲಿ ಈ ಮಸೂದೆಯನ್ನು ಸಿದ್ಧಪಡಿಸಲಾಗಿತ್ತು. ವಿಧಾನಸಭೆಯ ಒಪ್ಪಿಗೆ ಪಡೆದಿದ್ದ ಈ ಮಸೂದೆಯನ್ನು ವಿಧಾನಪರಿಷತ್‌ನಲ್ಲಿ ಮಂಡಿಸಿ ಅಂಗೀಕರಿಸಲು ರಾಜ್ಯ ಸರ್ಕಾರಕ್ಕೆ ಸಾಧ್ಯವಾಗಿರಲಿಲ್ಲ. ಈಗ ಸುಗ್ರೀವಾಜ್ಞೆ ಮೂಲಕ ಅದನ್ನು ಜಾರಿಗೊಳಿಸಲು ತೀರ್ಮಾನಿಸಲಾಗಿದೆ.



ಸಾತಗಳ್ಳಿಯಲ್ಲಿ ಮನೆ ನಿರ್ಮಾಣ: ಮೈಸೂರಿನ ಕೆಆರ್‌ಎಸ್ ರಸ್ತೆ ವಾಣಿವಿಲಾಸ ವಾಟರ್ ವರ್ಕ್ಸ್ ಮುಂಭಾಗವಿರುವ ಲೋಕೋಪಯೋಗಿ ಇಲಾಖೆಗೆ ಸೇರಿದ ಆಂಜನೇಯ ದೇವಸ್ಥಾನವನ್ನು ಉತ್ತರಾದಿ ಮಠಕ್ಕೆ ದೀರ್ಘಾವಧಿ ಗುತ್ತಿಗೆ ನೀಡಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಈ ದೇವಾಲಯದಲ್ಲಿ ಪೂಜೆ–ಪುನಸ್ಕಾರ ಸೇರಿದಂತೆ ಎಲ್ಲವನ್ನೂ ಉತ್ತರಾದಿ ಮಠದವರೇ ನಿರ್ವಹಿಸುತ್ತಿರುವುದರಿಂದ ಅವರಿಗೆ ದೀರ್ಘಾವಧಿ ಗುತ್ತಿಗೆ ನೀಡಲು ಸಂಪುಟ ಸಭೆಯಲ್ಲಿ ಅನುಮೋದನೆ ನೀಡಲಾಯಿತು ಎಂದರು. ರಾಜೀವ್ ಗಾಂಧಿ ವಸತಿ ನಿಗಮದಡಿ ಮೈಸೂರಿನ ಸಾತಗಳ್ಳಿಯಲ್ಲಿ 352 ಮನೆ ನಿರ್ಮಾಣಕ್ಕೆ ಸಂಪುಟ ಅನುಮೋದನೆ ನೀಡಿದೆ.

ಪುರಸಭೆ ಮತ್ತು ಪಟ್ಟಣ ಪಂಚಾಯ್ತಿ ವ್ಯಾಪ್ತಿಯಲ್ಲಿ 1 ಎಕರೆಗಿಂತ ಒಳಪಟ್ಟ ಭೂಮಿಯಲ್ಲಿ ಮನೆ ನಿರ್ಮಾಣ ಮಾಡಲು ಟೌನ್ ಪ್ಲಾನಿಂಗ್ ಅನುಮೋದನೆ ಅನಿವಾರ್ಯವಿಲ್ಲ ಎಂದು ತೀರ್ಮಾನಿಸಲಾಗಿದೆ ಎಂದ ಅವರು, ಬೆಂಗಳೂರಿಗೆ ಹೊಂದಿಕೊಂಡಂತೆ ಇರುವ ಗ್ರಾಮ ಪಂಚಾಯ್ತಿ ಮತ್ತು ಪುರಸಭೆಗಳಿಗೆ ಇದು ▶ 8ನೇ ಪುಟಕ್ಕೆ

ರಾನಿಲ್ ವಿಕ್ರಮಸಿಂಘೆ ಶ್ರೀಲಂಕಾ ನೂತನ ಪ್ರಧಾನಿ




ಕೊಲಂಬೊ: ಸಾಲದ ಸುಳಿಯಲ್ಲಿ ಸಿಲುಕಿ ತೀವ್ರ ಆರ್ಥಿಕ ಬಿಕ್ಕಟ್ಟು ಎದುರಿಸುತ್ತಿರುವ ಶ್ರೀಲಂಕಾದಲ್ಲಿ ಹಿಂಸಾತ್ಮಕ ಪ್ರತಿಭಟನೆಗಳ ನಂತರ ವಿರೋಧ ಪಕ್ಷದ ನಾಯಕ ರಾನಿಲ್ ವಿಕ್ರಮಸಿಂಘೆ ದ್ವೀಪ ರಾಷ್ಟ್ರದ ನೂತನ ಪ್ರಧಾನಿಯಾಗಿ ಗುರುವಾರ ಪ್ರಮಾಣ ವಚನ ಸ್ವೀಕರಿಸಿದರು.

ತೀವ್ರ ಪ್ರತಿಭಟನೆಯ ನಂತರ ಮಹಿಂದ ರಾಜಪಕ್ಸೆ ಪ್ರಧಾನಿ ಹುದ್ದೆಗೆ ರಾಜೀನಾಮೆ ನೀಡಿದ ಕೆಲವು ದಿನಗಳ ನಂತರ 73 ವರ್ಷದ ಮಾಜಿ ಪ್ರಧಾನಿ ರಾನಿಲ್ ವಿಕ್ರಮಸಿಂಘೆರನ್ನು ಪ್ರಧಾನಿಯಾಗಿ ಶ್ರೀಲಂಕಾ ಅಧ್ಯಕ್ಷ ಗೋಟಾಬಯ ರಾಜಪಕ್ಸೆ ನೇಮಕ ಮಾಡಿದ್ದಾರೆ. 4 ಬಾರಿ ದ್ವೀಪ ರಾಷ್ಟ್ರದ ಪ್ರಧಾನಿಯಾಗಿ ಸೇವೆ ಸಲ್ಲಿಸಿದ ವಿಕ್ರಮಸಿಂಘೆರನ್ನು ಅಕ್ಟೋಬರ್ 2018ರಲ್ಲಿ ಅಂದಿನ ಅಧ್ಯಕ್ಷ ಮೈತ್ರಿಪಾಲ ಸಿರಿಸೇನಾ ಪ್ರಧಾನಿ ಹುದ್ದೆಯಿಂದ ವಜಾಗೊಳಿಸಿದ್ದರು. 2 ತಿಂಗಳ ನಂತರ ಸಿರಿಸೇನಾ, ಸಿಂಘೆ ಅವರನ್ನು ಮತ್ತೆ ಪ್ರಧಾನಿಯಾಗಿ ನೇಮಿಸಿದ್ದರು. ಆಡಳಿತಾರೂಢ ಶ್ರೀಲಂಕಾ ಪೊದು ಜನ ಪೆರಮುನಾ, ಪ್ರಮುಖ ವಿರೋಧ ಪಕ್ಷವಾದ ಸಮಗಿ ಜನ ಬಲವೇಗಯ ಮತ್ತು ಇತರ ಪಕ್ಷಗಳ ಸದಸ್ಯರು ಸಂಸತ್ತಿನಲ್ಲಿ ಸಿಂಘೆಗೆ ಬೆಂಬಲ ಸೂಚಿಸಿದ್ದಾರೆ.

ಮುಖ್ಯಮಂತ್ರಿ ಬೊಮ್ಮಾಯಿಗೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಸಂದೇಶ
ಎಲ್ಲವೂ ಗುಪ್ತ್... ಗುಪ್ತ್...

ಬೆಂಗಳೂರು,ಮೇ 12(ಕೆಎಂಶಿ)–ಕರ್ನಾಟಕದಲ್ಲಿ ಬಿಜೆಪಿ ಆಡಳಿತ ಮತ್ತು ಪಕ್ಷದಲ್ಲಿ ಮುಂದೇನು ಮಾಡಬೇಕೆಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪ್ರಧಾನಿ ಅವರ ಸಂದೇಶವನ್ನು ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ರವಾನಿಸಿದ್ದಾರೆ.




ಸಂಪುಟ ವಿಸ್ತರಣೆ ಇಲ್ಲವೆ ಪುನಾರಚನೆ ಸಂಬಂಧ ದೆಹಲಿ ಪ್ರವಾಸ ಸಂದರ್ಭದಲ್ಲಿ ಮುಖ್ಯಮಂತ್ರಿಯವರು ರಕ್ಷಣಾ ಸಚಿವ ರಾಜನಾಥ್‌ಸಿಂಗ್ ಅವರನ್ನು ಭೇಟಿ ಮಾಡಿದ ನಂತರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು. ಈ ಮೊದಲು ಗೃಹ ಸಚಿವರಿಂದಲೇ ಮುಖ್ಯಮಂತ್ರಿಯವರಿಗೆ ಸಂದೇಶ ಬಂದಿದೆ ಎಂದು ಹೇಳಲಾಗುತ್ತಿತ್ತು. ಆದರೆ ಪಕ್ಷದ ಮೂಲಗಳು ರಾಜನಾಥ್ ಸಿಂಗ್, ವರಿಷ್ಠರ ಸಂದೇಶವನ್ನು ತಲುಪಿಸಿದ್ದಾರೆ ಎಂದಿವೆ.

ಸಿಎಂ ಬೊಮ್ಮಾಯಿ ದೆಹಲಿಗೆ ಭೇಟಿ ನೀಡಿದ ಪ್ರತಿ ಸಂದರ್ಭದಲ್ಲೂ, ರಾಜನಾಥ್ ಸಿಂಗ್ ಅವರನ್ನು ಸ್ವಯಂ ಭೇಟಿ ಮಾಡುತ್ತಾರೆ. ಆದರೆ ಈ ಬಾರಿ ವಿದೇಶ ಪ್ರವಾಸದಿಂದ ಹಿಂತಿರುಗುತ್ತಿದ್ದಂತೆ ರಾಜನಾಥ್ ಸಿಂಗ್ ಅವರೇ ದೆಹಲಿಯಲ್ಲಿದ್ದ ಮುಖ್ಯಮಂತ್ರಿಯವರನ್ನು ತಾವೇ ಕರೆಸಿಕೊಂಡು ಅವರಿಗೆ ಪ್ರಧಾನಿಯವರ ▶ 8ನೇ ಪುಟಕ್ಕೆ

ಎರಡ್ಮೂರು ದಿನದಲ್ಲಿ ಸಂಪುಟ ವಿಸ್ತರಣೆ
ಮೈಸೂರಲ್ಲಿ ಮಾಜಿ ಸಿಎಂ ಯಡಿಯೂರಪ್ಪ ಹೇಳಿಕೆ

ಮೈಸೂರು, ಮೇ 12(ಆರ್‌ಕೆಬಿ)–ರಾಜ್ಯ ಸಚಿವ ಸಂಪುಟ ಪುನಾರಚನೆ ಅಥವಾ ವಿಸ್ತರಣೆ ಸಂಬಂಧ ಈಗಾಗಲೇ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ದೆಹಲಿಗೆ ತೆರಳಿ ವರಿಷ್ಠರ ಜತೆ ಚರ್ಚಿಸಿ ಬೆಂಗಳೂರಿಗೆ ವಾಪಸಾಗಿದ್ದು, ಶೀಘ್ರವೇ ಸಂಪುಟ ವಿಸ್ತರಣೆಯಾಗುವ ಸಾಧ್ಯತೆ ಇದೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ತಿಳಿಸಿದ್ದಾರೆ.



ಮೈಸೂರಲ್ಲಿ ಮಾತನಾಡಿದ ಅವರು, 2–3 ದಿನಗಳಲ್ಲಿ ಸಂಪುಟ ವಿಸ್ತರಣೆಯಾಗಲಿದೆ. ಈ ಬಗ್ಗೆ ಹೈಕಮಾಂಡ್ ತೀರ್ಮಾನ ತೆಗೆದುಕೊಳ್ಳಲಿದೆ ಎಂದರು. ಬಿಜೆಪಿ ಸರ್ಕಾರವನ್ನು ಭ್ರಷ್ಟ ಸರ್ಕಾರ ಎಂದು ಟೀಕಿಸಿರುವ ವಿಪಕ್ಷ ನಾಯಕ ಸಿದ್ದರಾಮಯ್ಯ ಅವರಿಗೆ ತಿರುಗೇಟು ನೀಡಿದ ಅವರು, ಯಾರು ದುರ್ಬಲರಿದ್ದರೋ, ಭ್ರಷ್ಟರಿದ್ದರೋ ಅಂಥವರ ಬಾಯಲ್ಲಿ ಇಂತಹ ಮಾತುಗಳು ಬರುತ್ತವೆ. ಸಿದ್ದರಾಮಯ್ಯ ಅವರ ಕಾಲದಲ್ಲಿ ಏನಾಯಿತು ಎಂಬುದು ಎಲ್ಲರಿಗೂ ಗೊತ್ತಿದೆ ಎಂದು ಟಾಂಗ್ ನೀಡಿದರು.

ವಾರಣಾಸಿ ಜ್ಞಾನವಾಪಿ ಮಸೀದಿ ಸಮೀಕ್ಷೆ ಮೇ 17ರೊಳಗೆ ಪೂರ್ಣಗೊಳಿಸಿ

ಉತ್ತರಪ್ರದೇಶ ನ್ಯಾಯಾಲಯ ಸೂಚನೆ

ವಾರಣಾಸಿ, ಮೇ 12– ವಾರಣಾಸಿ ಕಾಶಿ ವಿಶ್ವನಾಥ ದೇಗುಲ ಸನಿಹದಲ್ಲಿರುವ ಜ್ಞಾನವಾಪಿ ಮಸೀದಿ ಒಳಗಿನ ಸಮೀಕ್ಷೆಯನ್ನು ಮೇ 17ರೊಳಗೆ ಪೂರ್ಣಗೊಳಿಸಿ ಎಂದು ಉತ್ತರಪ್ರದೇಶ ನ್ಯಾಯಾಲಯ ಸೂಚನೆ ನೀಡಿದೆ.

ಜ್ಞಾನವಾಪಿ ಮಸೀದಿ ಒಳಗೆ ಸಮೀಕ್ಷೆ ನಡೆಸಲು ಆದೇಶ ನೀಡಲು ಕೋರಿ ಹಿಂದೂಪರ ಅರ್ಜಿದಾರರು ನ್ಯಾಯಾಲಯದ ಮೆಟ್ಟಿಲೇರಿದ್ದರು. ಇದರ ವಿಚಾರಣೆ ನಡೆಸಿದ್ದ ನ್ಯಾಯಾಲಯ ಶೀಘ್ರ ಸಮೀಕ್ಷೆ ಪೂರ್ಣಗೊಳಿಸಲು ಕ್ರಮ ಕೈಗೊಳ್ಳುವಂತೆ ಸಂಬಂಧಿಸಿದ ಪ್ರಾಧಿಕಾರಗಳಿಗೆ ಉತ್ತರಪ್ರದೇಶ ನ್ಯಾಯಾಲಯ ಸೂಚನೆ ನೀಡಿದೆ. ಜ್ಞಾನವಾಪಿ ಮಸೀದಿಯ ಒಳಗಿನ ಸಮೀಕ್ಷೆಯು ಮುಂದುವರಿಯಲಿದ್ದು, ಮೇ 17ರೊಳಗೆ ಸಮೀಕ್ಷೆ ಪೂರ್ಣಗೊಳಿಸಿ ವಾರಣಾಸಿ ನ್ಯಾಯಾಲಯಕ್ಕೆ ವರದಿ ಸಲ್ಲಿಸಬೇಕಾಗಿದೆ. ಸಮೀಕ್ಷಾ ಸಮಿತಿಗೆ ಇಬ್ಬರು ವಕೀಲರನ್ನು ಸೇರ್ಪಡೆಗೊಳಿಸಲಾಗಿದೆ. ಕಳೆದ ಶುಕ್ರವಾರದಂದು ಸಮೀಕ್ಷೆ ಆರಂಭಗೊಂಡಿದ್ದರೂ ಮಸೀದಿಯೊಳಗೆ ವೀಡಿಯೋಗ್ರಫಿ ವಿವಾದದ ಕಾರಣ ಸಂಪೂರ್ಣವಾಗಿ ಪೂರ್ಣಗೊಂಡಿರಲಿಲ್ಲ. ಜ್ಞಾನವಾಪಿ ಮಸೀದಿಯ ಉಸ್ತುವಾರಿ ಸಮಿತಿ ಮತ್ತು ಅದರ ವಕೀಲರು ಮಸೀದಿಯೊಳಗೆ ಯಾವುದೇ ವೀಡಿಯೋಗ್ರಫಿಯನ್ನು ವಿರೋಧಿಸುವುದಾಗಿ ಹೇಳಿದ್ದರು. ಅರ್ಜಿದಾರರ ಪರ ವಕೀಲರು ವಿಡಿಯೋಗ್ರಫಿ ಮಾಡಲು ನ್ಯಾಯಾಲಯದ ಅನುಮತಿ ಹೊಂದಲಾಗಿದೆ ಎಂದು ಹೇಳಿದ್ದಾರೆ. ವಾರಣಾಸಿಯ ಜ್ಞಾನವಾಪಿ ಮಸೀದಿ ಸಂಕೀರ್ಣದ ಪಶ್ಚಿಮ ಗೋಡೆಯ ▶ 8ನೇ ಪುಟಕ್ಕೆ

ರಾಜ್ಯ ವಿಧಾನಸಭೆಯಿಂದ ರಾಜ್ಯಸಭೆಯ 4 ಸ್ಥಾನಗಳಿಗೆ ಜೂ.10ರಂದು ಚುನಾವಣೆ

ಬೆಂಗಳೂರು, ಮೇ 12–ರಾಜ್ಯ ವಿಧಾನಸಭೆಯಿಂದ ರಾಜ್ಯಸಭೆಯನ್ನು ಪ್ರತಿನಿಧಿಸುತ್ತಿದ್ದ ನಾಲ್ವರ ಅವಧಿ ಜೂ.30ಕ್ಕೆ ಅಂತ್ಯಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಕೇಂದ್ರ ಚುನಾವಣಾ ಆಯೋಗವು ಈ ಸ್ಥಾನಗಳಿಗೆ ಜೂ.10ರಂದು ಚುನಾವಣೆ ನಡೆಸಲು ವೇಳಾಪಟ್ಟಿ ಪ್ರಕಟಿಸಿದೆ. ಕರ್ನಾಟಕ ವಿಧಾನಸಭೆಯಿಂದ ರಾಜ್ಯಸಭೆಗೆ ಆಯ್ಕೆಯಾಗಿರುವ ನಿರ್ಮಲಾ ಸೀತಾರಾಮನ್, ಕೆ.ಸಿ.ರಾಮಮೂರ್ತಿ, ಜೈರಾಂ ರಮೇಶ್ ಅವಧಿ ಜೂ.30ಕ್ಕೆ ಮುಕ್ತಾಯಗೊಳ್ಳಲಿದೆ. ಅಲ್ಲದೆ ರಾಜ್ಯಸಭಾ ಸದಸ್ಯರಾಗಿದ್ದ ಆಸ್ಕರ್ ಫರ್ನಾಂಡಿಸ್ ಅವರು ಈಗಾಗಲೇ ನಿಧನ ಹೊಂದಿದ್ದಾರೆ. ಅವರ ಅವಧಿಯೂ ಕೂಡ ಅಂದೇ ಮುಕ್ತಾಯಗೊಳ್ಳುತ್ತಿತ್ತು. ಹೀಗೆ ತೆರವಾಗುತ್ತಿರುವ ರಾಜ್ಯಸಭಾ 4 ಸ್ಥಾನಗಳ ಚುನಾವಣೆಗೆ ಮೇ 24ರಂದು ಅಧಿಸೂಚನೆ ಹೊರ ಬೀಳಲಿದ್ದು, ಅಂದೇ ನಾಮಪತ್ರ ಸಲ್ಲಿಕೆ ಕಾರ್ಯ ಆರಂಭಗೊಳ್ಳಲಿದೆ. ಮೇ 31 ನಾಮಪತ್ರ ಸಲ್ಲಿಸಲು ಕೊನೇ ದಿನವಾಗಿದ್ದು, ನಾಮಪತ್ರ ಹಿಂಪಡೆಯಲು ಜೂ.3 ಅಂತಿಮ ದಿನ. ಅಗತ್ಯಬಿದ್ದಲ್ಲಿ ಜೂ.10ರಂದು ಬೆಳಗ್ಗೆ 10ರಿಂದ ಸಂಜೆ 4ರವರೆಗೆ ಮತದಾನ ನಡೆದು ಅಂದೇ ಫಲಿತಾಂಶ ಪ್ರಕಟಗೊಳ್ಳಲಿದೆ.

ತಲಾ 2 ಶಿಕ್ಷಕ, ಪದವೀಧರ ಕ್ಷೇತ್ರಗಳಿಂದ ವಿಧಾನಪರಿಷತ್‌ಗೆ ಜೂ.13ರಂದು ಚುನಾವಣೆ

ಬೆಂಗಳೂರು, ಮೇ 12–ಚುನಾವಣಾ ಆಯೋಗವು ತಲಾ ಎರಡು ಶಿಕ್ಷಕ ಹಾಗೂ ಪದವೀಧರ ಕ್ಷೇತ್ರಗಳಿಂದ ವಿಧಾನಪರಿಷತ್ ಚುನಾವಣೆಗೆ ವೇಳಾಪಟ್ಟಿ ಪ್ರಕಟಿಸಿದ್ದು, ಜೂ.13ರಂದು ಚುನಾವಣೆ ನಡೆಯಲಿದೆ.



ವಾಯುವ್ಯ ಮತ್ತು ದಕ್ಷಿಣ ಪದವೀಧರ ಕ್ಷೇತ್ರ ಹಾಗೂ ವಾಯುವ್ಯ ಮತ್ತು ಪಶ್ಚಿಮ ಶಿಕ್ಷಕರ ಕ್ಷೇತ್ರಗಳಿಗೆ ಚುನಾವಣೆ ನಡೆಯಲಿದೆ. ಈ ಕ್ಷೇತ್ರಗಳನ್ನು ಪ್ರತಿನಿಧಿಸುತ್ತಿದ್ದ ನಿರಾಣಿ ಹಣಮಂತಪ್ಪ ರುದ್ರಪ್ಪ, ಕೆ.ಟಿ. ಶ್ರೀಕಂಠೇಗೌಡ, ಅರುಣ್ ಶಹಪುರ ಮತ್ತು ಬಸವರಾಜ ಹೊರಟ್ಟಿ ಅವರ ಅವಧಿ ಜುಲೈ 4ರಂದು ▶ 8ನೇ ಪುಟಕ್ಕೆ

ದಕ್ಷಿಣ ಪದವೀಧರ ಕ್ಷೇತ್ರದಿಂದ ಪರಿಷತ್ ಚುನಾವಣಾ ಪ್ರಕ್ರಿಯೆಗೆ ಚಾಲನೆ
ಜೆಡಿಎಸ್‌ನಿಂದ ಹೆಚ್.ಕೆ.ರಾಮು, ಕಾಂಗ್ರೆಸ್‌ನಿಂದ ಮಧು ಜಿ. ಮಾದೇಗೌಡ, ಬಿಜೆಪಿಯಿಂದ ಮೈ.ವಿ.ರವಿಶಂಕರ್ ಅಧಿಕೃತವಾಗಿ ಸೆಣಸಾಟ

ಮೈಸೂರು, ಮೇ 12– ಕೆ.ಟಿ. ಶ್ರೀಕಂಠೇಗೌಡರ ನಿವೃತ್ತಿಯಿಂದ ಜು.4ಕ್ಕೆ ತೆರವಾಗುತ್ತಿರುವ ದಕ್ಷಿಣ ಪದವೀಧರ ಕ್ಷೇತ್ರದಿಂದ ವಿಧಾನ ಪರಿಷತ್ ಚುನಾವಣೆಗೆ ಕೇಂದ್ರ ಚುನಾವಣಾ ಆಯೋಗ ವೇಳಾಪಟ್ಟಿ ಪ್ರಕಟಿಸಿದ್ದು, ಜೂ.13 ರಂದು ಚುನಾವಣೆ ನಡೆಯಲಿದೆ.

ದಕ್ಷಿಣ ಪದವೀಧರ ಕ್ಷೇತ್ರಕ್ಕೆ ಮೈಸೂರು, ಚಾಮರಾಜನಗರ, ಮಂಡ್ಯ ಮತ್ತು ಹಾಸನ ಜಿಲ್ಲೆಗಳು ಒಳಪಡಲಿದ್ದು, ಮೈಸೂರು ವಿಭಾಗದ ಪ್ರಾದೇಶಿಕ



ಹೆಚ್.ಕೆ.ರಾಮು ಮಧು ಮಾದೇಗೌಡ ಮೈ.ವಿ.ರವಿಶಂಕರ್

ಆಯುಕ್ತರು ಚುನಾವಣಾಧಿಕಾರಿಗಳಾಗಿರುತ್ತಾರೆ. ಮೈಸೂರು, ಚಾಮರಾಜನಗರ ▶ 8ನೇ ಪುಟಕ್ಕೆ

ಕೇಂದ್ರ ಮುಖ್ಯ ಚುನಾವಣಾ ಆಯುಕ್ತರಾಗಿ ರಾಜೀವ್ ಕುಮಾರ್ ನೇಮಕ



ನವದೆಹಲಿ: ಭಾರತದ ಮುಖ್ಯ ಚುನಾವಣಾ ಆಯುಕ್ತರಾಗಿ ರಾಜೀವ್‌ಕುಮಾರ್ ನೇಮಕಗೊಂಡಿದ್ದಾರೆ. ಕೇಂದ್ರ ಮುಖ್ಯ ಚುನಾವಣಾ ಆಯುಕ್ತರಾಗಿ, ಅತಿ ಹಿರಿಯ ಚುನಾವಣಾ ಆಯುಕ್ತ ರಾಜೀವ್‌ಕುಮಾರ್ ಮೇ 15ರಂದು ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಈಗಿನ ಮುಖ್ಯ ಚುನಾವಣಾ ಆಯುಕ್ತ ಸುಶೀಲ್ ಚಂದ್ರ ಮೇ 14ರಂದು ನಿರ್ಗಮಿಸಲಿದ್ದಾರೆ. ಕಾನೂನು ಸಚಿವಾಲಯವು ಹೊರಡಿಸಿದ ಮೇ 12ರ ಅಧಿಸೂಚನೆ ಪ್ರಕಾರ ಸಂವಿಧಾನದ 324ನೇ ವಿಧಿಯ ಷರತ್ತು (2)ರ ಅನುಸಾರವಾಗಿ ರಾಷ್ಟ್ರಪತಿ ರಾಮ್‌ನಾಥ್ ಕೋವಿಂದ್ ನೇಮಕಾತಿ ಮಾಡಿದ್ದಾರೆ.

ಕೇರಳದ ಟೊಮೆಟೋ ಜ್ವರಕ್ಕೆ ಅಂಜಬೇಕಿಲ್ಲ
ಕೊರೊನಾಗೂ ಇದಕ್ಕೂ ಸಂಬಂಧವಿಲ್ಲ; ಗಡಿಯಲ್ಲಿ ಅಗತ್ಯ ಎಲ್ಲಾ ಎಚ್ಚರಿಕಾ ಕ್ರಮ: ಡಾ.ಸುಧಾಕರ್

ಬೆಂಗಳೂರು, ಮೇ 12(ಕೆಎಂಶಿ)– ಕೇರಳದ ಕೆಲ ಜಿಲ್ಲೆಗಳಲ್ಲಿ ಕಂಡು ಬಂದಿರುವ ಟೊಮೆಟೋ ಜ್ವರಕ್ಕೂ ಕೊರೊನಾಕ್ಕೂ ಯಾವುದೇ ಸಂಬಂಧವಿಲ್ಲ. ಇದು ಕೇವಲ ಕೇರಳದ ಕೆಲ ಪ್ರದೇಶಗಳಿಗೆ ಮಾತ್ರ ಸೀಮಿತವಾಗಿದೆ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ಸ್ಪಷ್ಟಪಡಿಸಿದ್ದಾರೆ.



ಟೊಮೆಟೋ ಫ್ಲೂ ಹೊಸದಾಗಿ ಬಂದಿರುವ ಜ್ವರ ಅಲ್ಲ. ಇದು ಕೇರಳದಲ್ಲಿ ಕೆಲ ವರ್ಷಗಳಿಂದ ಕಾಣಿಸಿಕೊಳ್ಳುತ್ತಿದೆ. ಇದು ಕೇವಲ ಕೆಲ ಪ್ರದೇಶಗಳಲ್ಲಿ ಮಾತ್ರ ಕಾಣಿಸಿಕೊಂಡಿದೆ. 5 ವರ್ಷಕ್ಕಿಂತ ಕೆಳಗಿನ ಮಕ್ಕಳಲ್ಲಿ ಜ್ವರ ಹಾಗೂ ಚರ್ಮದ ಮೇಲೆ ಗುಳ್ಳೆಗಳು ಕಾಣಿಸಿಕೊಳ್ಳುತ್ತಿವೆ. ಕೇರಳದಲ್ಲಿ ಆರೋಗ್ಯ ಇಲಾಖೆ ಇದಕ್ಕೆ ಚಿಕಿತ್ಸೆಗಳನ್ನು ನೀಡುತ್ತಿದೆ. ಕೇರಳ ಆರೋಗ್ಯ ಇಲಾಖೆ ಜೊತೆ ಕರ್ನಾಟಕದ ಆರೋಗ್ಯ ಇಲಾಖೆಯೂ ಸಂಪರ್ಕದಲ್ಲಿದೆ ಎಂದರು.

ಕೇರಳದಿಂದ ಕರ್ನಾಟಕಕ್ಕೆ ಬರುವ ಪ್ರಯಾಣಿಕರು, ವಿಶೇಷವಾಗಿ ಮಕ್ಕಳ ಬಗ್ಗೆ ನಿಗಾ ಇಡಲು ಈಗಾಗಲೇ ಗಡಿ ಭಾಗದ ಜಿಲ್ಲಾ ವೈದ್ಯಾಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಅಷ್ಟೇ ಅಲ್ಲ ಗಡಿ ಭಾಗದ ಐದಾರು ಜಿಲ್ಲೆಗಳಲ್ಲಿರುವ ಮಕ್ಕಳ ಮೇಲೂ ▶ 8ನೇ ಪುಟಕ್ಕೆ

ಕುಸಿದಿರುವ ಮೈಸೂರು ಪಾರಂಪರಿಕ ಕಟ್ಟಡಗಳ ಸಾಲಿಗೆ ವಾಣಿ ವಿಲಾಸ ಮಾರುಕಟ್ಟೆ ಸೇರ್ಪಡೆ



ಮೈಸೂರು, ಮೇ 12(ಆರ್‌ಕೆಬಿ)– ಕುಸಿದ ಮೈಸೂರಿನ ಪಾರಂಪರಿಕ ಕಟ್ಟಡಗಳ ಸಾಲಿಗೆ ಈಗ ವಾಣಿ ವಿಲಾಸ ಮಾರುಕಟ್ಟೆ ಸೇರ್ಪಡೆಯಾಗಿದೆ.

ನಿರಂತರ ತುಂತುರು ಮಳೆಯ ನಡುವೆ ಗುರುವಾರ ಮಧ್ಯಾಹ್ನ ಅಗ್ರಹಾರದ ವಾಣಿ ವಿಲಾಸ ಮಾರುಕಟ್ಟೆಯ ಎರಡು ಮಳಿಗೆಗಳ ಮುಂಭಾಗದ ಸಜ್ಜಾ (ಚೆಜ್ಜಾ) ಕುಸಿದಿದೆ. ವಾಣಿ ವಿಲಾಸ ಜೋಡಿ ರಸ್ತೆಯಲ್ಲಿನ ಪ್ರಯಾಣಿಕರ ತಂಗುದಾಣದ ಬಳಿಯೇ ಈ ಅವಘಡ ಸಂಭವಿಸಿದ್ದು, ಅದೃಷ್ಟವಶಾತ್ ಯಾವುದೇ ಸಾವು–ನೋವು ಸಂಭವಿಸಿಲ್ಲ. ಮೈಸೂರಿನಲ್ಲಿ ಗಾಳಿ, ಗುಡುಗು, ಸಿಡಿಲು ಸಹಿತ ಮಳೆ ಅಬ್ಬರಿಸಿದ ಬೆನ್ನಲ್ಲೇ ಚಂಡಮಾರುತ ಪರಿಣಾಮವಾಗಿ ಕಳೆದೆರಡು ದಿನಗಳಿಂದ ಜಡಿ ಮಳೆ ಆರಂಭವಾಗಿದೆ. ಇದರ ನಡುವೆ ಪಾರಂಪರಿಕ ವಾಣಿ ವಿಲಾಸ ಮಾರುಕಟ್ಟೆಯ ಮಳಿಗೆಗಳ ▶ 8ನೇ ಪುಟಕ್ಕೆ

ಅಗ್ರಹಾರದ ವಿವಿ ಮಾರುಕಟ್ಟೆ ಕಟ್ಟಡದ ಮಳಿಗೆಗಳ ಸಜ್ಜಾ ಕುಸಿತ; ಅದೃಷ್ಟವಶಾತ್ ಯಾವ ಸಾವು–ನೋವಿಲ್ಲ

ಲ್ಯಾನ್ಸ್‌ಡೌನ್ ಕಟ್ಟಡದ ಮಳಿಗೆಯೊಂದರ ಮೇಲ್ಚಾವಣಿ ಕುಸಿದು, ಹಲವು ಜೀವ ಬಲಿಯಾಗಿತ್ತು. ನಂತರ ದೇವರಾಜ ಮಾರುಕಟ್ಟೆಯ ಆರ್ಚ್ ಕುಸಿದು ನೆಲಕಚ್ಚಿತ್ತು. ಸರಸ್ವತಿಪುರಂ ಅಗ್ನಿಶಾಮಕ ಠಾಣೆ ಸ್ವಾಗತ ಕಮಾನು ಹಾಗೂ ಮಾನಸಗಂಗೋತ್ರಿ ಆವರಣದ ಪಾರಂಪರಿಕ ಕಟ್ಟಡ ಜಯಲಕ್ಷ್ಮಿ ವಿಲಾಸ ಅರಮನೆಯ ಮೊದಲ ಅಂತಸ್ತಿನಲ್ಲಿರುವ ಜಾನಪದ ವಿಭಾಗದ ಮೇಲ್ಚಾವಣಿ ಸಹ ಕುಸಿದಿತ್ತು. ಹೀಗೆ ಪಾರಂಪರಿಕ ಕಟ್ಟಡಗಳಲ್ಲಿ ಕುಸಿಯುವುದು ನಿರಂತರವಾಗಿದೆ.

ಇಂದು ಅಖಿಲ ಕರ್ನಾಟಕ ಸಿದ್ದರಾಮಯ್ಯ ಅಭಿಮಾನಿಗಳ ಬ್ರಿಗೇಡ್ ಉದ್ಘಾಟನೆ

ಮೈಸೂರು, ಮೇ 12 (ಆರ್‌ಕೆಬಿ)– ದೀನದಲಿತರು, ಹಿಂದುಳಿದ ವರ್ಗದವರ ಜೊತೆ ಸಮಾಜ ಸೇವಾ ಕಾರ್ಯ ಹಮ್ಮಿಕೊಳ್ಳುವ ಉದ್ದೇಶದಿಂದ ಮೇ 13ರ ಬೆಳಿಗ್ಗೆ 10.30ಕ್ಕೆ ಜಿಲ್ಲಾ ಪತ್ರಕರ್ತರ ಸಂಘದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಅಖಿಲ ಕರ್ನಾಟಕ ಸಿದ್ದರಾಮಯ್ಯನವರ ಅಭಿಮಾನಿಗಳ ಬ್ರಿಗೇಡ್ ಎಂಬ ಸಂಘಟನೆ ಅಸ್ತಿತ್ವಕ್ಕೆ ತರಲಾಗುತ್ತಿದೆ ಎಂದು ಗೌರವಾಧ್ಯಕ್ಷ ಮಾರುತಿ ತಿಳಿಸಿದರು.



ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನೊಂದವರ ಕಷ್ಟ–ಸುಖಗಳಿಗೆ ಸ್ಪಂದಿಸಿ, ಧ್ವನಿ ಇಲ್ಲದವರ ಪರವಾಗಿ ಪ್ರತಿಭಟನೆ, ಹೋರಾಟ ಮೊದಲಾದವನ್ನು ಹಮ್ಮಿಕೊಂಡು ಅವರಿಗೆ ನ್ಯಾಯ ದೊರಕಿಸಿಕೊಡುವುದು, ರಕ್ತದಾನ ಶಿಬಿರ ಮುಂತಾದ ಸಮಾಜಮುಖಿ ಕಾರ್ಯ ಹಮ್ಮಿಕೊಳ್ಳುವ ಉದ್ದೇಶ ಈ ಸಂಘಟನೆಯದ್ದಾಗಿದೆ ಎಂದರು.

ಸಿದ್ದರಾಮಯ್ಯ ಅಭಿಮಾನಿಗಳ ಬ್ರಿಗೇಡ್ ಉದ್ಘಾಟನೆಯನ್ನು ಕೆಪಿಸಿಸಿ ಕಾರ್ಯಾಧ್ಯಕ್ಷರೂ ಆದ ಮಾಜಿ ಸಂಸದ ಆರ್.ಧ್ರುವನಾರಾಯಣ್ ನೆರವೇರಿಸಲಿದ್ದಾರೆ. ವರುಣಾ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಇನ್ನಿತರರು ಭಾಗವಹಿಸಲಿದ್ದಾರೆ ಎಂದರು. ಗೋಷ್ಠಿಯಲ್ಲಿ ಬ್ರಿಗೇಡ್ ಅಧ್ಯಕ್ಷ ಹಿನಕಲ್ ಉದಯ್, ಪದಾಧಿಕಾರಿಗಳಾದ ಮಹದೇವ್ ಕುಂಬ್ರಳ್ಳಿ, ಸಚಿನ್ ದೊಡ್ಡೇಗೌಡ, ಧನಪಾಲ್, ಮಾಕನಹುಂಡಿ ಶಿವು ಉಪಸ್ಥಿತರಿದ್ದರು.

ಮೈಸೂರಿಂದ ವರ್ಗಾವಣೆಗೊಂಡ ನ್ಯಾಯಾಧೀಶರುಗಳಿಗೆ ಬೀಳ್ಕೊಡುಗೆ

ಮೈಸೂರು, ಮೇ12(ಜಿಎ)– ಮೈಸೂರು ಜಿಲ್ಲಾ ನ್ಯಾಯಾಲಯದಿಂದ ವರ್ಗಾವಣೆಗೊಂಡ 17 ನ್ಯಾಯಾಧೀಶರನ್ನು ಅಭಿನಂದಿಸಿ, ಮೈಸೂರಿನಿಂದ ಬೀಳ್ಕೊಡಲಾಯಿತು.

ಮೈಸೂರು ವಕೀಲರ ಸಂಘದ ವತಿಯಿಂದ ಮೈಸೂರು ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವರ್ಗಾವಣೆಗೊಂಡ ನ್ಯಾಯಾಧೀಶರಾದ ಅಶ್ವಿನಿ ಶಿರಿಯನ್ನವರ, ಜರಾಲ್ಡ್ ರುಡಾಲ್ಫ್ ಮೆಂಡೋನ್ಸಾ, ಯಶವಂತಕುಮಾರ್, ವಿರೂಪಾಕ್ಷಯ್ಯ, ವಿ.ವಿಜೇತ, ಸುನೀಲ್ ಎಸ್. ಹೊಸಮನಿ, ಕವಿತಾ ಉಂಡೋಡಿ, ಬಿ.ಸಿ.ಅರವಿಂದ್, ಎಂ.ವಿನೋದ್‌ಕುಮಾರ್, ವಿಶ್ವನಾಥ್ ಯಮಕನಮರಡಿ, ಲಕ್ಷ್ಮಿಬಾಯಿ, ಹೆಚ್.ಎಸ್.ಪೂಜಾಶ್ರೀ, ಪ್ರೀತಿ, ಸಂತೋಷಕುಮಾರಿ, ಹೆಚ್.ವಿ.ಶೈಲಜಾ, ಸಿ.ಎನ್.ಮನ್ನಿರತ್ನಮ್ಮ, ರಾಜೀವ್ ಗೋಳಸಾರ ಮತ್ತು ಅಸ್ಮಾ ಕೌಸರ್ ಅವರನ್ನು ಅಭಿನಂದಿಸಿ ಬೀಳ್ಕೊಡಲಾಯಿತು. ಇದೇ ವೇಳೆ ಮೈಸೂರಿಂದ ನೂತನವಾಗಿ ನ್ಯಾಯಾಧೀಶರಾಗಿ ನೇಮಕಗೊಂಡಿರುವ ಎಂ.ರಘು ಅವರನ್ನು ಸನ್ಮಾನಿಸಲಾಯಿತು.

ಮೈಸೂರು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಎಲ್.ಎಂ.ರಘುನಾಥ್ ಮಾತನಾಡಿ, ಮೈಸೂರು ಜಿಲ್ಲೆ ಉತ್ತಮವಾದ ಜಿಲ್ಲೆಯಾಗಿದ್ದು, ವಕೀಲರ ಸಂಘ ಮತ್ತು ವಕೀಲರ ಒಗ್ಗಟ್ಟಿನಿಂದ ಅತಿ ಹೆಚ್ಚು ಕೇಸ್‌ಗಳನ್ನು ವಿಲೇವಾರಿ ಮಾಡಲಾಗಿದೆ. 48 ವರ್ಷಗಳ ಹಿಂದಿನ ಕೇಸ್‌ಗಳನ್ನು ವಿಲೇವಾರಿ ಮಾಡಿರುವ ಹಿನ್ನೆಲೆಯಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಗೌರವವನ್ನು ಹೊಂದಿದೆ. ಇದಕ್ಕೆ ವರ್ಗಾವಣೆಯಾಗಿರುವ ನ್ಯಾಯಾಧೀಶರು ಸಹ ಕಾರಣಕರ್ತರಾಗಿದ್ದಾರೆ. ನೂತನವಾಗಿ ಬರುವವರೂ ಒಳಿತಾಗಲಿ ಮತ್ತು ಮೈಸೂರು ವಕೀಲರ ಸಂಘದ ಜೊತೆ ಉತ್ತಮ ಬಾಂಧವ್ಯವನ್ನು ಬೆಳೆಸಿಕೊಳ್ಳಲಿ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಂ.ಮಹದೇವಸ್ವಾಮಿ, ಕಾರ್ಯದರ್ಶಿ ಎಸ್. ಉಮೇಶ್, ಉಪಾಧ್ಯಕ್ಷ ಪುಟ್ಟಸಿದ್ದೇಗೌಡ, ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿನ ಉಪಾಧ್ಯಕ್ಷ ಚಂದ್ರಮೌಳಿ ಮತ್ತು ಮೈಸೂರು ವಕೀಲರ ಸಂಘದ ಮಹಿಳಾ ಜಂಟಿ ಕಾರ್ಯದರ್ಶಿ ಭಾಗ್ಯ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಗುಂಡಿನ ದಾಳಿ ನಡೆಸಿ ಕಾಶ್ಮೀರಿ ಪಂಡಿತನನ್ನು ಹತ್ಯೆಗೈದ ಉಗ್ರರು

ಶ್ರೀನಗರ, ಮೇ 12– ಕಾಶ್ಮೀರಿ ಪಂಡಿತರೊಬ್ಬರ ಮೇಲೆ ಉಗ್ರರು ಗುಂಡಿನ ದಾಳಿ ನಡೆಸಿ ಹತ್ಯೆಗೈದಿರುವ ಘಟನೆ ಜಮ್ಮು ಮತ್ತು ಕಾಶ್ಮೀರದ ಬುದ್ಗಾಮ್ ಜಿಲ್ಲೆಯ ಕಂದಾಯ ಇಲಾಖೆಯ ಕಚೇರಿಯಲ್ಲಿ ಗುರುವಾರ ಮಧ್ಯಾಹ್ನ ನಡೆದಿದೆ.

ಕಾಶ್ಮೀರಿ ಪಂಡಿತ್ ಸಮುದಾಯದ ರಾಹುಲ್ ಭಟ್ ಹತ್ಯೆಗೀಡಾದ ವ್ಯಕ್ತಿ. ಮೃತರು ಕಂದಾಯ ಇಲಾಖೆಯ ನೌಕರರಾಗಿದ್ದರು. ಕೇಂದ್ರ ಕಾಶ್ಮೀರದ ಚದೂರದಲ್ಲಿರುವ ತಹಸೀಲ್ದಾರ್ ಕಚೇರಿಯಲ್ಲಿಯೇ ಉಗ್ರರು ಗುಂಡಿನ ದಾಳಿ ನಡೆಸಿದ್ದಾರೆ. ಗಂಭೀರವಾಗಿ ಗಾಯಗೊಂಡಿದ್ದ ಅವರನ್ನು ಶ್ರೀನಗರದ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆಸ್ಪತ್ರೆಯಲ್ಲಿ ಸಾವು ಬದುಕಿನ ಮಧ್ಯೆ ಹೋರಾಡಿ ಸಾವನ್ನಪ್ಪಿದ್ದಾರೆ.

ಕಾಶ್ಮೀರ ವಲಯ ಪೊಲೀಸರು ಟ್ವೀಟ್ ಮಾಡಿ, ಬುದ್ಗಾಮ್‌ನ ತಹಸೀಲ್ದಾರ್ ಕಚೇರಿ ಚದೂರದಲ್ಲಿ ಅಲ್ಪಸಂಖ್ಯಾತ ಸಮುದಾಯದ ರಾಹುಲ್ ಭಟ್ ಎಂಬ ನೌಕರನ ಮೇಲೆ ಭಯೋತ್ಪಾದಕರು ಗುಂಡು ಹಾರಿಸಿದ್ದಾರೆ. ಅವರನ್ನು ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ ಎಂದು ತಿಳಿಸಿದರು. ಘಟನೆಯ ನಂತರ, ಭದ್ರತಾ ಪಡೆಗಳು ಘಟನೆ ನಡೆದ ಪ್ರದೇಶದಲ್ಲಿ ಶೋಧ ಕಾರ್ಯಾಚರಣೆಯನ್ನು ಪ್ರಾರಂಭಿಸಿವೆ. ಘಟನೆಯ ಕುರಿತು ಪ್ರತಿಕ್ರಿಯಿಸಿದ ಕಾಂಗ್ರೆಸ್ ನಾಯಕ ಅಶ್ವನಿ ಹಂಡಾ, ಕಣಿವೆಯಲ್ಲಿ ಕಾಶ್ಮೀರಿ ಪಂಡಿತರಿಗೆ ಭದ್ರತೆ ಒದಗಿಸಲು ಕೇಂದ್ರ ಸರ್ಕಾರ ವಿಫಲವಾಗಿದೆ ಎಂದು ತರಾಟೆಗೆ ತೆಗೆದುಕೊಂಡಿದ್ದಾರೆ.

ಮಲಬಾರ್ ಗೋಲ್ಡ್ ಅಂಡ್ ಡೈಮಂಡ್‌ನಲ್ಲಿ ಕಡಿಮೆ ದರದಲ್ಲಿ ಚಿನ್ನಾಭರಣ

ಮೈಸೂರು,ಮೇ 12–ಒನ್ ಇಂಡಿಯಾ ಒನ್ ಗೋಲ್ಡ್ ರೇಟ್ ಯೋಜನೆ ಭಾಗವಾಗಿ ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ ಕಡಿಮೆ ದರದಲ್ಲಿ ಚಿನ್ನಾಭರಣವನ್ನು ನೀಡುತ್ತಿದೆ. ಜೊತೆಗೆ ಅತ್ಯಂತ ಕಡಿಮೆ ಮೇಕಿಂಗ್ ಚಾರ್ಜಸ್ ನೀಡುವ ಮೂಲಕವೂ ಗ್ರಾಹಕ ಸ್ನೇಹಿಯಾಗಿದೆ ಎಂದು ಮಲಬಾರ್ ಗ್ರೂಪ್‌ನ ಅಧ್ಯಕ್ಷ ಎಂ.ಪಿ.ಅಹ್ಮದ್ ತಿಳಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಮಲಬಾರ್ ಗೋಲ್ಡ್ ಮತ್ತು ಡೈಮಂಡ್ಸ್ ಕೇವಲ ಶೇ. 4.9ರಿಂದ ಆರಂಭವಾಗುವ ಮೇಕಿಂಗ್ ಚಾರ್ಜಸ್

MALABAR
GOLD & DIAMONDS

ಹೊರತಾಗಿ ದೇಶಾದ್ಯಂತ ಚಿನ್ನಕ್ಕೆ ನಿಖರವಾದ ದರವನ್ನು ವಿಧಿಸುತ್ತಿದೆ ಎಂದು ತಿಳಿಸಿದ್ದಾರೆ.

ದೇಶದಲ್ಲಿ ಚಿನ್ನವು ಹೂಡಿಕೆ ಮತ್ತು ಸಂಪತ್ತಿಗೆ ಅತ್ಯಂತ ಸುರಕ್ಷಿತ ಟೂಲ್ ಆಗಿ ಮುಂದುವರಿದಿದೆ. ಪ್ರತಿಯೊಬ್ಬ ಗ್ರಾಹಕರಿಗೂ ನ್ಯಾಯಯುತ ಮತ್ತು ಅತ್ಯುತ್ತಮ ಬೆಲೆ ಸಿಗಬೇಕೆಂಬ ದೃಷ್ಟಿಯಿಂದ ನಾವು ವಿವಿಧ ಯೋಜನೆಗಳನ್ನು ಗ್ರಾಹಕರಿಗೆ ಪರಿಚಯಿಸಿದ್ದೇವೆ ಎಂದು ಹೇಳಿದ್ದಾರೆ.

ಉದ್ಯಮಗಳ ಪಾರದರ್ಶಕತೆ ಹಾಗೂ ಸಮಾಜಸೇವಾದ ಬೆಲೆಯನ್ನು ಅನುಮತಿಸುವ ದರ ಜೊತೆಗೆ ನ್ಯಾಯಯುತವಾದ ಬೆಲೆ ನೀತಿಗೆ ಚಂದದಾರರಾಗಿರುವುದರಿಂದ ಕಡಿಮೆ ದರದಲ್ಲಿ ಚಿನ್ನಾಭರಣ ನೀಡಲು ಮಲಬಾರ್ ಗೋಲ್ಡ್ ಅಂಡ್ ಡೈಮಂಡ್‌ಗೆ ಸಾಧ್ಯವಾಗುತ್ತದೆ. ಇಲ್ಲಿ ಮಾರಾಟ ಮಾಡುವ ಎಲ್ಲಾ ಆಭರಣಗಳು ಗ್ರಾಹಕರ ಕೈಗೆ ತಲುಪುವವರೆಗೂ ಜವಾಬ್ದಾರಿ ನಿರ್ವಹಿಸುತ್ತೇವೆ ಎಂದು ಹೇಳಿದ್ದಾರೆ.

ಇಂದು 'ಜನತಾ ಜಲಧಾರೆ' ಸಮಾರೋಪ

ಮೈಸೂರು, ಮೇ 12(ಆರ್‌ಕೆಬಿ)– ಬೆಂಗಳೂರಿನ ನೆಲಮಂಗಲದ ಬಳಿ ಜೆಡಿಎಸ್ ವತಿಯಿಂದ ಹಮ್ಮಿಕೊಂಡಿರುವ ಜನತಾ ಜಲಧಾರೆ ಸಮಾರೋಪ ಕಾರ್ಯಕ್ರಮದಲ್ಲಿ ನಗರದ ಕೃಷ್ಣರಾಜ ಕ್ಷೇತ್ರದ ಸುಮಾರು 5 ಸಾವಿರ ಮಂದಿ ಕಾರ್ಯಕರ್ತರು ಪಾಲ್ಗೊಳ್ಳಲಿದ್ದಾರೆ ಎಂದು ಮಾಜಿ ಉಪಮೇಯರ್ ವಿ.ಶೈಲೇಂದ್ರ ತಿಳಿಸಿದರು.

ಮೈಸೂರಿಂದ 5 ಸಾವಿರ ಕಾರ್ಯಕರ್ತರು


ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೇ 13ರಂದು ನಗರದ ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ನಂತರ ಜನತಾ ಜಲಧಾರೆ ಕಾರ್ಯಕ್ರಮಕ್ಕೆ ಹೊರಡಲಿದ್ದೇವೆ ಎಂದರು. ತಿಂಡಿ, ಊಟದ ವ್ಯವಸ್ಥೆ ಇದೆ. ಭಾಗವಹಿಸಲು ಇಚ್ಛಿಸುವವರು ಮಾಹಿತಿಗೆ ದೂ.9606231909 ಮೂಲಕ ಸಂಪರ್ಕಿಸಬಹುದು ಎಂದರು. ಸುದ್ದಿಗೋಷ್ಠಿಯಲ್ಲಿ ಕೃಷ್ಣರಾಜ ಕ್ಷೇತ್ರದ ಅಧ್ಯಕ್ಷ ಬಿ.ಜೆ.ಸಂತೋಷ್, ರಾಜ್ಯ ವಕ್ತಾರ ರವಿಚಂದ್ರೇಗೌಡ ಉಪಸ್ಥಿತರಿದ್ದರು.

ನಾಳೆ ಉಚಿತ ಆರೋಗ್ಯ ತಪಾಸಣೆ

ಮೈಸೂರು, ಮೇ 12– ಮೈಸೂರಿನ ನಯನ ಕುಮಾರ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಹಾಗೂ ಶ್ರೀ ಯೋಗನರಸಿಂಹಸ್ವಾಮಿ ದೇವಸ್ಥಾನ ಆಡಳಿತ ಮಂಡಳಿ ಸಹಯೋಗದಲ್ಲಿ ವಿಜಯನಗರ 2ನೇ ಹಂತದಲ್ಲಿರುವ ದೇವಸ್ಥಾನದ ಆವರಣದಲ್ಲಿ ಮೇ 14ರಂದು ಬೆಳಿಗ್ಗೆ 9.30ರಿಂದ ಮಧ್ಯಾಹ್ನ 3ರವರೆಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದ್ದು, ನೋಂದಣಿ ಹಾಗೂ ಮಾಹಿತಿಗೆ ಮೊ.ಸಂ.9513310100 ಅಥವಾ 8762850960 ಸಂಪರ್ಕಿಸಬಹುದು.

ನಿಧನ

ಶ್ರೀನಿವಾಸಚಾರಿ



ಮೈಸೂರು, ಮೇ 12– ಮೈಸೂರು ಬನ್ನಿಮಂಟಪದ ಹುಡ್ಕೋ ನಿವಾಸಿ ಶ್ರೀನಿವಾಸಚಾರಿ (51) ಬುಧವಾರ ನಿಧನರಾದರು. ಮೃತರು ಪತ್ನಿ ಗಿರಿಜಾ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರ ಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಮೇ 17ರಂದು ಬೆಂಗಳೂರಲ್ಲಿ ಆಶಾ ಕಾರ್ಯಕರ್ತೆಯರ ಪ್ರತಿಭಟನೆ



ಮೈಸೂರು,ಮೇ 12(ಆರ್‌ಕೆಬಿ)–ಆರ್‌ಸಿಎಚ್ ಪೋರ್ಟಲ್ ಮೂಲಕ ಆಶಾ ಕಾರ್ಯಕರ್ತೆಯರಿಗೆ ನೀಡುವ ಕೇಂದ್ರದ ಪ್ರೋತ್ಸಾಹಧನ ಸರಿಯಾಗಿ ಕೈಸೇರುತ್ತಿಲ್ಲ. ಹೀಗಾಗಿ ಈ ಸಮಸ್ಯೆ ಪರಿಹರಿಸಬೇಕು ಎಂಬ ಬೇಡಿಕೆ ಸೇರಿದಂತೆ ತಮ್ಮ ಇನ್ನಿತರ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಮೇ 17 ರಂದು ಬೆಂಗಳೂರಲ್ಲಿ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ವತಿಯಿಂದ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಎಐಯುಟಿಯುಸಿ ರಾಜ್ಯ ನಾಯಕಿ ಎಂ.ಉಮಾದೇವಿ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಸಂಘದ ಜಿಲ್ಲಾ ಸಮಿತಿ ವತಿಯಿಂದ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಆಶಾ ಕಾರ್ಯಕರ್ತೆಯರು ಇಲಾಖೆ ವಹಿಸಿದ ವಿವಿಧ ಕೆಲಸಗಳಿಗಾಗಿ ಹಗಲಿರುಳು ದುಡಿದರೂ ಹಣ ಕೈಸೇರುತ್ತಿಲ್ಲ. ಈ ಕುರಿತು ಸಂಬಂಧಿತ ಇಲಾಖೆ ಗಮನಕ್ಕೆ ತಂದರೂ ಪ್ರಯೋಜನವಾಗಿಲ್ಲ. ಇವರು ಸಲ್ಲಿಸಿದ ಕೆಲಸಗಳಿಗೆ ಆರ್‌ಸಿಎಚ್ ಪೋರ್ಟಲ್‌ನಲ್ಲಿ ದಾಖಲಿಸಬೇಕು. ಈ ರೀತಿ ಮಾಡದಿದ್ದಲ್ಲಿ ತಿಂಗಳಿಡೀ ಮಾಡಿದ ಕೆಲಸಗಳಿಗೆ ಹಣ ಬರುವುದಿಲ್ಲ ಎಂದು ದೂರಿದರು.

ಬಹಳಷ್ಟು ಕಡೆಗಳಲ್ಲಿ ಇಂಟರ್ನೆಟ್ ಸಂಪರ್ಕ ಸಿಗುವುದಿಲ್ಲ. ಆಗಲೂ ಇವರಿಗೆ ಹಣ ವಂಚನೆಯಾಗುತ್ತಿದೆ. ಹೀಗಾಗಿ ಮಾಸಿಕ ಕೇವಲ 1ರಿಂದ 3 ಸಾವಿರ ರೂ.ಗಳಷ್ಟು ಮಾತ್ರ ಪ್ರೋತ್ಸಾಹಧನ ಸಿಗುವಂತಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು. ಸುದ್ದಿಗೋಷ್ಠಿಯಲ್ಲಿ ಸಲಹೆಗಾರರಾದ ಪಿ.ಎಸ್.ಸಂಧ್ಯಾ, ಹರೀಶ್, ಮಣಿಲಾ, ಕೋಮಲ, ಸವಿತಾ, ಶುಭಮಂಗಳ, ಭಾರತಿ ಉಪಸ್ಥಿತರಿದ್ದರು.

> ಆರ್‌ಸಿಎಚ್ ಪೋರ್ಟಲ್ ಡಾಟಾ ಎಂಟ್ರಿ ಸಮಸ್ಯೆ ಪರಿಹರಿಸಬೇಕು. ಆಶಾ ಕಾರ್ಯಕರ್ತೆಯರನ್ನು ಸರ್ಕಾರಿ ನೌಕರರೆಂದು ಪರಿಗಣಿಸಬೇಕು. ವೇತನ, ಮುಂಬಡ್ತಿ, ರಜೆ, ನಿವೃತ್ತಿ ವೇತನ ಇನ್ನಿತರ ಸರ್ಕಾರಿ ಸೌಕರ್ಯ ನೀಡಬೇಕು. ಬಿಡಿಬಿಡಿಯಾಗಿ ನೀಡುತ್ತಿರುವ ರಾಜ್ಯ ಸರ್ಕಾರದ ನಿಶ್ಚಿತ ಗೌರವಧನ, ನಿಗದಿತ ಪುನರಾವರ್ತಿತ ಚಟುವಟಿಕೆಗಳ ನಿಶ್ಚಿತ ಗೌರವಧನ ಮತ್ತು ಆಶಾ ನಿಧಿಯ ಮೂಲಕ ಪಡೆಯುವ ವಿವಿಧ ಚಟುವಟಿಕೆಗಳ ಪ್ರೋತ್ಸಾಹಧನಗಳನ್ನು ಒಟ್ಟುಗೂಡಿಸಿ ಒಂದೇ ಗೌರವಧನವಾಗಿಸಿ ಪ್ರತಿ ತಿಂಗಳ 10ರೊಳಗೆ ಆಯಾ ತಿಂಗಳನ್ನು ನಮೂದಿಸಿ ಕಾರ್ಯಕರ್ತೆಯರ ಬ್ಯಾಂಕ್ ಖಾತೆಗೆ ಪಾವತಿ ಮಾಡಲು ಆದೇಶ ಹೊರಡಿಸಬೇಕು ಎಂಬಿತ್ಯಾದಿ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಲಾಗುವುದು.
> –ಎಂ.ಉಮಾದೇವಿ

ಪ್ರತಿ ತಿಂಗಳ 4ನೇ ಶುಕ್ರವಾರ ಕಾರ್ಮಿಕ ಅದಾಲತ್

ಮೈಸೂರು,ಮೇ 12–ಜಿಲ್ಲಾದ್ಯಂತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಹಾಗೂ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಗಳಿಗೆ ಸಂಬಂಧಿಸಿದ ಅರ್ಜಿಗಳು ಮತ್ತು ಅರೆ ನ್ಯಾಯಿಕ ಪ್ರಕರಣಗಳನ್ನು ಅದಾಲತ್ ಮೂಲಕ ಇತ್ಯರ್ಥಪಡಿಸಲು ಉದ್ದೇಶಿಸಲಾಗಿದೆ.

ಪ್ರತಿ ತಿಂಗಳ 4ನೇ ಶುಕ್ರವಾರದಂದು ಜಿಲ್ಲೆಯ ಕಾರ್ಮಿಕ ಇಲಾಖೆ ಕಚೇರಿಗಳಾದ ಸಹಾಯಕ ಕಾರ್ಮಿಕ ಆಯುಕ್ತರ ಕಚೇರಿ, ಕಾರ್ಮಿಕ ಅಧಿಕಾರಿಗಳ ಕಚೇರಿ, ಹಿರಿಯ ಕಾರ್ಮಿಕ ನಿರೀಕ್ಷಕರ ಕಚೇರಿಗಳಲ್ಲಿ ಬೆಳಗ್ಗೆ 10ರಿಂದ ಸಂಜೆ 5ರವರೆಗೆ ಕಾರ್ಮಿಕ ಅದಾಲತ್ ನಡೆಸುತ್ತಿದ್ದು, ಫಲಾನುಭವಿಗಳು ಅಥವಾ ಕಾರ್ಮಿಕರು ಸೌಲಭ್ಯವನ್ನು ಪಡೆದುಕೊಳ್ಳಬೇಕೆಂದು ಮೈಸೂರು ವಿಭಾಗದ ಸಹಾಯಕ ಕಾರ್ಮಿಕ ಆಯುಕ್ತೆ ನಾಜಿಯಾ ಸುಲ್ತಾನ ತಿಳಿಸಿದ್ದಾರೆ.

ಸಹಾಯಕ ಪ್ರಾಧ್ಯಾಪಕ, ಪಿಎಸ್‌ಐ ನೇಮಕಾತಿ ಪರೀಕ್ಷೆಗಳ ಅಕ್ರಮ ಸಂಬಂಧ

ನ್ಯಾಯಾಂಗ ತನಿಖೆಗೆ ಆಗ್ರಹಿಸಿ ಎಐಡಿವೈಓ ಪ್ರತಿಭಟನೆ



> ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಪರೀಕ್ಷೆ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದೆ. ಈ ಅಕ್ರಮದಲ್ಲಿ ಇನ್ನೂ ಹಲವು ವಿಷಯಗಳು ಬಯಲಿಗೆ ಬರುತ್ತಲೇ ಇವೆ. 30 ಸಾವಿರಕ್ಕೂ ಹೆಚ್ಚು ಅಭ್ಯರ್ಥಿಗಳು ಅರ್ಜಿ ಹಾಕಿ ಹಗಲು ರಾತ್ರಿ ಅಭ್ಯಾಸ ನಡೆಸಿ, ನೇಮಕಾತಿಗೆ ಪ್ರಯತ್ನ ಮಾಡಿದ್ದರೆ, ಇನ್ನೊಂದೆಡೆ ಅಕ್ರಮದ ದಾರಿ ಹಿಡಿಯಲಾಗಿದೆ. ಇದರಿಂದ ಅರ್ಹ, ಪ್ರತಿಭಾವಂತ ಅಭ್ಯರ್ಥಿಗಳು ಹುದ್ದೆಯಿಂದ ವಂಚಿತರಾಗುವಂತಾಗಿದೆ. –ಪ್ರತಿಭಟನಾಕಾರರು

ಮೈಸೂರು, ಮೇ 12(ಪಿಎಂ)– ಸಹಾಯಕ ಪ್ರಾಧ್ಯಾಪಕರು ಹಾಗೂ ಪಿಎಸ್‌ಐ ನೇಮಕಾತಿ ಪರೀಕ್ಷೆಗಳ ಅಕ್ರಮ ಸಂಬಂಧ ನ್ಯಾಯಾಂಗ ತನಿಖೆಗೆ ಒತ್ತಾಯಿಸಿ ಆಲ್ ಇಂಡಿಯಾ ಡೆಮಾಕ್ರೆಟಿಕ್ ಯೂತ್ ಆರ್ಗನೈಸೇಷನ್ (ಎಐಡಿವೈಓ) ವತಿಯಿಂದ ಗುರುವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು ಡಿಸಿ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಭ್ರಷ್ಟಾಸುರನ ಪ್ರತಿಕೃತಿಯನ್ನು ನೇಣಿಗೇರಿಸುವ ಮೂಲಕ ಆಕ್ರೋಶ ವ್ಯಕ್ತಪಡಿಸಿದರು. ಪಿಎಸ್‌ಐ ನೇಮಕಾತಿ ಪರೀಕ್ಷೆಯ ಅಕ್ರಮದಲ್ಲಿ ರಾಜ್ಯದ ಪ್ರಮುಖ ರಾಜಕೀಯ ಮುಖಂಡರು ಹಾಗೂ ಉನ್ನತ ಅಧಿಕಾರಿಗಳ ಹೆಸರು ತಳುಕು ಹಾಕಿಕೊಂಡಿವೆ. ಪ್ರಕರಣ ಸಂಬಂಧ ಸಿಐಡಿ ತನಿಖೆ ಪ್ರಗತಿಯಲ್ಲಿರುವಾಗಲೇ ಸರ್ಕಾರ ನಡೆದಿರುವ ಪರೀಕ್ಷೆ ರದ್ದುಗೊಳಿಸಿ, ಮರು ಪರೀಕ್ಷೆ ನಡೆಸುವ ನಿರ್ಧಾರ ಪ್ರಕಟಿಸಿದೆ. ಈ ರೀತಿ ನಿರ್ಧಾರ ಕೈಗೊಂಡಿರುವುದು ಮತ್ತಷ್ಟು ಅನುಮಾನಕ್ಕೆ ಎಡೆಮಾಡಿದೆ ಎಂದು ಕಿಡಿಕಾರಿದರು.

ಈ ಪ್ರಕರಣಗಳ ಸಂಬಂಧ ಹಾಲಿ(ಕರ್ತವ್ಯನಿರತ) ನ್ಯಾಯಾಧೀಶರೊಬ್ಬರ ನೇತೃತ್ವದಲ್ಲಿ ನಿಷ್ಪಕ್ಷಪಾತವಾದ ನ್ಯಾಯಾಂಗ ತನಿಖೆ ನಡೆಸಬೇಕು. ಅಕ್ರಮದಲ್ಲಿ ಭಾಗಿಯಾದವರು ಎಷ್ಟೇ ಪ್ರಭಾವಿಗಳಾಗಿದ್ದರೂ ಅವರಿಗೆ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಒತ್ತಾಯಿಸಿದರು. ಎಐಡಿವೈಓ ಜಿಲ್ಲಾಧ್ಯಕ್ಷ ಟಿ.ಆರ್.ಸುನಿಲ್, ಕಾರ್ಯದರ್ಶಿಗಳಾದ ಎಸ್.ಸುಮಾ, ಜಂಟಿ ಕಾರ್ಯದರ್ಶಿ ನೀತುಶ್ರೀ, ಉಪಾಧ್ಯಕ್ಷ ನಿರಂಜನ್, ಸದಸ್ಯರಾದ ಪುರುಷೋತ್ತಮ್, ಪ್ರದೀಪ್, ಲಾವಣ್ಯ, ಮಧುಸೂದನ್, ರಘು ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ತಾಜ್ ಮಹಲ್‌ಗೆ ಸತ್ಯಶೋಧನ ಸಮಿತಿ ರಚನೆ ಅರ್ಜಿ ವಜಾಗೊಳಿಸಿದ ಅಲಾಹಾಬಾದ್ ಹೈಕೋರ್ಟ್

ಲಖನೌ, ಮೇ 12– ತಾಜ್ ಮಹಲ್‌ನಲ್ಲಿ ಮುಚ್ಚಲ್ಪಟ್ಟಿರುವ 22 ಕೊಠಡಿಗಳಿಗೆ ಸಂಬಂಧಿಸಿದಂತೆ ಸತ್ಯಶೋಧನೆ ಸಮಿತಿ ರಚನೆಗೆ ಕೋರಿ ಮನವಿ ಮಾಡಿದ್ದ ಅರ್ಜಿಯನ್ನು ಅಲಹಾಬಾದ್ ಹೈಕೋರ್ಟ್ ವಜಾಗೊಳಿಸಿದೆ. ಅರ್ಜಿ ವಿಚಾರಣೆ ನಡೆಸಿದ ಅಲಹಾಬಾದ್ ನ್ಯಾಯಾಲಯ, "ಈ ವಿಷಯವಾಗಿ ಸತ್ಯಶೋಧನೆ ಸಮಿತಿ ರಚನೆಗೆ ಕೇಳುವುದು ನಿಮ್ಮ ಹಕ್ಕುಗಳ ಅಡಿಯಲ್ಲಿ ಬರುವುದಿಲ್ಲ. ಅದು ಆರ್‌ಟಿಐನ ವ್ಯಾಪ್ತಿಗೂ ಬರುವುದಿಲ್ಲ. ಈ ಅರ್ಜಿಯಿಂದ ನಮಗೆ ಮನವರಿಕೆಯಾಗಿಲ್ಲ ಎಂದು ಹೇಳಿದೆ. "ನಾಳಿನ ದಿನಗಳಲ್ಲಿ ನೀವು ನಮ್ಮ ಚೇಂಬರ್‌ಗಳನ್ನು ನೋಡುವುದಕ್ಕೂ ಅನುಮತಿ ಕೇಳುತ್ತೀರಿ, ದಯಮಾಡಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ ವ್ಯವಸ್ಥೆಯನ್ನು ಅಣಕಿಸಬೇಡಿ" ಎಂದು ವಿಚಾರಣೆ ವೇಳೆ ಹೈಕೋರ್ಟ್ ಅರ್ಜಿದಾರರಿಗೆ ತೀಕ್ಷ್ಣವಾಗಿ ಹೇಳಿದೆ.



ಧಾರ್ಮಿಕ ಸ್ವಾತಂತ್ರ್ಯದ ಕುರಿತು ಹೈಕೋರ್ಟ್, ಸುಪ್ರೀಂಕೋರ್ಟ್ ಆದೇಶವನ್ನು ಅರ್ಜಿದಾರರು ಕೋರ್ಟ್‌ಗೆ ನೀಡಿದ್ದು, ಅರ್ಜಿದಾರರ ಈ ವಾದವನ್ನು ಒಪ್ಪುವುದಿಲ್ಲ ಎಂದು ನ್ಯಾಯಪೀಠ ಹೇಳಿತು. ಈಗ ಅರ್ಜಿದಾರರು ಈಗ ತಿದ್ದುಪಡಿ ಮಾಡಿದ ಅರ್ಜಿ ಸಲ್ಲಿಸುವುದಕ್ಕೆ ಕೋರ್ಟ್‌ಗೆ ಮನವಿ ಮಾಡಿದ್ದಾರೆ. ಬಿಜೆಪಿ ಅಯೋಧ್ಯೆಯ ವಿಭಾಗದ ಮಾಧ್ಯಮ ಉಸ್ತುವಾರಿ ರಂಜೀತ್ ಸಿಂಗ್ ಅವರು ತಾಜ್ ಮಹಲ್‌ನ 22 ಕೊಠಡಿಗಳ ಹಿಂದಿರುವ ಸತ್ಯವನ್ನು ಅರಿಯುವುದಕ್ಕೆ ಸತ್ಯಶೋಧನಾ ಸಮಿತಿ ರಚಿಸಬೇಕೆಂದು ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಕಳೆದ ವಾರ ಸಲ್ಲಿಸಿದ್ದರು.

ಹಿರಿಯ ಪೊಲೀಸ್ ಅಧಿಕಾರಿ ರವೀಂದ್ರನಾಥ್ ವರ್ಗಾವಣೆ ರದ್ದುಗೊಳಿಸಲು ಆಗ್ರಹ

ಮೈಸೂರು, ಮೇ 12(ಆರ್‌ಕೆಬಿ)– ಹಿರಿಯ ಅಧಿಕಾರಿ ರವೀಂದ್ರನಾಥ್ ಅವರು ನಕಲಿ ಜಾತಿ ಪ್ರಮಾಣಪತ್ರ ಪಡೆದಿರುವ ಪ್ರಭಾವಿಗಳ ವಿರುದ್ಧ ಕ್ರಮ ಕೈಗೊಂಡರೆಂಬ ಕಾರಣಕ್ಕಾಗಿ ಅವರ ವರ್ಗಾವಣೆಗೆ ಆದೇಶಿಸಿರುವುದು ನಾಚಿಕೆಗೇಡಿನ ಸಂಗತಿ. ಹೀಗಾಗಿ ಕೂಡಲೇ ಅವರನ್ನು ಮೊದಲಿನ ಸ್ಥಾನಕ್ಕೇ ನಿಯುಕ್ತಿಗೊಳಿಸಬೇಕು ಮತ್ತು ಅವರ ರಾಜೀನಾಮೆ ಪತ್ರ ತಿರಸ್ಕರಿಸಬೇಕು ಎಂದು ಬಿಎಸ್‌ಪಿ ರಾಜ್ಯ ಪ್ರಧಾನ ಕಾರ್ಯದರ್ಶಿಯೂ ಆದ ಮಾಜಿ ಮೇಯರ್ ಪುರುಷೋತ್ತಮ್ ಆಗ್ರಹಿಸಿದರು.



ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸುಳ್ಳು ಜಾತಿ ಪ್ರಮಾಣಪತ್ರ ಪಡೆಯುವುದು ಇತ್ತೀಚಿನ ಸಂಗತಿಯಲ್ಲ ಮೊದಲಿನಿಂದಲೂ ಇದು ನಡೆದಿರುವ ಕಾರಣ ನಿಜವಾದ ಮೀಸಲಾತಿ ಸೌಲಭ್ಯ ಪಡೆಯಬೇಕಾಗಿದ್ದವರು ವಂಚಿತರಾಗುತ್ತಿದ್ದಾರೆ. ಈ ರೀತಿ ರಾಜ್ಯದಲ್ಲಿ 5 ಲಕ್ಷ ಮಂದಿ ಸುಳ್ಳು ಜಾತಿ ಪ್ರಮಾಣಪತ್ರ ಪಡೆದಿರುವ ಅಂದಾಜಿದೆ ಎಂದು ದೂರಿದರು.

ಈ ರೀತಿ ಅಕ್ರಮ ಎಸಗುವವರ ವಿರುದ್ಧ ಕ್ರಮ ಕೈಗೊಳ್ಳುವ ಅಧಿಕಾರಿಗಳಿಗೆ ಕಿರುಕುಳ ನೀಡಲಾಗುತ್ತಿದೆ ಎಂದರೆ, ಇದರಲ್ಲಿ ಜನಪ್ರತಿನಿಧಿಗಳೂ ಶಾಮೀಲಾಗುತ್ತಿರುವ ಶಂಕೆಯಿದೆ. ಜೊತೆಗೆ ಪ್ರಭಾವೀ ಜನಪ್ರತಿನಿಧಿಯೊಬ್ಬರೇ ತಮ್ಮ ಮಕ್ಕಳಿಗೆ ಬೇಡ ಜಂಗಮ ಎಂಬ ಸುಳ್ಳು ಜಾತಿ ಪ್ರಮಾಣ ಪಡೆಯುತ್ತಾರೆಂದರೆ ಯಾರನ್ನು ಪ್ರಶ್ನಿಸಬೇಕು? ಎಂದು ಪ್ರಶ್ನಿಸಿದರು. ಮೀಸಲು ಕ್ಷೇತ್ರಗಳಿಂದ ಹಲವಾರು ಬಾರಿ ಜಯಗಳಿಸುತ್ತಿರುವ ಜನಪ್ರತಿನಿಧಿಗಳು ಈ ಬಗ್ಗೆ ಮೌನವಾಗಿರುವುದು ನಾಚಿಕೇಗೇಡು. ಈ ಎಲ್ಲ ಅಕ್ರಮಗಳ ವಿರುದ್ಧ ಎಸ್‌ಸಿ, ಎಸ್‌ಟಿ ಸಮುದಾಯದವರು ಒಗ್ಗಟ್ಟಿಂದ ಅಂತಹವರನ್ನು ಸೋಲಿಸಬೇಕೆಂದು ಮನವಿ ಮಾಡಿದರು. ಗೋಷ್ಠಿಯಲ್ಲಿ ಬಿಎಸ್‌ಪಿ ಜಿಲ್ಲಾ ಪದಾಧಿಕಾರಿಗಳಾದ ಜಯಶಂಕರ್ ಶ್ಯಾಮ್, ಆದರ್ಶ ರಾಜವಂಶಿ, ಅನಿಲ್ ಪ್ರಸಾದ್, ಪಡುವಾರಹಳ್ಳಿ ಸತೀಶ್ ಇದ್ದರು.

'ತ್ರಿಭುಜ' ಚಿತ್ರ ಸದ್ಯದಲ್ಲೇ ತೆರೆಗೆ

ಮೈಸೂರು, ಮೇ 12(ಆರ್‌ಕೆಬಿ)– ಪತ್ರಕರ್ತ ಎಚ್.ವಿ.ಪುಟ್ಟಸ್ವಾಮಿ ನಿರ್ಮಿಸಿ, ನಿರ್ದೇಶಿಸಿರುವ 'ತ್ರಿಭುಜ' ಚಿತ್ರೀಕರಣ ಪೂರ್ಣಗೊಂಡಿದ್ದು, ಸದ್ಯದಲ್ಲೇ ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಲಿದೆ. ಚಿತ್ರದಲ್ಲಿ 4 ಹಾಡು, ಒಂದು ಹೊಡೆದಾಟದ ದೃಶ್ಯ ಒಳಗೊಂಡಿರುವ ಚಿತ್ರದ ನಾಯಕ ನಟರಾಗಿ ಕ್ರಿಶ್, ರಂಗಾಯಣ ಕಲಾವಿದ ಲಾಲಿಪಾಳ್ಯ ಮಹದೇವು ಇನ್ನಿತರರು ನಟಿಸಿದ್ದಾರೆ.

ಪಿಹೆಚ್.ಡಿ



ಮೈಸೂರು, ಮೇ 12– ಶ್ರುತಿ ರಾಜ್ ಅವರು ಡಾ. ಬಿ.ಕೆ. ತುಳಸಿಮಾಲಾ ಅವರ ಮಾರ್ಗದರ್ಶನದಲ್ಲಿ ಅರ್ಥಶಾಸ್ತ್ರ ವಿಷಯದಲ್ಲಿ ಮಂಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿವಿ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ.

ಮಥುರಾದ ಕೃಷ್ಣ ಜನ್ಮಭೂಮಿ, ಶಾಹಿ ಈದ್ಗಾ ಮಸೀದಿ ವಿವಾದ: 4 ತಿಂಗಳಲ್ಲಿ ವಿಚಾರಣೆ ಪೂರ್ಣಗೊಳಿಸಲು ಸೂಚನೆ


ಲಕ್ನೋ, ಮೇ 12– ಮಥುರಾದ ಶ್ರೀಕೃಷ್ಣ ಜನ್ಮಭೂಮಿ ಶಾಹಿ ಈದ್ಗಾ ಮಸೀದಿ ವಿವಾದ ಪ್ರಕರಣದ ಬಗ್ಗೆ ಅಲಹಾಬಾದ್ ಹೈಕೋರ್ಟ್ ವಿಚಾರಣೆ ನಡೆಸಿ ನಾಲ್ಕು ತಿಂಗಳಲ್ಲಿ ತೀರ್ಪು ನೀಡುವಂತೆ ಮಥುರಾ ಕೋರ್ಟ್‌ಗೆ ಸೂಚಿಸಿದೆ.

ಶಾಹಿ ಈದ್ಗಾ ಮಸೀದಿಯಿರುವ ಭೂಮಿ ಕೃಷ್ಣ ಜನ್ಮಭೂಮಿಗೆ ಸೇರಿದ್ದು, ಮಸೀದಿ ತೆರವು ಮಾಡಬೇಕು ಎಂದು, ಹಿಂದೂ ಆರ್ಮಿಯ ಮನೀಶ್ ಯಾದವ್ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿ ವಿಚಾರಣೆ ವೇಳೆ ಸುನ್ನಿ ವಕ್ಫ್ ಬೋರ್ಡ್ ಸೇರಿ ಇತರೆ ಪಾರ್ಟಿಗಳು ಗೈರಾಗಿದ್ದರು. ಹೀಗಾಗಿ ಇದಕ್ಕೆ ಸಂಬಂಧಿಸಿದ ಎಲ್ಲಾ ಅರ್ಜಿಗಳ ವಿಚಾರಣೆಯನ್ನು ನಾಲ್ಕು ತಿಂಗಳಲ್ಲಿ ನಡೆಸಲು ಮಥುರಾ ಕೋರ್ಟ್‌ಗೆ ಅಲಹಾಬಾದ್ ಹೈಕೋರ್ಟ್ ಸೂಚನೆ ನೀಡಿದೆ.

ವಕೀಲೆ ರಂಜನಾ ಅಗ್ನಿಹೋತ್ರಿ ಮತ್ತು ಇತರ ಆರು ಮಂದಿ ಕಳೆದ ವರ್ಷ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಈ ಪ್ರಕರಣದ ಕುರಿತಾಗಿ ಮೊದಲ ಬಾರಿಗೆ ಅರ್ಜಿ ಸಲ್ಲಿಸಿದ್ದರು. ಸುನ್ನಿ ಸೆಂಟ್ರಲ್ ವಕ್ಫ್ ಬೋರ್ಡ್, ಶಾಹಿ ಈದ್ಗಾ ಮಸೀದಿ, ಶ್ರೀ ಕೃಷ್ಣ ಜನ್ಮಭೂಮಿ ಟ್ರಸ್ಟ್ ಮತ್ತು ಶ್ರೀ ಕೃಷ್ಣ ಜನ್ಮಭೂಮಿ ಸೇವಾ ಸಂಸ್ಥಾನವನ್ನು ಪ್ರಕರಣದಲ್ಲಿ ಪ್ರತಿವಾದಿಗಳನ್ನಾಗಿ ಮಾಡಲಾಗಿದೆ. ಶ್ರೀ ಕೃಷ್ಣ ಜನ್ಮಭೂಮಿಯ 13.37 ಎಕರೆ ಭೂಮಿಯನ್ನು ಬಿಡುಗಡೆ ಮಾಡುವಂತೆ ಮತ್ತು ಜನ್ಮಭೂಮಿಯ ಆವರಣದಲ್ಲಿರುವ ಶಾಹಿ ಈದ್ಗಾ ಮಸೀದಿಯನ್ನು ತೆರವುಗೊಳಿಸುವಂತೆ ಅರ್ಜಿಯಲ್ಲಿ ಮನವಿ ಸಲ್ಲಿಸಲಾಗಿದೆ.

ಟ್ರಸ್ಟ್‌ನ ಭೂಮಿಯಲ್ಲಿ ನಿರ್ಮಿಸಲಾದ ಈದ್ಗಾವನ್ನು ಅಕ್ರಮ ಎಂದು ಘೋಷಿಸಿ ಅದನ್ನು ಕೆಡವಲು ಮತ್ತು ಸಂಪೂರ್ಣ ಭೂಮಿಯನ್ನು ಡಿ ಫ್ಯಾಕ್ಟೋ ಮಾಲೀಕ ಭಗವಾನ್ ಶ್ರೀ ಕೃಷ್ಣ ವಿರಾಜಮಾನರಿಗೆ ಹಸ್ತಾಂತರಿಸುವಂತೆ ಅರ್ಜಿದಾರರು ನ್ಯಾಯಾಲಯಕ್ಕೆ ಮನವಿ ಮಾಡಿದ್ದರು. ನ್ಯಾಯಾಲಯದ ಮೇಲ್ವಿಚಾರಣೆಯಲ್ಲಿ ವಿವಾದಿತ ಸ್ಥಳವನ್ನು ಅಗೆಯುವಂತೆಯೂ ಅರ್ಜಿಯಲ್ಲಿ ಕೋರಲಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

13.05.2022 ಶುಕ್ರವಾರ, ಮಳೆ ನಕ್ಷತ್ರ : ಕೃತಿಕ 11.05.2022 ರಿಂದ 24.05.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ
ತಿಥಿ: ದ್ವಾದಶಿ, ನಕ್ಷತ್ರ: ಹಸ್ತ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಶ್ರೀ ಕೃಷ್ಣ ಸೇವಾ ಸಮಿತಿ ಚಾರಿಟಬಲ್ ಟ್ರಸ್ಟ್ :** ಬ್ರಹ್ಮ ರಥೋತ್ಸವ, ಬೆಳಗ್ಗೆ 9ಕ್ಕೆ ಪ್ರಾಕಾರೋತ್ಸವ, ನಿತ್ಯಹೋಮ, ಸಂಜೆ 6ಕ್ಕೆ ಶಾಂತಿಹೋಮ, ಮಹಾಪೂರ್ಣಾಹುತಿ, ಧ್ವಜಾವರೋಹಣ, ಪುಷ್ಪಯಾಗ, ರಾಷ್ಟ್ರಾಶೀರ್ವಾದ, ಸ್ಥಳ: ಟ್ರಸ್ಟ್ ಆವರಣ, ಗೋಕುಲಂ 3ನೇ ಹಂತ.

■ **ಮೈಸೂರು ಜಿಲ್ಲಾ ಹಾಲು ಒಕ್ಕೂಟ:** ಹಾಲಿನ ಮಾರಾಟ ಕೇಂದ್ರದ ಉದ್ಘಾಟನಾ ಸಮಾರಂಭ, ಉದ್ಘಾಟನೆ: ಶಾಸಕ ಜಿ.ಟಿ.ದೇವೇಗೌಡ, ಅಧ್ಯಕ್ಷತೆ: ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ಅಧ್ಯಕ್ಷ ಜೆ.ಪುಟ್ಟಸ್ವಾಮಿ, ಮುಖ್ಯ ಅತಿಥಿಗಳು: ಪಾಲಿಕೆ ಸದಸ್ಯ ಶರತ್‌ಕುಮಾರ್, ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕ ವಿಜಯ್ ಕುಮಾರ್, ನಿವೃತ್ತ ಆರೋಗ್ಯಾಧಿಕಾರಿ ರಾಮೇಗೌಡ, ಅಪ್ಪಾಜಿ, ನಾಗೇಂದ್ರಯ್ಯ, ಗಣೇಶ್, ಅಶೋಕ್, ಕೂಡ್ಲೂರು ಶ್ರೀಧರಮೂರ್ತಿ, ಸ್ಥಳ: ಆರೋಗ್ಯನಗರ, ರಾಮಕೃಷ್ಣನಗರ 'ಹೆಚ್' ಬ್ಲಾಕ್, ಬೆಳಗ್ಗೆ 9ಕ್ಕೆ.

■ **ಅಖಿಲ ಕರ್ನಾಟಕ ಸಿದ್ದರಾಮಯ್ಯನವರ ಅಭಿಮಾನಿಗಳ ಬ್ರಿಗೇಡ್:** ಉದ್ಘಾಟನಾ ಸಮಾರಂಭ, ಉದ್ಘಾಟನೆ: ಮಾಜಿ ಸಂಸದ ಆರ್.ಧ್ರುವನಾರಾಯಣ್, ಅಧ್ಯಕ್ಷತೆ: ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ, ಮುಖ್ಯ ಅತಿಥಿಗಳು: ವಸತಿ ಜಾಗೃತಿ ಸಮಿತಿ ಮಾಜಿ ಅಧ್ಯಕ್ಷ ಸುನೀಲ್‌ಬೋಸ್, ಮುಖ್ಯ ಅತಿಥಿಗಳು: ಬಿ.ಜೆ. ವಿಜಯಕುಮಾರ್, ಎಸ್.ಸಿ.ಬಸವರಾಜು, ಕೆ.ಮಾರುತಿ, ಹಿನಕಲ್ ಉದಯ್, ಬ್ರಿಗೇಡ್ ರಾಜ್ಯ ಉಪಾಧ್ಯಕ್ಷ ಮಹದೇವು, ಕಾಡನಹಳ್ಳಿ ಸ್ವಾಮಿಗೌಡ, ಸ್ಥಳ: ಜಿಲ್ಲಾ ಪತ್ರಕರ್ತರ ಭವನ, ಬೆಳಗ್ಗೆ 10ಕ್ಕೆ.

■ **ಹಸ್ತಶಿಲ್ಪಿ** : ಸಿಲ್ಕ್ ಇಂಡಿಯಾ–2022, ರೇಷ್ಮೆ ಸೀರೆಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಹೋಟೆಲ್ ಸದರನ್ ಸ್ಟಾರ್, ಬೆಳಗ್ಗೆ 10.30ರಿಂದ.

■ **ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್**: ಬೆಳಗ್ಗೆ 11ಕ್ಕೆ ವಿದ್ಯಾರ್ಥಿ ಸಂಸ್ಕೃತಿ ಚಳವಳಿ–3, ಉದ್ಘಾಟನೆ: ಖ್ಯಾತ ಕೊಳಲು ವಾದಕ ವಿದ್ವಾನ್ ಪ್ರವೀಣ್ ಗೋಡ್ಖಿಂಡಿ, ಮುಖ್ಯ ಅತಿಥಿಗಳು: ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಹಿರಿಯ ಪ್ರಚಾರಕ ಪ.ರಾ.ಕೃಷ್ಣಮೂರ್ತಿ, ಕರಾಮುವಿವಿ ಕುಲಪತಿ ಪ್ರೊ.ವಿದ್ಯಾಶಂಕರ್, ಹಿರಿಯ ರಂಗಕರ್ಮಿ ಸಾಂಬಶಿವ ದಳವಾಯಿ, ರಾಷ್ಟ್ರೀಯ ಕಲಾಮಂಚ್ ಸಂಚಾಲಕ ನಿರಂಜನ್, ದಿಕ್ಸೂಚಿ ಭಾಷಣ: ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ.ವಸಂತಕುಮಾರ್, ಸಂಜೆ 5ಕ್ಕೆ ಪ್ರಮುಖ ಬೀದಿಗಳಲ್ಲಿ ಶೋಭಾಯಾತ್ರೆ, ಮುಖ್ಯ ಅತಿಥಿಗಳು : ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕ್ಷೇತ್ರೀಯ ಸಂಚಾಲಕ ವಿ.ನಾಗರಾಜ್, ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯ ಕುಲಪತಿ ಡಾ.ಬಿ.ನಾಗೇಶ್, ಅಭಾವಿಪ ಸಂಘಟನಾ ಕಾರ್ಯದರ್ಶಿ ಸ್ವಾಮಿ ಮರಳಾಪುರ, ಕಲಾವಿದರ ಮಾಸಾಶನ ಸಮಿತಿ ಅಧ್ಯಕ್ಷ ಪಾಪು ಶ್ರೀನಿವಾಸ್, ಸ್ಥಳ: ರಾಜ್ಯ ಮುಕ್ತ ವಿವಿ ಆವರಣ, ಸಂಜೆ 5ಕ್ಕೆ.

■ **ಮೈಸೂರು ಉತ್ಸವ :** ವಸ್ತುಪ್ರದರ್ಶನ, ಸ್ಥಳ: ಜೆಎಸ್‌ಎಸ್ ಮೈದಾನ, ದೊಡ್ಡಕೆರೆ ಮೈದಾನದ ಪಕ್ಕ, ಸಂಜೆ 6ಕ್ಕೆ

■ **ವ್ಯವಸ್ಥಾಪಕರು :** ಖ್ಯಾತ ಗಾಯಕ ರಾಘವೇಂದ್ರ ರತ್ನಾಕರ್ ಅವರಿಂದ ಡಾ. ರಾಜ್‌ಕುಮಾರ್ ರಸಸಂಜೆ, ಮುಖ್ಯ ಅತಿಥಿಗಳು: ಉದ್ಯಮಿ ಜಗನ್ನಾಥ್ ಶೆಣೈ, ಮುಡಾ ಅಧ್ಯಕ್ಷ ಹೆಚ್.ವಿ. ರಾಜೀವ್, ಹಿರಿಯ ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ವಿಧಾನಪರಿಷತ್ ಸದಸ್ಯ ಹೆಚ್. ವಿಶ್ವನಾಥ್, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಸಂಜೆ 6ಕ್ಕೆ.

■ **ಗಾನಭಾರತೀ :** ಜಿ.ಎಸ್. ಕಮಲ ಸಂಸ್ಮರಣಾ ಸಂಗೀತ ಕಛೇರಿ, ವಿದುಷಿ ಶೃತಿ ರಂಜನಿ ಮತ್ತು ವಿದುಷಿ ಶ್ರೀರಂಜಿನಿ ಅವರಿಂದ ಹಾಡುಗಾರಿಕೆ, ವಿದುಷಿ ಅದಿತಿ ಕೃಷ್ಣಪ್ರಕಾಶ್–ಪಿಟೀಲು, ವಿದ್ವಾನ್ ಕೆ.ಯು. ಜಯಚಂದ್ರರಾವ್–ಮೃದಂಗ, ವಿದ್ವಾನ್ ಶರತ್ ಕೌಶಿಕ್–ಘಟಂ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ.

■ **ಸಂಚಲನ ಮೈಸೂರು :** ಸಂಚಲನ ರಂಗೋತ್ಸವದ ಸಮಾರೋಪ ಸಮಾರಂಭ, ಉಪಸ್ಥಿತರು : ರಾಷ್ಟ್ರೀಯ ನಾಟಕ ಶಾಲೆ ನಿರ್ದೇಶಕರಾದ ವೀಣಾಶರ್ಮಾ, ಹಿರಿಯ ರಂಗಕರ್ಮಿ ಇಂದಿರಾ ನಾಯರ್, ಪ್ರಾಸ್ತಾವಿಕ ನುಡಿ : ಸಂಚಲನ ಅಧ್ಯಕ್ಷ ದೀಪಕ್ ಮೈಸೂರು, ಸಂಚಲನ ರಂಗ ತಂಡದಿಂದ ಪರ್ವತವಾಣಿ ಅವರ ಹಗ್ಗದಕೊನೆ, ಟಿ.ಜಿಲ ರಾಘವ ಅವರ ಪ್ರೇತಗಳು ನಾಟಕ ಪ್ರದರ್ಶನ, ನಿರ್ದೇಶನ : ಪ್ರವೀಣ್ ಬೆಳ್ಳಿ, ದೀಪಕ್ ಮೈಸೂರು, ಸ್ಥಳ:ಕಿರು ರಂಗಮಂದಿರ, ಕಲಾಮಂದಿರದ ಆವರಣ, ಸಂಜೆ 6.30ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಅಮೃತ ಸ್ವಾತಂತ್ರ್ಯ ಮಾಲಿಕೆ 'ಆಧಾರ ಶಿಲೆ' ಮೈಸೂರು ಸುತ್ತಲಿನ ಪ್ರಾಗೈತಿಹಾಸ ತಾಣಗಳ ಪರಿಚಯ– ಡಾ. ಎಸ್.ಜಿ. ರಾಮದಾಸ ರೆಡ್ಡಿ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, ಗಾಯನ– ಎಂ. ರಾಘವೇಂದ್ರ, ಅಮೃತಾ ನಿತಿನ್ ಶಾಸ್ತ್ರಿ, ವ್ಯಾಖ್ಯಾನ– ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್, 9.00 ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ "ಸ್ವಾತಂತ್ರ್ಯ ಚಳವಳಿಯ ಪಯಣ–ಆಕಾಶವಾಣಿಯೊಂದಿಗೆ", 10.00 ಮೈಸೂರು ಎಂ. ನಾಗರಾಜ್–ವಯೋಲಿನ್, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 12.45 ಕಾದಂಬರಿ ವಿಹಾರ, ಪ್ರಸ್ತುತಿ–ಉಮೇಶ್ ಎಸ್.ಎಸ್., 1.20 ಭಾವಗೀತೆ–ಹೆಚ್.ಆರ್.ವಿಜಯ್, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ–ಜಿ.ಕೆ.ರವೀಂದ್ರ ಕುಮಾರ್, 3.00 ಡಾ.ಎಸ್. ವಿಜಯರಾಘವನ್–ವೀಣಾ ವಾದನ, 4.00 ಮಹಿಳಾರಂಗ–ಸಖೀಪದ, 4.30ವೃತ್ತಿ ಮಾರ್ಗದರ್ಶನ, ಆಯುರ್ವೇದ ವೈದ್ಯ ವಿಜ್ಞಾನ ಕ್ಷೇತ್ರದಲ್ಲಿನ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ. ಗಜಾನನ ಹೆಗಡೆ ಅವರೊಂದಿಗೆ ಮಾತುಕತೆ, 6.50 ಕೃಷಿರಂಗ–ಕಿಸಾನ್‌ವಾಣಿ, ತೋಟಗಾರಿಕೆ ಬೆಳೆಗಳ ಕೃಷಿ ಹಾಗೂ ಮಾರುಕಟ್ಟೆಯ ಅನುಭವ ಕುರಿತು ಎಂ.ಎನ್. ಕುಮಾರ್ ಅವರೊಡನೆ ಸಂದರ್ಶನ,7.45 ಈಸಿ ಇಂಗ್ಲೀಷ್–ಕನ್ನಡದ ಮೂಲಕ ಇಂಗ್ಲೀಷ್ ಕಲಿಕೆಯ ಬಾನುಲಿ ಸರಣಿ, ರಚನೆ ಮತ್ತು ಪ್ರಸ್ತುತಿ– ಸಿ.ಕೆ.ವಿಜಯನಾರಸಿಂಹ, ನಿರ್ಮಾಣ–ಎಸ್. ಲಕ್ಷ್ಮೀನಾರಾಯಣ, 9.00 ಕನ್ನಡ ಭಾರತಿ– ಗೀತರೂಪಕ "ಯಕ್ಷ ಭಾವಗೀತ", ರಚನೆ ಮತ್ತು ಪ್ರಸ್ತುತಿ– ಅನಂತ ಪದ್ಮನಾಭ ಫಾಟಕ್, 10.30 ಸವಿನೆನಪು

ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಪದವೀಧರರ ದಿನಾಚರಣೆ

150 ಮಂದಿಗೆ ಎಂಬಿಬಿಎಸ್ ಪದವಿ ಪ್ರದಾನ

9 ಚಿನ್ನದ ಪದಕ, 15 ನಗದು ಬಹುಮಾನ ಪಡೆದ ವಿದ್ಯಾರ್ಥಿಗಳು



ಮೈಸೂರು, ಮೇ 12(ಎಂಕೆ)– ನಗರದ ಬನ್ನಿಮಂಟಪದಲ್ಲಿರುವ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಅಂಗಸಂಸ್ಥೆಯಾದ ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಗುರುವಾರ ನಡೆದ ಪದವೀಧರರ ದಿನಾಚರಣೆಯಲ್ಲಿ 9 ಚಿನ್ನದ ಪದಕ ಹಾಗೂ 15 ನಗದು ಬಹುಮಾನ ಪಡೆದ ವಿದ್ಯಾರ್ಥಿಗಳು ಸೇರಿದಂತೆ 150 ಮಂದಿ ಎಂಬಿಬಿಎಸ್ ಪದವೀಧರರಿಗೆ ಪದವಿ ಪ್ರದಾನ ಮಾಡಲಾಯಿತು.

ಮೈಸೂರಿನ ಸಿದ್ದಾರ್ಥ ಬಡಾವಣೆಯ ಡಾ.ಆರ್.ಶ್ರೇಯಾನ್ಸ್ ಡರ್ಲಾ 4 ಚಿನ್ನದ ಪದಕ ಮತ್ತು 5 ನಗದು ಬಹುಮಾನ ಪಡೆದರೆ, ನವದೆಹಲಿಯ ಡಾ.ಸಂಚಿ ಅಗರ್ವಾಲ್ 1 ಚಿನ್ನದ ಪದಕ ಮತ್ತು 2 ನಗದು ಬಹುಮಾನ ಪಡೆದರು. ಹರಿಯಾಣದ ಡಾ.ಸನಂದನ್ ಮಲ್ಹೋತ್ರಾ 1 ಚಿನ್ನದ ಪದಕ ಮತ್ತು 1 ನಗದು ಬಹುಮಾನ ಪಡೆದರೆ, ತಿರುನೆಲ್ವೇಲಿಯ ಡಾ.ಕಣ್ಮಣಿ, ಹರಿಯಾಣದ ಡಾ.ರೆನೆಸಾ, ಬಿಹಾರದ ಡಾ.ಓರಸ್ ಎರವ್ ತಲಾ 1 ಚಿನ್ನದ ಪದಕ ಪಡೆದರು. ಹಾಗೆಯೇ ನವದೆಹಲಿಯ ಡಾ.ರಿಷಭ್ ಜೈನ್ 3, ಕೇರಳದ ಡಾ.ಸ್ನೇಹ ಸೊಲೊಮನ್ 2, ಪುಣೆಯ ಡಾ.ಲವಿಶಾ ಖಂಡೇಲ್ವಾಲ್ 1 ಹಾಗೂ ನವದೆಹಲಿಯ ಡಾ.ರೋಹನ್ ಖುಬ್ಚಂದಾನಿ 1 ನಗದು ಬಹುಮಾನ ಪಡೆದುಕೊಂಡರು.

ಬಳಿಕ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕೋಲಾರದ ದೇವರಾಜ ಅರಸ್ ವಿಶ್ವವಿದ್ಯಾನಿಲಯದ ಮಾಜಿ ಕುಲಾಧಿಪತಿ ಹಾಗೂ ಬೆಂಗಳೂರಿನ ಶೈಕ್ಷಣಿಕ ವಿಷಯ ಅಭಿವೃದ್ಧಿ ಮತ್ತು ಮೌಲ್ಯ ಗುಣಮಟ್ಟ ಮಾಪನ ಸಂಸ್ಥೆಯ ಮುಖ್ಯಸ್ಥ ಡಾ.ಎಸ್.ಕುಮಾರ್ ಮಾತನಾಡಿ, ವೈದ್ಯಕೀಯ ಶಿಕ್ಷಣ ಮುಗಿಸಿದ ವಿದ್ಯಾರ್ಥಿಗಳು ವೈದ್ಯ ವೃತ್ತಿಯನ್ನಷ್ಟೇ ಅಲ್ಲದೆ 'ಆರೋಗ್ಯ ರಕ್ಷಣೆಯ ಉದ್ಯಮ'ಕ್ಕೆ ಸೇರುತ್ತಾರೆ. ವೈದ್ಯ ವೃತ್ತಿಗೆ ಭಾರೀ ಬೇಡಿಕೆ ಇದ್ದು, ಸದಾ ಜಾಗೃತಿಯಿಂದ ಸತ್ಯದ ಕಡೆ ನಡೆಯಬೇಕು ಎಂದು ತಿಳಿ ಹೇಳಿದರು.

ವೈದ್ಯ ವೃತ್ತಿಯಲ್ಲಿ ಒಳ್ಳೆಯ ಹೆಸರು ಪಡೆಯುವುದು ಅಷ್ಟು ಸಲಭವಲ್ಲ. ಅದಕ್ಕಾಗಿ ಕಠಿಣ ಪರಿಶ್ರಮ ಪಡೆಯಬೇಕಾಗುತ್ತದೆ. ನಿಮ್ಮ ಗುರಿ ದೊಡ್ಡದಾಗಿದ್ದರೆ, ಅಷ್ಟೇ ದೊಡ್ಡ ದೊಡ್ಡ ಸಮಸ್ಯೆಗಳನ್ನು ಎದುರಿಸಲು ಸಿದ್ಧರಾಗಿರಬೇಕು. ಉಳಿಯೇಟು ತಿಂದ ಕಲ್ಲು ಶಿಲೆಯಾಗುವಂತೆ ಸವಾಲುಗಳನ್ನು ಎದುರಿಸಿ ಬೆಳೆಯಬೇಕು. ಈ ನಿಟ್ಟಿನಲ್ಲಿ ಜೆಎಸ್‌ಎಸ್ ಸಂಸ್ಥೆಯು ಉತ್ತಮ ಅಡಿಪಾಯ ಹಾಕಿದ್ದು, ಪಡೆದ ತರಬೇತಿಯನ್ನು ಸರಿಯಾಗಿ ಸದ್ಬಳಕೆ ಮಾಡಿಕೊಳ್ಳುವಂತೆ ಸಲಹೆ ನೀಡಿದರು. ಸಮಾಜದಲ್ಲಿ ಸಂಪತ್ತು, ಜ್ಞಾನ, ಪ್ರೀತಿ ಮತ್ತು ಗೌರವವನ್ನು ಪಡೆಯುವ ಭಾಗ್ಯ ನಮಗಿದೆ. ನಾವು ಕೊಡಲು ಮುಂದಾಗದಿದ್ದರೆ, ನಮ್ಮಲ್ಲಿನ ಎಲ್ಲಾ ಸಂಪತ್ತು, ಜ್ಞಾನ, ಪ್ರೀತಿ ಮತ್ತು ಗೌರವ ಬಳಕೆಯಾಗದ ಸಮುದ್ರದ ನೀರಿನಂತೆ ಆವಿಯಾಗಬಹುದು. ಮಾಡುವ ಪ್ರತಿಯೊಂದು ಕೆಲಸದಲ್ಲಿಯೂ ಸುಧಾರಣೆ ತರುವು ಮೂಲಕ ಅದರ ಗುಣಮಟ್ಟ ಹೆಚ್ಚಿಸಬೇಕು. ಬೇರೆಯವರೊಂದಿಗೆ ಎಂದಿಗೂ ಸ್ಪರ್ಧೆಗಿಳಿಯದೆ, ನಮ್ಮಲ್ಲಿರುವ ನ್ಯೂನತೆಗಳೊಂದಿಗೆ ಸ್ಪರ್ಧಿಸಿ ಗೆಲ್ಲಬೇಕು. ಧೈರ್ಯದಿಂದ ಬಲ ಹೆಚ್ಚಾದಂತೆ ಬೇರೆಯವರೊಂದಿಗೆ ಜೊತೆಯಾದಾಗ ಏಕತೆ ಹೆಚ್ಚಾಗುತ್ತದೆ. ಪರಸ್ಪರ ಪ್ರೀತಿ, ಕಾಳಜಿ ವಹಿಸಿದರೆ ಸಂಬಂಧಗಳು ಗಟ್ಟಿಯಾಗುತ್ತದೆ ಎಂದು ಕಿವಿಮಾತು ಹೇಳಿದರು.

ಪಿಜಿ(ಸ್ನಾತಕೋತ್ತರ ಪದವಿ)ಯಲ್ಲಿ ಜನರಲ್ ಮೆಡಿಸಿನ್ ಅಧ್ಯಯನ ಮಾಡುವ ಗುರಿಯಿದೆ. ನಿರಂತರ ಅಧ್ಯಯನ ಜೊತೆಗೆ ಪೋಷಕರು, ಪ್ರಾಧ್ಯಾಪಕರು, ಕಾಲೇಜು ಸಿಬ್ಬಂದಿಗಳ ಪ್ರೋತ್ಸಾಹದಿಂದ ಎಂಬಿಬಿಎಸ್‌ನಲ್ಲಿ ಉತ್ತಮ ಅಂಕಗಳನ್ನು ಪಡೆಯಲು ಸಾಧ್ಯವಾಗಿದೆ.
- ಡಾ.ಆರ್.ಶ್ರೇಯಾನ್ಸ್ ಡರ್ಲಾ, 4 ಚಿನ್ನ ಹಾಗೂ 5 ನಗದು ಬಹುಮಾನ ಪಡೆದ ವಿದ್ಯಾರ್ಥಿ

ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯ ನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ್‌ಮಠ, ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಕುಲಪತಿ ಡಾ.ಸುರಿಂದರ್ ಸಿಂಗ್, ಕುಲಸಚಿವ ಡಾ.ಬಿ.ಮಂಜುನಾಥ, ಪ್ರಾಂಶುಪಾಲ ಡಾ.ಹೆಚ್.ಬಸವನಗೌಡಪ್ಪ ಉಪ ಪ್ರಾಂಶುಪಾಲರಾದ ಡಾ.ಎಂ.ಎನ್.ಸುಮ, ಅಕಾಡೆಮಿ ನಿರ್ದೇಶಕ ಕುಶಾಲಪ್ಪ ಆಡಳಿತಾಧಿಕಾರಿ ಎಸ್.ಆರ್.ಸತೀಶ್ ಚಂದ್ರ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರಲ್ಲಿ ಐಎಂಎಫ್‌ನ ಪ್ರಥಮ ಡೆಪ್ಯುಟಿ ಎಂಡಿ ಗೀತಾ ಗೋಪಿನಾಥ್ ತಂದೆಯ 85ನೇ ಹುಟ್ಟುಹಬ್ಬದಲ್ಲಿ ಭಾಗಿ



ಮೈಸೂರು, ಮೇ 12(ಆರ್‌ಕೆ)– ಐಎಂಎಫ್‌ನ ಪ್ರಥಮ ಡೆಪ್ಯುಟಿ ಮ್ಯಾನೇಜಿಂಗ್ ಡೈರೆಕ್ಟರ್, ಮೈಸೂರು ಮೂಲದ ಗೀತಾ ಗೋಪಿನಾಥ್ ಅವರು ತಂದೆ ಟಿ.ವಿ.ಗೋಪಿನಾಥ್ ಅವರ 85ನೇ ಹುಟ್ಟುಹಬ್ಬ ಆಚರಣೆಗಾಗಿ ಮೈಸೂರಿಗೆ ಆಗಮಿಸಿದ್ದಾರೆ.

ಬುಧವಾರ ತಂದೆ ಗೋಪಿನಾಥ ಹುಟ್ಟುಹಬ್ಬ ಆಚರಿಸಿಕೊಂಡ ಬಗ್ಗೆ ಕುಟುಂಬದ ಫೋಟೋದೊಂದಿಗೆ ಟ್ವೀಟ್ ಮಾಡಿರುವ ಗೀತಾ ಗೋಪಿನಾಥ್, ತಾಯಿಯೊಂದಿಗೆ ಸೇರಿ ತಂದೆ ಹುಟ್ಟುಹಬ್ಬದಲ್ಲಿ ಪಾಲ್ಗೊಂಡಿದ್ದುದು ಸಂತಸ ತಂದಿದೆ ಎಂದು ಸಂಭ್ರಮಪಟ್ಟಿದ್ದಾರೆ.

ಕುವೆಂಪುನಗರ ವಾಸಿಗಳಾದ ತಂದೆ–ತಾಯಿಯೊಂದಿಗೆ ಸಾಂಪ್ರದಾಯಿಕ ಸೀರೆ ತೊಟ್ಟು ಫೋಟೋ ತೆಗೆಸಿಕೊಂಡಿರುವ ಅಂತಾರಾಷ್ಟ್ರೀಯ ಖ್ಯಾತಿಯ ಆರ್ಥಿಕ ತಜ್ಞೆ ಗೀತಾ ಗೋಪಿನಾಥ್, ಬುಧವಾರ ಚಾಮುಂಡಿಬೆಟ್ಟದ ತಪ್ಪಲಿನ ಅಯ್ಯಪ್ಪ ಸ್ವಾಮಿ ಮತ್ತು ಶ್ರೀ ಕೃಷ್ಣ ದೇವಸ್ಥಾನಕ್ಕೆ ಭೇಟಿ ನೀಡಿದ್ದರು.

ನನ್ನ ಜನ್ಮದಿನಕ್ಕಾಗಿ ಪುತ್ರಿ ಮನೆಗೆ ಬಂದಿದ್ದು, ಬುಧವಾರ ಬೆಳಗ್ಗೆ 6 ಗಂಟೆಗೆ ದೇವಸ್ಥಾನಕ್ಕೆ ಹೋಗಿ ವಿಶೇಷ ಪೂಜೆ ಮಾಡಿಸಿದ್ದೇವೆ. ನಾಳೆ (ಮೇ 13) ಆಕೆ ಯುಎಸ್‌ಗೆ ಹಿಂದಿರುಗುವಳು ಎಂದು ಗೋಪಿನಾಥ್ ಅವರು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಉಸಿರುಗಟ್ಟಿಸಿ ಪತ್ನಿ ಹತ್ಯೆ, ನಂತರ ಪತಿ ಪರಾರಿ

ಎರಡು ದಿನದ ನಂತರ ಪ್ರಕರಣ ಬಯಲು



ಪಿರಿಯಾಪಟ್ಟಣ, ಮೇ 12–ತನ್ನ ಪತ್ನಿಯನ್ನು ಉಸಿರುಗಟ್ಟಿಸಿ ಕೊಲೆ ಮಾಡಿದ ಪತಿರಾಯನೋರ್ವ ಎರಡು ದಿನದ ಬಳಿಕ ಸಂಬಂಧಿಕನಿಗೆ ಕರೆ ಮಾಡಿ, ಪತ್ನಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆಂದು ತಿಳಿಸಿದ ಘಟನೆ ಪಿರಿಯಾಪಟ್ಟಣ ತಾಲೂಕು ಬೂದಿತಿಟ್ಟು ಗ್ರಾಮದಿಂದ ವರದಿಯಾಗಿದೆ.

ಈ ಗ್ರಾಮದ ಸ್ವಾಮಿನಾಯಕ (28), ತನ್ನ ಪತ್ನಿ ಸೌಮ್ಯ (24) ಅವರನ್ನು ಹತ್ಯೆ ಮಾಡಿ ತಲೆಮರೆಸಿಕೊಂಡವನಾಗಿದ್ದಾನೆ.

ವಿವರ: ಸ್ವಾಮಿನಾಯಕ ಪಿರಿಯಾಪಟ್ಟಣ ತಾಲೂಕಿನ ಅಬ್ಬಳತಿ ಗ್ರಾಮದ ರವಿನಾಯಕ ಮತ್ತು ಮಹದೇವಿ ದಂಪತಿ ಪುತ್ರಿ ಸೌಮ್ಯಾಳನ್ನು ಕಳೆದ 7 ವರ್ಷದ ಹಿಂದೆ ಪ್ರೀತಿಸಿ ಮದುವೆಯಾಗಿದ್ದ. ಮದುವೆಯಾದ 6 ವರ್ಷದವರೆಗೆ ಈತ ಪತ್ನಿ ಮನೆಯಲ್ಲೇ ವಾಸವಿದ್ದು, ಈ ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ಕಳೆದ ವರ್ಷ ಸ್ವಾಮಿನಾಯಕ ಪತ್ನಿಯೊಂದಿಗೆ ಬೂದಿತಿಟ್ಟು ಗ್ರಾಮಕ್ಕೆ ತೆರಳಿ, ಅಲ್ಲಿಯೇ ವಾಸವಿದ್ದು, ಆಗಿನಿಂದ ಪತ್ನಿ ಮೇಲೆ ಸಂಶಯ ಪಟ್ಟು ಪದೇಪದೆ ಗಲಾಟೆ ಮಾಡುತ್ತಿದ್ದನಂತೆ. ಮೇ 8ರಂದು ಸೌಮ್ಯಾಳ ತಾಯಿ ಮಹದೇವಿ ಮಗಳ ಮನೆಗೆ ಹೋಗಿದ್ದು, ಆಗಲೂ ಕೂಡ ಸ್ವಾಮಿನಾಯಕ ಪತ್ನಿ ಮೇಲೆ ಸಂಶಯ ವ್ಯಕ್ತಪಡಿಸಿ ಹಲ್ಲೆ ನಡೆಸಿದ್ದಾರೆ. ಆಗ ಮಹದೇವಿ ಅಳಿಯ ಮತ್ತು ಮಗಳನ್ನು ಸಮಾಧಾನಪಡಿಸಿ ಸ್ವಗ್ರಾಮಕ್ಕೆ ತೆರಳಿದ್ದಾರೆ.

ಮೇ 10ರಂದು ಸೌಮ್ಯಾಳ ದೊಡ್ಡಮ್ಮನ ಮಗ ಕಾರ್ತಿಕ್ ಎಂಬಾತನ ಮೊಬೈಲ್‌ಗೆ ಕರೆ ಮಾಡಿದ ಸ್ವಾಮಿನಾಯಕ ಎರಡು ದಿನದ ಹಿಂದೆ ಸೌಮ್ಯ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಶವದ ವಾಸನೆ ಬರುತ್ತಿದೆ. ಹೋಗಿ ನೋಡು ಎಂದಿದ್ದಾನೆ. ಈ ವಿಷಯ ತಿಳಿದು ಬೂದಿತಿಟ್ಟು ಗ್ರಾಮಕ್ಕೆ ತೆರಳಿ ನೋಡಿದಾಗ ಸೌಮ್ಯ ಹತ್ಯೆಯಾಗಿರುವುದು ತಿಳಿಯಿತು ಎಂದು ಸೌಮ್ಯ ತಾಯಿ ಮಹದೇವಿ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಪಿರಿಯಾಪಟ್ಟಣ ಠಾಣೆ ಪೊಲೀಸರು, ತಲೆಮರೆಸಿಕೊಂಡಿರುವ ಸ್ವಾಮಿನಾಯಕನಿಗಾಗಿ ಹುಡುಕಾಟ ನಡೆಸಿದ್ದಾರೆ.

ಗಿರಿಯಾಬೋವಿ ಪಾಳ್ಯದಲ್ಲಿನ ಭೂ ವಿವಾದ

ಎರಡು ಗುಂಪಿನ ನಡುವೆ ಕಾದಾಟ: ನಾಲ್ವರ ಬಂಧನ

ಮೈಸೂರು, ಮೇ 12(ಆರ್‌ಕೆ)–ಭೂಮಿ ವಿಚಾರದಲ್ಲಿ ಎರಡು ಗುಂಪುಗಳ ನಡುವಿನ ಜಗಳದಲ್ಲಿ ಮೂವರು ಗಾಯಗೊಂಡಿದ್ದು, ಹಲ್ಲೆ ನಡೆಸಿದ ನಾಲ್ವರನ್ನು ನಜರ್‌ಬಾದ್ ಠಾಣೆ ಪೊಲೀಸರು ಬಂಧಿಸಿದ್ದಾರೆ. ಶಿವಕುಮಾರ್, ಇಸ್ಮಾಯಿಲ್, ಭಾಗ್ಯ ಹಾಗೂ ಗುಂಡ ಅಲಿಯಾಸ್ ಪದ್ಮನಾಭ ಬಂಧಿತ ಹಲ್ಲೆ ಆರೋಪಿಗಳಾಗಿದ್ದು, ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಗಲಾಟೆ ವೇಳೆ ಪ್ರದೀಪ್, ಕಿರಣ್ ಸೇರಿದಂತೆ ಮೂವರು ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು, ಬಿಡುಗಡೆಯಾಗಿದ್ದಾರೆ.

ಸಿದ್ಧಾರ್ಥನಗರ ಬಳಿ, ಬನ್ನೂರು ರಸ್ತೆಯಲ್ಲಿನ ಹೊಸ ಜಿಲ್ಲಾ ಕಚೇರಿಗಳ ಸಮುಚ್ಛಯದ ಪಕ್ಕದಲ್ಲಿರುವ ಗಿರಿಯಾಬೋವಿ ಪಾಳ್ಯ ಗ್ರಾಮದ ಸರ್ವೆ ನಂ.191/1ರ ಜಾಗದ ಮಾಲೀಕತ್ವ ಸಂಬಂಧ ಉಂಟಾಗಿದ್ದ ವಿವಾದದಲ್ಲಿ ಮೇ 7ರಂದು ಫಲಕ ಅಳವಡಿಸಲು ಒಂದು ಗುಂಪು ಮುಂದಾದಾಗ ಮತ್ತೊಂದು ಗುಂಪು ತಡೆಯಲೆತ್ನಿಸಿದ್ದರಿಂದ ಮಾತಿಗೆ ಮಾತು ಬೆಳೆದು, ಜಗಳ ನಡೆದಿದೆ.

ಘರ್ಷಣೆಯಲ್ಲಿ ಮೂವರ ಮೇಲೆ ಹಲ್ಲೆ ನಡೆಸಿ ನಾಲ್ವರು ತಲೆಮರೆಸಿಕೊಂಡಿದ್ದರು. ಪ್ರಕರಣ ದಾಖಲಿಸಿಕೊಂಡಿದ್ದ ನಜರ್‌ಬಾದ್ ಠಾಣೆ ಇನ್ಸ್‌ಪೆಕ್ಟರ್ ಜಿ.ಎನ್.ಶ್ರೀಕಾಂತ್, ಬುಧವಾರ ಆರೋಪಿಗಳನ್ನು ಬಂಧಿಸಿ ವಿಚಾರಣೆ ನಡೆಸಿದ ನಂತರ ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗಿ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಹಾಸನದಲ್ಲಿ ಆಟೋ ಚಾಲಕನ ಹತ್ಯೆ

ಹಾಸನ, ಮೇ 12– ಆಟೋ ಚಾಲಕನೊಬ್ಬನ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿ ಹತ್ಯೆಗೈದ ಘಟನೆ ಹಾಸನ ಹೊರವಲಯದ ಚನ್ನಪಟ್ಟಣ ಹೊಸ ಬಸ್ ನಿಲ್ದಾಣದ ಬಳಿ ನಡೆದಿದೆ. ಮೂಲತಃ ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲೂಕು ಗೋರಸಮುದ್ರ ನಿವಾಸಿಯಾಗಿದ್ದು, ಹಾಸನದ ಯುವತಿಯನ್ನು ವಿವಾಹವಾಗಿದ್ದ ಗಿರೀಶ್ (29) ಹತ್ಯೆಗೀಡಾದವನಾಗಿದ್ದು, ಈತನನ್ನು ಲಗ್ಗೆರೆ ವಾಸು ಎಂಬಾತ ಹತ್ಯೆ ಮಾಡಿರಬಹುದೆಂದು ಶಂಕಿಸಲಾಗಿದೆ.

ಹಾಸನದ ಸುಧಾ ಎಂಬುವರು 18 ವರ್ಷದ ಹಿಂದೆ ಚಂದ್ರಶೇಖರ್ ಎಂಬುವರನ್ನು ವಿವಾಹವಾಗಿದ್ದು, ಅನಾರೋಗ್ಯದಿಂದ ಚಂದ್ರಶೇಖರ್ ಮೃತಪಟ್ಟ ನಂತರ ಬೆಂಗಳೂರಿನ ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುತ್ತಿದ್ದಾಗ ಗಿರೀಶ್‌ನನ್ನು ಪ್ರೀತಿಸಿ ಮನೆಯವರ ಒಪ್ಪಿಗೆಯೊಂದಿಗೆ ವಿವಾಹವಾಗಿ ನಂತರ ಗಿರೀಶ್ ಮತ್ತು ಸುಧಾ ಹಾಸನದ ಬೇರೆ ಬೇರೆ ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುತ್ತಿದ್ದರು. ಬಿಡುವಿನ ವೇಳೆ ಗಿರೀಶ್ ಆಟೋ ಚಾಲನೆ ಮಾಡುತ್ತಿದ್ದ.

ತನಗೆ ವಿನಾಕಾರಣ ಲಗ್ಗೆರೆ ವಾಸು ಎಂಬಾತ ತೊಂದರೆ ನೀಡುತ್ತಿದ್ದಾನೆ ಎಂದು ಗಿರೀಶ್ ತನ್ನ ಪತ್ನಿ ಜೊತೆ ಹೇಳಿಕೊಂಡಿದ್ದ. ಮೇ 10 ರಂದು ಮಧ್ಯಾಹ್ನ ಗಾರ್ಮೆಂಟ್ಸ್ ಕೆಲಸ ಮುಗಿದ ನಂತರ ಸಂಜೆ 5.30ರಲ್ಲಿ ಆಟೋ ಚಾಲನೆ ಮಾಡಿಕೊಂಡು ಗಿರೀಶ್ ಹೋಗಿದ್ದು, ರಾತ್ರಿ 9 ಗಂಟೆಯಾದರೂ ಆತ ಮನೆಗೆ ಬಾರದಿದ್ದಾಗ ಮೊಬೈಲ್‌ಗೆ ಕರೆ ಮಾಡಿದ್ದಾಗಿಯೂ ಕರೆಯನ್ನು ಪತಿ ಸ್ವೀಕರಿಸಿದರೂ ತನ್ನೊಂದಿಗೆ ಮಾತನಾಡಿಲ್ಲ, ಬದಲಾಗಿ ಯಾರೊಂದಿಗೊ 'ನನ್ನನ್ನು ಹೊಡೆಯಬೇಡಿ ಬಿಟ್ಟುಬಿಡಿ, ನನ್ನ ಹೆಂಡತಿ ತಾಳಿ ಉಳಿಸಿ. ನಾನು ಎಲ್ಲಾದರೂ ಹೋಗಿ ಬದುಕುತ್ತೇನೆ' ಎಂದು ಗೋಗರೆಯುತ್ತಿರುವುದು ಕೇಳಿಸಿತು. ಆಗ ಗಾಬರಿಗೊಂಡು ಸಂಬಂಧಿಕರೊಡಗೂಡಿ ಹುಡುಕಾಡಿದರೂ ಆತ ಸಿಗಲಿಲ್ಲ.

ಮರುದಿನ ಬೆಳಗ್ಗೆ ಹಾಸನ ಹೊರವಲಯದ ಚನ್ನಪಟ್ಟಣ ಹೊಸ ಬಸ್‌ನಿಲ್ದಾಣದಲ್ಲಿ ಯಾರೋ ಕೊಲೆಯಾಗಿದ್ದಾರೆ ಎಂದ ಹೋಗಿ ನೋಡಿದಾಗ ಪತಿ ಗಿರೀಶ್ ತನ್ನ ಆಟೋದಲ್ಲಿ (ಕೆಎ06 ಸಿ2592) ಕೊಲೆಯಾಗಿ ಬಿದ್ದಿದ್ದ ಎಂದು ಸುಧಾ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಹಾಸನ ಎಕ್ಸ್‌ಟೆನ್ಷನ್ ಠಾಣೆ ಪೊಲೀಸರು ಶಂಕಿತ ಲಗ್ಗೆರೆ ವಾಸುಗಾಗಿ ಹುಡುಕಾಟ ನಡೆಸಿದ್ದಾರೆ.

ಪತ್ನಿ ಬೇಕೆಂದು ಬಂದವನ ಆಕೆ ಸಂಬಂಧಿಗಳೇ ಕೊಂದರು!

ಕೊಳ್ಳೇಗಾಲ, ಮೇ 12– ಮುನಿಸಿಕೊಂಡು ತವರು ಸೇರಿದ್ದ ಪತ್ನಿಯನ್ನು ತನ್ನೊಂದಿಗೆ ಕಳುಹಿಸಿಕೊಡಬೇಕೆಂದು ಗಲಾಟೆ ಮಾಡಿದ ಕಾರಣಕ್ಕಾಗಿ ಕ್ವಾರೆ ಕೂಲಿ ಕಾರ್ಮಿಕನನ್ನು ಆತನ ಪತ್ನಿಯ ಸಂಬಂಧಿಕರು ತಲೆ ಮೇಲೆ ಕಲ್ಲು ಎತ್ತಿ ಹಾಕಿ ಹತ್ಯೆ ಮಾಡಿದ ಘಟನೆ ಕೊಳ್ಳೇಗಾಲ ತಾಲೂಕು ಪಾಸ್ಕಲ್ ನಗರದಲ್ಲಿ ನಡೆದಿದೆ.

ಚಾಮರಾಜನಗರದ ಕಲ್ಲು ಕ್ವಾರೆಯಲ್ಲಿ ಕಾರ್ಮಿಕನಾಗಿದ್ದ ಅಂಥೋಣಿರಾಜ್ ಹತ್ಯೆಯಾದವನಾಗಿದ್ದು, ಈತನನ್ನು ಪತ್ನಿಯ ತಂದೆ ಜೂಲಿಯನ್‌ರಾಜ್ ಅಲಿಯಾಸ್ ಅಯ್ಯಪ್ಪ, ತಾಯಿ ಸೆಲ್ಲ, ಜೂಲಿಯನ್ ರಾಜ್ ಅಕ್ಕ ವಿಕ್ಟೋರಿಯಾ ಹತ್ಯೆ ಮಾಡಿದ್ದಾರೆ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಲಾಗಿದೆ.

ವಿವರ: ಹತ್ಯೆಗೀಡಾದ ಅಂಥೋಣಿರಾಜ್ ಕಳೆದ ಮೂರು ವರ್ಷದ ಹಿಂದೆ ಜೂಲಿಯನ್‌ರಾಜ್‌ವಿನ ಮಗಳು ಜಾನ್ಸಿಯನ್ನು ವಿವಾಹವಾಗಿದ್ದು, ಇತ್ತೀಚೆಗೆ ಇವರಿಬ್ಬರ ನಡುವೆ ಗಲಾಟೆ ನಡೆದು ಜಾನ್ಸಿ ತವರು ಮನೆ ಸೇರಿಕೊಂಡಿದ್ದಳು. ತನ್ನ ಪತ್ನಿಯನ್ನು ಮನೆಗೆ ಕಳುಹಿಸಿಕೊಡುವಂತೆ ಪದೇ ಪದೆ ಅಂಥೋಣಿರಾಜ್ ತನ್ನ ಮಾವನ ಮನೆಯವರ ಜೊತೆ ಗಲಾಟೆ ಮಾಡುತ್ತಿದ್ದ ಎಂದು ಹೇಳಲಾಗಿದೆ.

ಮೇ 10 ರಂದು ಜೂಲಿಯನ್‌ರಾಜ್ ಮನೆಯಲ್ಲಿ ತಲೆ ಮೇಲೆ ಕಲ್ಲು ಎತ್ತಿಹಾಕಿ ಅಂಥೋಣಿರಾಜ್‌ನನ್ನು ಹತ್ಯೆ ಮಾಡಲಾಗಿದೆ. ಶವದ ಪಕ್ಕದಲ್ಲಿ ಸೈಜ್‌ಕಲ್ಲು ಬಿದ್ದಿದ್ದು, ಅಂದು ತಮ್ಮ ಮನೆಗೆ ಬಂದಿದ್ದ ಸಹೋದರ ಅಂಥೋಣಿರಾಜ್ ಮದ್ಯಪಾನ ಮಾಡಿದ್ದ. ಪಾನಮತ್ತನಾಗಿ ಮಾವನಮನೆಯಲ್ಲಿ ಮಲಗಿದ್ದಾಗ ಆತನ ತಲೆ ಮೇಲೆ ಸೆಲ್ಲ ಮತ್ತು ವಿಕ್ಟೋರಿಯಾ ಸಹಕಾರದೊಂದಿಗೆ ಜೂಲಿಯನ್ ರಾಜ್ ಕಲ್ಲು ಎತ್ತಿಹಾಕಿ ಕೊಲೆ ಮಾಡಿದ್ದಾರೆ. ಕೊಲೆಯ ನಂತರ ಜೂಲಿಯನ್ ರಾಜ್ ಮನೆಯಿಂದ ಹೊರಗೆ ಬಂದು ಅಳಿಯನನ್ನು ಕೊಂದಿದ್ದೇನೆ ಎಂದು ಹೇಳಿಕೊಂಡು ತಿರುಗುತ್ತಿದ್ದ ಎಂದು ಹತ್ಯೆಗೀಡಾದ ಅಂಥೋಣಿರಾಜ್ ಸಹೋದರಿ ಸುಮಪ್ರಿಯ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಕೊಳ್ಳೇಗಾಲ ಗ್ರಾಮಾಂತರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಜೂಲಿಯನ್‌ರಾಜ್‌ನನ್ನು ಬಂಧಿಸಿ ತನಿಖೆ ಮುಂದುವರೆಸಿದ್ದಾರೆ.

ಮನೆ ಮುಂದೆ ನಿಲ್ಲಿಸಿದ್ದ ಸ್ಕೂಟರ್ ಕಳವು

ಮೈಸೂರು, ಮೇ 12–ಮನೆ ಮುಂದೆ ನಿಲ್ಲಿಸಿದ್ದ ಸ್ಕೂಟರ್ ಕಳವಾಗಿರುವ ಬಗ್ಗೆ ಮೈಸೂರಿನ ಹಿನಕಲ್ ಮುಖ್ಯ ರಸ್ತೆಯಿಂದ ವರದಿಯಾಗಿದೆ. ಅಲ್ಲಿನ ಹೋಟೆಲ್‌ವೊಂದರ ಕೆಲಸಗಾರ ಹೆಚ್.ಎಲ್.ರವಿಶಂಕರ್ ಮೇ 6ರಂದು ರಾತ್ರಿ ತನ್ನ ಮನೆ ಮುಂದೆ ನಿಲ್ಲಿಸಿದ್ದ ಸ್ಕೂಟರ್ (ಕೆಎ 09 ಹೆಚ್.ಎಲ್ 5446) ಮರುದಿನ ಬೆಳಗ್ಗೆ ನೋಡಿದಾಗ ಕಳವಾಗಿರುವುದು ಗೊತ್ತಾಯಿತು ಎಂದು ಅವರು ಮೇ 10ರಂದು ವಿಜಯನಗರ ಠಾಣೆಗೆ ದೂರು ಸಲ್ಲಿಸಿದ್ದಾರೆ.

ಮನೆಗೆ ನುಗ್ಗಿ ಲ್ಯಾಪ್‌ಟಾಪ್ ಕಳವು

ಮೈಸೂರು, ಮೇ 12–ಇಂಜಿನಿಯರಿಂಗ್ ವಿದ್ಯಾರ್ಥಿಗಳು ವಾಸ ಮಾಡುತ್ತಿದ್ದ ಮನೆಗೆ ನುಗ್ಗಿ ಎರಡು ಲ್ಯಾಪ್‌ಟಾಪ್‌ಗಳನ್ನು ಕಳವು ಮಾಡಿರುವ ಘಟನೆ ಮೈಸೂರಿನ ವಿಜಯನಗರ 3ನೇ ಹಂತದ 'ಇ' ಬ್ಲಾಕ್ 23ನೇ ಅಡ್ಡ ರಸ್ತೆಯಲ್ಲಿ ನಡೆದಿದೆ.

ಜೆಎಸ್‌ಎಸ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ಒಡಿಸ್ಸಾ ಮತ್ತು ಮಣಿಪುರ ಮೂಲದ ವಿದ್ಯಾರ್ಥಿಗಳಾದ ಔರಾದೀಪ್ತ ದಾಸ್ ಮತ್ತು ಚೋಗ್ರಾಮ್ ಬಾಚಿಂಗ್ಲೆಂಟ್ ತಾವು ವಾಸ ಮಾಡುತ್ತಿದ್ದ ಮನೆಯ ಬೆಡ್ ರೂಂನಲ್ಲಿರುವ ಟೇಬಲ್ ಮೇಲೆ ಮೇ 7ರಂದು ಬೆಳಗ್ಗೆ 7.30ರಲ್ಲಿ ಎರಡು ಲ್ಯಾಪ್‌ಟಾಪ್‌ಗಳನ್ನಿಟ್ಟು, ಮನೆಯ ಬಾಗಿಲು ಹಾಕದೇ ಮಲಗಿ ಬಿಟ್ಟಿದ್ದಾರೆ. 9.30ರ ಸುಮಾರಿಗೆ ಎದ್ದು ನೋಡಿದಾಗ ಲ್ಯಾಪ್‌ಟಾಪ್‌ಗಳು ಕಳವಾಗಿರುವುದು ಗೊತ್ತಾಗಿದೆ. ವಿಜಯನಗರ ಠಾಣೆಗೆ ಮೇ 10ರಂದು ದೂರು ನೀಡಲಾಗಿದೆ.

ಬಾರ್ ಮುಂದೆ ಮಲಗಿದ್ದ ಪಾನಮತ್ತ ಹೋಟೆಲ್ ಮಾಲೀಕನ ಸರ, ಮೊಬೈಲ್ ಕಳವು

ಮೈಸೂರು, ಮೇ 12–ಪಾನಮತ್ತನಾಗಿ ಬಾರ್ ಮುಂದೆ ಮಲಗಿದ್ದ ಮಾಂಸಾಹಾರಿ ಹೋಟೆಲ್ ಮಾಲೀಕನಿಂದ ಚಿನ್ನದ ಸರ ಮತ್ತು ಮೊಬೈಲ್ ಕಳವು ಮಾಡಿರುವ ಬಗ್ಗೆ ತಡವಾಗಿ ವರದಿಯಾಗಿದೆ.

ಮೈಸೂರಿನ ಕೆ.ಆರ್.ಆಸ್ಪತ್ರೆ ರಸ್ತೆಯಲ್ಲಿರುವ ಚಾಮುಂಡೇಶ್ವರಿ ಮಿಲಿಟರಿ ಹೋಟೆಲ್ ಮಾಲೀಕ ಎಂ.ಶಿವಕುಮಾರ್ ಎಂಬಾತನೇ ಚಿನ್ನದ ಸರ ಮತ್ತು ಮೊಬೈಲ್ ಕಳೆದುಕೊಂಡವರಾಗಿದ್ದು, ಇವರು ಕಳೆದ ಏ.21ರಂದು ರಾತ್ರಿ ಸಂಗಂ ಚಿತ್ರಮಂದಿರದಲ್ಲಿ ಕೆಜಿಎಫ್–2 ಚಿತ್ರ ವೀಕ್ಷಿಸಿದ ನಂತರ ರಾತ್ರಿ 11 ಗಂಟೆಗೆ ಸಂಗಂ ಚಿತ್ರಮಂದಿರದ ಬಳಿ ಇರುವ ಎಸ್.ಆರ್.ಬಾರ್‌ನಲ್ಲಿ ಕುಡಿದಿದ್ದಾರೆ. ಬಾರ್ ಸಿಬ್ಬಂದಿ ಬಾಗಿಲು ಹಾಕಬೇಕು ಎಂದಿದ್ದರಿಂದ ಮತ್ತೆ ಒಂದು ಬಿಯರ್ ಬಾಟಲ್ ತೆಗೆದುಕೊಂಡು ಬಾರ್ ಪಕ್ಕದಲ್ಲೇ ಕುಳಿತು ಕುಡಿದು, ಅಲ್ಲೇ ಮಲಗಿದ್ದಾರೆ. ನಂತರ ಅವರ ಸ್ನೇಹಿತರಾದ ವಿಜಯ್ ಮತ್ತು ವಿನೋದ್ ಎಂಬುವರು ಅವರನ್ನು ಮನೆಗೆ ಕರೆದೊಯ್ದು ಬಿಟ್ಟಿದ್ದಾರೆ. ಮರುದಿನ ಬೆಳಗ್ಗೆ ನೋಡಿದಾಗ ಅವರ ಕತ್ತಿನಲ್ಲಿದ್ದ 23 ಗ್ರಾಂ ತೂಕದ ಚಿನ್ನದ ಸರ ಮತ್ತು ಜೇಬಿನಲ್ಲಿದ್ದ ಮೊಬೈಲ್ ಕಳುವಾಗಿರುವುದು ಗೊತ್ತಾಗಿದೆ.

ಈ ಸಂಬಂಧ ಶಿವಕುಮಾರ್ ಮೇ 9ರಂದು ಪೊಲೀಸರಿಗೆ ದೂರು ಸಲ್ಲಿಸಿದ್ದು, ಪ್ರಕರಣ ದಾಖಲಿಸಿಕೊಂಡಿರುವ ಲಷ್ಕರ್ ಠಾಣೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಮನು : "ಕಲ್ಲಿನಿಂದ ಜಜ್ಜಿದರೂ ನನ್ನ ಹೆಂಡತಿ ಮಾಡಿದ ಉಂಡೆಯನ್ನು ಒಡೆಯಲು ಆಗುತ್ತಿಲ್ಲ."

ಗುಂಡ : "ಹಾಗಾದರೆ ನನ್ನ ಹೆಂಡತಿ ಮಾಡಿದ ಉಂಡೆಯಿಂದ ಅದನ್ನು ಜಜ್ಜು!!"

ಮೈಸೂರು ಮಿತ್ರ

ಶುಕ್ರವಾರ, 13 ಮೇ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ನಿರುಪಯೋಗಿಯಾದ ಯೋಚನೆ ಕೈಬಿಟ್ಟರೆ ನಿರುಪಯೋಗಿಯಾದ ಕೆಲಸ ತನ್ನಷ್ಟಕ್ಕೆ ತಾನೆ ನಿಂತು ಹೋಗುವುದು. – ಅರೇಲಿಯಸ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಅದೃಷ್ಟ ಬೆರಳನ್ನು ತೋರಿಸಿದಾಗ ಹಸ್ತವನ್ನೇ ಹಿಡಿಯಬೇಕು

ನಿಮ್ಮ ಪತ್ರಗಳು

ಮಹದೇವಪುರ–ರಮ್ಮನಹಳ್ಳಿ ಮುಖ್ಯ ರಸ್ತೆಯಲ್ಲಿ ನಾಯಿಕೊಡೆಗಳಂತೆ ತಲೆ ಎತ್ತಿರುವ ಸಣ್ಣ ಸಣ್ಣ ಅಂಗಡಿಗಳು

ಮಾನ್ಯರೆ,

ಮಹದೇವಪುರ–ರಮ್ಮನಹಳ್ಳಿ ಮುಖ್ಯ ರಸ್ತೆಯ ಎರಡೂ ಬದಿಗಳಲ್ಲಿ ಟೀ ಅಂಗಡಿಗಳು ಸೇರಿದಂತೆ ಇನ್ನಿತರ ಸಣ್ಣ ಸಣ್ಣ ಅಂಗಡಿಗಳು ನಾಯಿಕೊಡೆಗಳಂತೆ ತಲೆ ಎತ್ತಿವೆ. ಇದರಿಂದ ವಾಹನ ಸವಾರರು ಮತ್ತು ರಸ್ತೆ ಬಳಕೆದಾರರಿಗೆ ತೀವ್ರ ತೊಂದರೆಯಾಗಿದೆ.

ರಸ್ತೆ ಬದಿ ಅಂಗಡಿ ವ್ಯಾಪಾರಿಗಳು ಮೊದಲು ಟೆಂಟ್‌ಗಳನ್ನು ಹಾಕಿಕೊಳ್ಳುತ್ತಾರೆ. ಬಳಿಕ ಅವುಗಳನ್ನು ನಿಧಾನವಾಗಿ ಶಾಶ್ವತ ಅಂಗಡಿಗಳಾಗಿ ಪರಿವರ್ತಿಸುತ್ತಾರೆ.

ಇಂತಹ ವ್ಯಾಪಾರಿಗಳು ಫುಟ್‌ಪಾತ್ ಅತಿಕ್ರಮಣ ಮಾಡಿಕೊಂಡು ಅಂಗಡಿಗಳನ್ನು ತೆರೆದಿರುವುದರಿಂದ ಪಾದಚಾರಿ ಮಾರ್ಗವಿಲ್ಲದೆ ಸಾರ್ವಜನಿಕರು ತಿರುಗಾಡಲು ಭಯ ಪಡುವಂತಾಗಿದೆ. ಬೆಳಗ್ಗೆ ಮತ್ತು ಸಂಜೆ ವೇಳೆ ಭಾರೀ ವಾಹನ ದಟ್ಟಣೆ ಇರುವಾಗ ಅನಾಹುತಗಳಿಗೆ ಕಾರಣವಾಗುವ ಸಾಧ್ಯತೆಯೂ ಇದೆ.

ಫಾಸ್ಟ್‌ಫುಡ್ ಅಂಗಡಿಗಳು, ಬೈಕ್ ಗ್ಯಾರೇಜುಗಳು, ಪಂಕ್ಚರ್ ಅಂಗಡಿಗಳು ಸೇರಿದಂತೆ ಇನ್ನಿತರ ಅಂಗಡಿಗಳು ಪಾದಚಾರಿ ಮಾರ್ಗದಲ್ಲಿ ತಲೆ ಎತ್ತಿವೆ. ಈ ರಸ್ತೆಯಲ್ಲಿ ದ್ವಿಚಕ್ರ, ನಾಲ್ಕು ಚಕ್ರದ ಮತ್ತು ಇನ್ನಿತರೆ ವಾಹನಗಳನ್ನು ಫಾಸ್ಟ್ ಫುಡ್ ಅಂಗಡಿಗಳ ಮುಂದೆ ನಿಲ್ಲಿಸುತ್ತಾರೆ. ಇದರಿಂದ ರಸ್ತೆ ಇಕ್ಕಟ್ಟಾಗಿ ಅಪಘಾತಗಳು ಸಂಭವಿಸುವ ಸಾಧ್ಯತೆ ಹೆಚ್ಚು.

ಮೈಸೂರು ಮಹಾನಗರ ಪಾಲಿಕೆ ಅಧಿಕಾರಿಗಳು ಇದನ್ನು ಗಂಭೀರವಾಗಿ ಪರಿಗಣಿಸಿ ಆದಷ್ಟು ಬೇಗ ಈ ಸಮಸ್ಯೆಗೆ ಶಾಶ್ವತ ಪರಿಹಾರವನ್ನು ಕಂಡುಹಿಡಿದು ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ತೆರಿಗೆ ಪಾವತಿದಾರರ ಪರವಾಗಿ ಮನವಿ ಮಾಡುತ್ತೇನೆ.

–ಲೈಲಾ ಬಾಬಿ, ಸಾತಗಳ್ಳಿ, ಮೈಸೂರು.

ರಾಜ್ಯ ಸರ್ಕಾರಕ್ಕೆ ಇದೊಂದು ಕಪ್ಪು ಚುಕ್ಕೆ.!?

ಮಾನ್ಯರೆ,

ಇದೊಂದು ನಿಜಕ್ಕೂ ದುರದೃಷ್ಟಕರ ಬೆಳವಣಿಗೆ. 2021ರ ಅಕ್ಟೋಬರ್‌ನಲ್ಲಿ 545 ಪಿಎಸ್‌ಐ ನೇಮಕಾತಿಗಾಗಿ ರಾಜ್ಯದಲ್ಲಿ 92 ಪರೀಕ್ಷಾ ಕೇಂದ್ರಗಳಲ್ಲಿ ನಡೆದ ಲಿಖಿತ ಪರೀಕ್ಷೆಯಲ್ಲಿ ಕೆಲವು ಅಕ್ರಮ ನಡೆದಿದೆ ಎಂಬುದು ಈಗ ರಾಜ್ಯಾದ್ಯಂತ ಚರ್ಚೆಯಾಗುತ್ತಿರುವ ಬಹಳ ಆತಂಕಕಾರಿ ವಿಷಯ. ಈ ವಿಷಯ ರಾಜ್ಯ ಸರ್ಕಾರಕ್ಕೆ ಕಪ್ಪು ಚುಕ್ಕೆಯಾಗಿ ಪರಿಣಮಿಸಿದೆ. ಶ್ರಮಪಟ್ಟು ಓದಿ, ಸ್ಪರ್ಧಾತ್ಮಕ ಪರೀಕ್ಷೆ ಪಾಸು ಮಾಡಿ, ಕೆಲವೊಂದು ಹುದ್ದೆಗಳಲ್ಲಿ ಜನರ ಸೇವೆಯಲ್ಲಿ ನಿರತರಾಗಿರುವವರನ್ನು ಈ ಘಟನೆ ದಿಗ್ಭ್ರಮೆಗೊಳಿಸಿದೆ.

ಸರ್ಕಾರಿ ಹುದ್ದೆ ಪಡೆಯುವ ಸಲುವಾಗಿ ಎಷ್ಟೋ ಮಂದಿ ಹಗಲು ರಾತ್ರಿ ಕಷ್ಟಪಟ್ಟು ಪ್ರಾಮಾಣಿಕವಾಗಿ ಓದಿ ಪರೀಕ್ಷೆ ಬರೆದಿರುತ್ತಾರೆ. ಲಿಖಿತ ಪರೀಕ್ಷೆಯಲ್ಲಿ ಅಕ್ರಮ ನಡೆದರೆ ಪ್ರತಿಭಾವಂತ ಅಭ್ಯರ್ಥಿಗಳ ಭವಿಷ್ಯ ಏನಾಗಬೇಕು? ಅರ್ಹತೆ ಆಧಾರದ ಮೇಲೆ ಹುದ್ದೆ ಪಡೆಯಬೇಕು. ಹಣಕೊಟ್ಟು ಪರ್ಯಾಯ ಮಾರ್ಗದಲ್ಲಿ ಹುದ್ದೆ ಪಡೆದರೆ, ಅಂತಹ ವ್ಯಕ್ತಿಗಳು ನ್ಯಾಯ ಬದ್ಧವಾಗಿ ಕೆಲಸ ಮಾಡುತ್ತಾರೆ ಎನ್ನುವುದು ಸತ್ಯಕ್ಕೆ ದೂರವಾದ ಮಾತು. ತಾನು ಕೊಟ್ಟ ಹಣವನ್ನು ಹಿಂಪಡೆಯುವ ನಿಟ್ಟಿನಲ್ಲಿ ಯೋಚಿಸಬಹುದಲ್ಲವೇ!

ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ಪ್ರಮಾಣಿಕ, ನೈಜ ವಿದ್ಯಾರ್ಥಿಗಳಿಗೆ ಅನ್ಯಾಯ ಆಗದಂತೆ ನೋಡಿಕೊಳ್ಳಲಾಗುವುದು ಎಂದು ಹೇಳಿದ್ದಾರೆ. ಮತ್ತೆ, ಎಲ್ಲಾ 545 ಅಭ್ಯರ್ಥಿಗಳಿಗೆ ಮರು ಪರೀಕ್ಷೆ ನಡೆಸಲಾಗುವುದು ಎಂದು ಹೇಳಿದ್ದಾರೆ.

ಅಕ್ರಮ ಮಾಡಿದವರ ವಿರುದ್ಧ ಕ್ರಮ ಕೈಗೊಳ್ಳಬೇಕೇ ಹೊರತು, ಪರೀಕ್ಷೆಯನ್ನೇ ರದ್ದು ಮಾಡುವುದರಿಂದ ಈಗಾಗಲೇ ಶ್ರಮಪಟ್ಟು ಓದಿ ಪರೀಕ್ಷೆ ಬರೆದು ಪಾಸಾದವರು ತಮ್ಮದಲ್ಲದ ತಪ್ಪಿಗಾಗಿ ಮರು ಪರೀಕ್ಷೆ ಬರೆಯುವುದು ನ್ಯಾಯ ಸಮ್ಮತವಾದುದ್ದಲ್ಲ.

–ಕಂಗಾಣಿಸೋಮು ಪಿ.ಸಿ., ಕ್ಯಾತಮಾರನಹಳ್ಳಿ, ಮೈಸೂರು

ಧೂಳು ಗುಂಡಿಗಳ ಕೊಚ್ಚೆ ಗುಂಡಿಗಳಾಗಿ ಪರಿವರ್ತಿಸಿದ ಮೈಸೂರು ಮಹಾನಗರ ಪಾಲಿಕೆಗೆ ಧನ್ಯವಾದಗಳು?

ಮಾನ್ಯರೆ,



ಹೆಚ್ಚು ಕಡಿಮೆ ಆರು ತಿಂಗಳೂ ಬಾರೀ ಬಿಸಿಲಿನಿಂದ ಜನ ಬಳಲಿದ್ದರು. ಈ ವೇಳೆ ಮೈಸೂರು ನಗರದ ರಸ್ತೆಗಳಲ್ಲಿ ಇದ್ದ ಭಾರೀ ಹೊಂಡಗಳಿಗೆ ಮಹಾನಗರ ಪಾಲಿಕೆ ಮೇಧಾವಿ ಅಧಿಕಾರಿಗಳು ಮಣ್ಣು ತುಂಬಿಸಿದ್ದರು. ಐದಾರು ತಿಂಗಳು ಬಿರು ಬಿಸಿಲಿನ ಜೊತೆಗೆ ಮೈಸೂರು ಜನ ಧೂಳು ಕುಡಿದು ರೋಗ ತಂದುಕೊಂಡರು. ಮತ್ತೀಗ ಮಳೆ ಶುರುವಾಗಿದೆ. ಅದೇ ಗುಂಡಿಗಳಲ್ಲಿ ಮಳೆ ನೀರು ಸೇರಿ ಫಸ್ಟ್ ಕ್ಲಾಸ್ ಕೊಚ್ಚೆ ಗುಂಡಿಯಾಗಿ ಪರಿಣಮಿಸಿದೆ. ಪಾದಚಾರಿಗಳು, ವಾಹನ ಸವಾರರು, ಚಾಲಕರು ಇಂತಹ ಕೊಚ್ಚೆ ಗುಂಡಿಗಳ ರಸ್ತೆಯಲ್ಲಿ ಹುಷಾರಾಗಿ ಸಂಚರಿಸಬೇಕು. ಸ್ವಲ್ಪ ಹೆಚ್ಚು ಕಡಿಮೆ ಆದರೆ ಕೊಚ್ಚೆ ನೀರಿನ ಮಹಾಮಜ್ಜನ ಇಲ್ಲವೆ ಕೊಚ್ಚೆ ಗುಂಡಿಗೆ ಬಿದ್ದು ಗಾಯಗೊಳ್ಳುವ ಅಪಾಯವಿದೆ. ಅಂತೂ ಋತುಮಾನಕ್ಕೆ ಅನುಗುಣವಾಗಿ ರಸ್ತೆಗಳ ಗುಂಡಿಗಳಿಗೆ ಕಾಯಕಲ್ಪ ಕಲ್ಪಿಸುತ್ತಿರುವ ಮಹಾನಗರ ಪಾಲಿಕೆ ಜನಪ್ರತಿನಿಧಿಗಳು 'ಮಹಾ' ಅಧಿಕಾರಿ ವೃಂದಕ್ಕೆ ಧನ್ಯವಾದಗಳು. – **ರಮೇಶ್, ಗೋಕುಲಂ, ಮೈಸೂರು.**

ಶಾಂತಿ ಕದಡುವ ಹೋರಾಟಗಳು ನಿಲ್ಲಲಿ!

ಮಾನ್ಯರೆ,

ಪೆಟ್ರೋಲ್, ಡೀಸೆಲ್ ಬೆಲೆ ಗಗನಕ್ಕೆ ಏರುತ್ತಿದೆ. ನಿತ್ಯ ಬಳಕೆಯ ಸಿಲಿಂಡರ್ ಬೆಲೆ 1000 ರೂ. ದಾಟಿದೆ. ಜನಸಾಮಾನ್ಯರ ಬದುಕು ದಿನೇ ದಿನೆ ದುಸ್ತರವಾಗುತ್ತಿದೆ. ಹೀಗೆ ಅವಶ್ಯಕ ವಸ್ತುಗಳ ಬೆಲೆಗಳು ಪ್ರತಿನಿತ್ಯ ಏರುತ್ತಲೇ ಇದ್ದರೂ, ಇವುಗಳ ವಿರುದ್ಧ ಪ್ರತಿಭಟನೆ ಮಾಡದೇ, ಬೆಲೆ ಏರಿಕೆಯನ್ನು ಕಿಂಚಿತ್ತೂ ಖಂಡಿಸದೇ, ಆಜಾನ್ ವಿರುದ್ಧ ಸುಪ್ರಭಾತ ಹಾಗೂ ಅಲ್ಲಾ ಪ್ರತಿಯಾಗಿ ಹನುಮಾನ್ ಚಾಲೀಸಾ... ಅದು ಇದು ಅಂತ ಸಾಮರಸ್ಯ ಕದಡುವ, ಶಾಂತಿಭಂಗ ಹುಟ್ಟುಹಾಕುವ ಹೋರಾಟಗಳನ್ನು ಕೆಲವರು ಮಾಡುತ್ತಿರುವುದು ಅರ್ಥಹೀನ ಅನ್ನಿಸುತ್ತದೆ.

ಏಕೆಂದರೆ ಧರ್ಮ ಯಾವುದೇ ಇರಲಿ ಸಂವಿಧಾನದ ಅಡಿಯಲ್ಲಿ ಎಲ್ಲರೂ ಒಂದೇ. ಹೀಗಿರುವಾಗ ಮಸೀದಿ ಹಾಗೂ ದೇವಾಲಯಗಳಲ್ಲಿ ಧ್ವನಿವರ್ಧಕ ಬಳಕೆ ಕುರಿತಂತೆ ಸುಪ್ರೀಂಕೋರ್ಟ್ ಹಾಗೂ ಕೇಂದ್ರ ಸರ್ಕಾರದ ಆದೇಶಗಳನ್ನು ಒಟ್ಟುಗೂಡಿಸಿ ನಮ್ಮ ರಾಜ್ಯ ಸರ್ಕಾರ ಕಟ್ಟುನಿಟ್ಟಾಗಿ ಆದೇಶ ತರುವತ್ತ ದಿಟ್ಟ ಹೆಜ್ಜೆಯನ್ನು ಇಡಬೇಕಾಗಿದೆ. ಈ ನಿಟ್ಟಿನಲ್ಲಿ ಎಲ್ಲರೂ, ಎಲ್ಲಾ ಧರ್ಮದವರು ರಾಜ್ಯ ಸರ್ಕಾರ ತೆಗೆದುಕೊಳ್ಳುವ ನಿಲುವಿಗೆ ಕಟಿಬದ್ಧರಾಗಿರಬೇಕೇ ವಿನಃ, ಅದಕ್ಕೂ ಮುನ್ನ ಧರ್ಮ ಧರ್ಮಗಳ ನಡುವೆ ವಿಷಬೀಜ ಬಿತ್ತುವ ಹಾಗೂ ಸಮಾಜದಲ್ಲಿ ಸಾಮರಸ್ಯ ಕದಡುವ ಕುತಂತ್ರವನ್ನು ಯಾರೂ ಮಾಡದಿರುವುದು ಉತ್ತಮ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.



ಕಾರ್ಕಳ ಆನಂದಭಟ್
ಮೊ. 7676554198

ದಿಕ್ಕುದೆಸೆ

ಭಾರತ–ಆಸೀಸ್ ಒಪ್ಪಂದ–ಚೀನಿ ಪ್ರಭುತ್ವಕ್ಕೆ ಉತ್ತರ

> ಚೀನಾ ಜಗತ್ತಿನ ಫ್ಯಾಕ್ಟರಿ ಎಂಬ ಮಾನ್ಯತೆ ಪಡೆದಿದೆ. ಆದರೆ ಕೊರೊನಾ ನಂತರ ಪರಿಸ್ಥಿತಿಯಲ್ಲಿ ಬದಲಾವಣೆಯಾಗುತ್ತಿದ್ದು, ಜಗತ್ತಿನ ಅನೇಕ ಬಹುರಾಷ್ಟ್ರೀಯ ಕಂಪನಿಗಳು ಚೀನಾ ತ್ಯಜಿಸಿ ದಕ್ಷಿಣ ಏಷ್ಯಾ ದೇಶಗಳತ್ತ ಮುಖ ಮಾಡಿವೆ. ಕೇಂದ್ರ ಸರಕಾರವು ಈ ಅವಕಾಶ ಉಪಯೋಗಿಸಿ ಭಾರತವನ್ನು ಉತ್ಪಾದನೆಯ ಜಾಗತಿಕ ಕೇಂದ್ರವಾಗಿ ಪರಿವರ್ತಿಸಲು ಉತ್ಪಾದನಾ ಆಧಾರಿತ ಉತ್ತೇಜನ (PLI) ನೀತಿ ರೂಪಿಸಿದೆ. ಈ ನೀತಿಯನ್ವಯ ಅಧಿಕ ಉತ್ಪಾದನೆ ಮಾಡುವ ಆಯ್ದ ದೇಶ–ವಿದೇಶಿ ಕಂಪನಿಗಳಿಗೆ ಸರಕಾರವು ಅನೇಕ ರೀತಿಯ ರಿಯಾಯ್ತಿ, ವಿನಾಯ್ತಿ ಮತ್ತು ಉತ್ತೇಜನ ನೀಡುತ್ತದೆ. ಈ ನೀತಿಯನ್ವಯ ಇದುವರೆಗೆ ಹದಿಮೂರು ಔದ್ಯೋಗಿಕ ಕ್ಷೇತ್ರಗಳನ್ನು ಈ ಯೋಜನಾ ವ್ಯಾಪ್ತಿಗೆ ತರಲಾಗಿದೆ. 2021ರ ಬಜೆಟ್‌ನಲ್ಲಿ ವಿತ್ತ ಸಚಿವರು PLIಗಾಗಿ ಮುಂದಿನ ಐದು ವರ್ಷಗಳಲ್ಲಿ 1.97 ಲಕ್ಷ ಕೋಟಿ ಖರ್ಚು ಮಾಡುವ ಘೋಷಣೆ ಮಾಡಿದ್ದಾರೆ.

ಕಳೆದ ತಿಂಗಳು ಭಾರತ–ಆಸ್ಟ್ರೇಲಿಯಾ ಮಧ್ಯೆ ಆರ್ಥಿಕ ಸಹಕಾರ ಮತ್ತು ವಾಣಿಜ್ಯ ಒಪ್ಪಂದಕ್ಕೆ (ECTA) ಸಹಿ ಹಾಕಲಾಯಿತು. ಈ ಐತಿಹಾಸಿಕ ಒಪ್ಪಂದದಿಂದ ಉಭಯ ದೇಶಗಳಿಗೆ ಚೀನಾ ಮೇಲಿನ ಅವಲಂಬನೆ ಕಡಿಮೆಯಾಗುವುದರೊಂದಿಗೆ ಜಗತ್ತಿನಲ್ಲಿ ಚೀನಾಕ್ಕೆ ಪರ್ಯಾಯವಾಗುವ ಸಂಭಾವ್ಯತೆ ಹೆಚ್ಚಿದೆ. ಈ ವರ್ಚುವಲ್ ಒಪ್ಪಂದಕ್ಕೆ ಆಸ್ಟ್ರೇಲಿಯಾ ಪರ ಆ ದೇಶದ ವಾಣಿಜ್ಯ, ಪ್ರವಾಸೋದ್ಯಮ ಮತ್ತು ಹೂಡಿಕೆ ಸಚಿವ ಡೇನ್‌ಟಿಹಾನ್ ಮೆಲ್ಬೊರ್ನ್‌ನಲ್ಲಿ ಸಹಿ ಹಾಕಿದರೆ ಭಾರತದ ಪರ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ನವದೆಹಲಿಯಲ್ಲಿ ಸಹಿ ಹಾಕಿದರು. ಈ ಒಪ್ಪಂದದಿಂದ ಪೂರೈಕೆಯಾಗುವ ಹೆಚ್ಚಿನೆಲ್ಲ ವಸ್ತುಗಳ ಮೇಲಿನ ಸುಂಕ ಶೂನ್ಯವಾಗಲಿದೆ. ಚೀನಿ ಸರಕಾರವು ಕ್ವಾಡ್ (QUAD) ಗುಂಪಿನಲ್ಲಿರುವ ಆಸ್ಟ್ರೇಲಿಯಾಕ್ಕೆ ಪಾಠ ಕಲಿಸಲು ಆಮದಾಗುವ ಕೆಲವು ಉತ್ಪನ್ನಗಳಿಗೆ ದುಪ್ಪಟ್ಟು ಸುಂಕ ವಿಧಿಸಿರುವ ಹಿನ್ನೆಲೆಯಲ್ಲಿ ಈ ಒಪ್ಪಂದ ಅತ್ಯಂತ ಮಹತ್ವಪೂರ್ಣವಾಗಿದೆ. ಹತ್ತು ವರ್ಷದ ನಂತರ ಆಸ್ಟ್ರೇಲಿಯಾದಂತಹ ವಿಖ್ಯಾತ ದೇಶದೊಂದಿಗೆ ಭಾರತವು ECTA ಮಾಡಿಕೊಂಡಿದೆ. ಜಪಾನ್ ಮತ್ತು ದಕ್ಷಿಣ ಕೊರಿಯಾ ನಂತರ ಆಸ್ಟ್ರೇಲಿಯಾವು ಭಾರತದೊಂದಿಗೆ ಮುಕ್ತ ವ್ಯಾಪಾರ ಒಪ್ಪಂದ ಮಾಡಿಕೊಂಡ ತೃತೀಯ ದೇಶವಾಗಿದೆ.

ಭಾರತದ ರಫ್ತು ವ್ಯವಹಾರದಲ್ಲಿ ವೃದ್ಧಿ: ಪ್ರಸ್ತುತ ಭಾರತ–ಆಸ್ಟ್ರೇಲಿಯಾ ಮಧ್ಯೆ ವರ್ಷಕ್ಕೆ 7.5 ಬಿಲಿಯನ್ ಡಾಲರ್‌ನ ವ್ಯವಹಾರವಾಗುತ್ತಿದೆ. ಈ ಒಪ್ಪಂದದಿಂದ 100 ಬಿಲಿಯನ್ ಡಾಲರ್‌ವರೆಗೆ ತಲುಪುವ ಸಾಧ್ಯತೆ ಇದೆ. ಈ ಒಪ್ಪಂದದಿಂದ ಟೆಕ್ಸ್‌ಟೈಲ್, ಅಮೂಲ್ಯ ಹರಳುಗಳು, ಆಭರಣಗಳು, ಚರ್ಮದ ವಸ್ತುಗಳು, ಇಂಜಿನಿಯರಿಂಗ್, ಆಟೋಮೊಬೈಲ್ ಮೊದಲಾದ ಕ್ಷೇತ್ರಗಳ 6000ಕ್ಕೂ ಹೆಚ್ಚು ವಸ್ತುಗಳು ಸುಂಕ ರಹಿತವಾಗಿ ಆಸ್ಟ್ರೇಲಿಯಾಕ್ಕೆ ರಫ್ತಾಗಲಿದೆ. ಮುಖ್ಯವಾಗಿ ಈ ಒಪ್ಪಂದದಿಂದ ಭಾರತೀಯ ವಿದ್ಯಾರ್ಥಿಗಳಿಗೆ ಉನ್ನತ ವ್ಯಾಸಂಗಕ್ಕಾಗಿ ಆಸ್ಟ್ರೇಲಿಯಾ ಪ್ರವೇಶ ಸರಳವಾಗುವುದರೊಂದಿಗೆ ಉದ್ಯೋಗ ವೀಸಾ ಕೂಡ ದೊರೆಯಲಿದೆ. ಇದರಿಂದ ಭಾರತೀಯ ವಿದ್ಯಾರ್ಥಿಗಳು ಆಸ್ಟ್ರೇಲಿಯಾದಲ್ಲಿ ವಿದ್ಯಾಭ್ಯಾಸದೊಂದಿಗೆ ಉದ್ಯೋಗ (LEARN & EARN) ಕೂಡ ಮಾಡಿ ಅಲ್ಲಿನ ವಿದ್ಯಾಭ್ಯಾಸ ಖರ್ಚನ್ನು ತಾವೇ ಗಳಿಸಬಹುದು.

ಭಾರತದ ಉಕ್ಕಿನ (Steel) ಕಂಪನಿಗಳಿಗೂ ಈ ಒಪ್ಪಂದ ಲಾಭದಾಯಕವಾಗಲಿದೆ. ಸ್ಟೀಲ್ ಕಂಪನಿಗಳಿಗೆ ಅತ್ಯಾವಶ್ಯಕವಾಗಿರುವ ಕೋಕಿಂಗ್ ಕಲ್ಲಿದ್ದಲು ಭಾರತದಲ್ಲಿ ಅಲ್ಪ ಪ್ರಮಾಣದಲ್ಲಿ ದೊರೆಯುತ್ತಿದೆ ಮತ್ತು ಗುಣಮಟ್ಟವೂ ಉತ್ಕೃಷ್ಟವಾಗಿಲ್ಲ. ಈ ಕಾರಣದಿಂದ ಆಸ್ಟ್ರೇಲಿಯಾದಿಂದ ಭಾರತದ ಆಮದಿನಲ್ಲಿ ಕೇವಲ ಕಲ್ಲಿದ್ದಲಿನ ಪ್ರಮಾಣವೇ ಶೇ.70ರಷ್ಟಿದೆ. ECTA ಯಿಂದಾಗಿ ಕಲ್ಲಿದ್ದಲ ಮೇಲಿನ ಸುಂಕ ಶೇ.2.5ರಷ್ಟು ಕಡಿಮೆಯಾಗಲಿದೆ. ಇದರಿಂದ ಭಾರತೀಯ ಸ್ಟೀಲ್ ಕಂಪನಿಗಳಿಗೆ ಉತ್ಪಾದನಾ ವೆಚ್ಚ ಕಡಿಮೆಯಾಗಿ ವಿದೇಶಿ ಉಕ್ಕಿನ ಕಂಪನಿಗಳಿಗೆ ತೀವ್ರ ಪೈಪೋಟಿ ನೀಡಬಹುದು ಹಾಗೂ ವಿದೇಶಿ ವಿನಿಮಯವೂ ಉಳಿತಾಯವಾಗಲಿದೆ. ECTA ರೂಪಿಸಲು ಆಸ್ಟ್ರೇಲಿಯಾಕ್ಕೆ ತೆರಳಿದ್ದ ಪಿಯೂಷ್ ಗೋಯಲ್ ನೇತೃತ್ವದ ಪ್ರತಿನಿಧಿ ಮಂಡಲದಲ್ಲಿದ್ದ ಟಾಟಾ ಸ್ಟೀಲ್‌ನ ಸಿ.ಇ.ಓ. T.V.ನರೇಂದ್ರನ್ ಅವರು ಈ ಒಪ್ಪಂದದಿಂದ ಭಾರತ–ಆಸ್ಟ್ರೇಲಿಯಾ ಜಂಟಿಯಾಗಿ ಜಗತ್ತಿನ ಮುಂದೆ ಚೀನಾಕ್ಕೆ ಪರ್ಯಾಯ ವಾಣಿಜ್ಯ ಶಕ್ತಿಯಾಗಬಹುದೆಂದು ತಿಳಿಸಿದರು. ಕೇವಲ ಟಾಟಾ ಸ್ಟೀಲ್ ಕಂಪನಿ ವರ್ಷಕ್ಕೆ 2 ಬಿಲಿಯನ್ ಡಾಲರ್ ಮೌಲ್ಯದ ಕಲ್ಲಿದ್ದಲು ಆಮದು ಮಾಡಿಕೊಳ್ಳುತ್ತದೆ. ಈ ಒಪ್ಪಂದದಿಂದ ಭಾರತೀಯ ಕಂಪನಿಗಳಿಗೆ ಆಗಬಹುದಾದ ಲಾಭ ಪ್ರಮಾಣ, ಅಂದಾಜು ಮಾಡಿಕೊಳ್ಳಬಹುದು.

ಫಾರ್ಮಾ ಉತ್ಪನ್ನಗಳಿಗೆ ಆಸ್ಟ್ರೇಲಿಯಾವು ಚೀನಿ ಕಂಪನಿಗಳನ್ನು ಅವಲಂಬಿಸಿದೆ. ECTAಯಿಂದ 12 ಬಿಲಿಯನ್ ಡಾಲರ್‌ನಷ್ಟಿರುವ ಆಸ್ಟ್ರೇಲಿಯಾದ ಫಾರ್ಮಾ ಮಾರುಕಟ್ಟೆಯು ಭಾರತೀಯ ಕಂಪನಿಗಳಿಗೆ ತೆರೆಯಲಿದೆ. ಪ್ರಸ್ತುತ ಭಾರತೀಯ ಕಂಪನಿಗಳು ಕೇವಲ 34 ಕೋಟಿ ಡಾಲರ್ ಮೌಲ್ಯದ ಔಷಧ ಮತ್ತು ವೈದ್ಯಕೀಯ ಉಪಕರಣಗಳನ್ನು ರಫ್ತು ಮಾಡುತ್ತಿದ್ದು, ಈ ಒಪ್ಪಂದದಿಂದ ನೇರ ಪ್ರವೇಶದ ಅವಕಾಶ ತೆರೆಯಲಿದೆ. ಚೀನಾವು ಆಸ್ಟ್ರೇಲಿಯಾದ ಕಲ್ಲಿದ್ದಲು, ಮದ್ಯ ಮತ್ತು ಜವೆಗೋಧಿ ಮೊದಲಾದವುಗಳ ಆಮದಿನ ಮೇಲೆ ನಿರ್ಬಂಧ ವಿಧಿಸಿರುವುದರಿಂದ ಮುಂದಿನ ದಿನಗಳಲ್ಲಿ ಈ ಉತ್ಪನ್ನಗಳು ಭಾರತಕ್ಕೆ ಬರಲಿವೆ.

ಜಗತ್ತಿನ ಫ್ಯಾಕ್ಟರಿಯಾಗಲಿರುವ ಭಾರತ: ರಿಫೀಲ್–ಟು–ರಾಕೆಟ್ (Refill to Rocket) ತಯಾರಿಸುವ ಸಾಮರ್ಥ್ಯವಿರುವ ಚೀನಾ ಜಗತ್ತಿನ ಫ್ಯಾಕ್ಟರಿ ಎಂಬ ಮಾನ್ಯತೆ ಪಡೆದಿದೆ. ಆದರೆ ಕೊರೊನಾ ನಂತರ ಪರಿಸ್ಥಿತಿಯಲ್ಲಿ ಬದಲಾವಣೆಯಾಗುತ್ತಿದ್ದು, ಜಗತ್ತಿನ ಅನೇಕ ಬಹುರಾಷ್ಟ್ರೀಯ ಕಂಪನಿಗಳು ಚೀನಾ ತ್ಯಜಿಸಿ ದಕ್ಷಿಣ ಏಷ್ಯಾ ದೇಶಗಳತ್ತ ಮುಖ ಮಾಡಿವೆ. ಕೇಂದ್ರ ಸರಕಾರವು ಈ ಅವಕಾಶ ಉಪಯೋಗಿಸಿ ಭಾರತವನ್ನು ಉತ್ಪಾದನೆಯ ಜಾಗತಿಕ ಕೇಂದ್ರವಾಗಿ ಪರಿವರ್ತಿಸಲು ಉತ್ಪಾದನಾ ಆಧಾರಿತ ಉತ್ತೇಜನ (PLI) ನೀತಿ ರೂಪಿಸಿದೆ. ಈ ನೀತಿಯನ್ವಯ ಅಧಿಕ ಉತ್ಪಾದನೆ ಮಾಡುವ ಆಯ್ದ ದೇಶ–ವಿದೇಶಿ ಕಂಪನಿಗಳಿಗೆ ಸರಕಾರವು ಅನೇಕ ರೀತಿಯ ರಿಯಾಯ್ತಿ, ವಿನಾಯ್ತಿ ಮತ್ತು ಉತ್ತೇಜನ ನೀಡುತ್ತದೆ. ಈ ನೀತಿಯನ್ವಯ ಇದುವರೆಗೆ ಹದಿಮೂರು ಔದ್ಯೋಗಿಕ ಕ್ಷೇತ್ರಗಳನ್ನು ಈ ಯೋಜನಾ ವ್ಯಾಪ್ತಿಗೆ ತರಲಾಗಿದೆ. 2021ರ ಬಜೆಟ್‌ನಲ್ಲಿ ವಿತ್ತ ಸಚಿವರು PLIಗಾಗಿ ಮುಂದಿನ ಐದು ವರ್ಷಗಳಲ್ಲಿ 1.97 ಲಕ್ಷ ಕೋಟಿ ಖರ್ಚು ಮಾಡುವ ಘೋಷಣೆ ಮಾಡಿದ್ದಾರೆ. ಈ ಯೋಜನಾ ನೀತಿಯಿಂದಾಗಿ ಅನೇಕ ಕಂಪನಿಗಳು ತಮ್ಮ ಉತ್ಪಾದನೆ ಹೆಚ್ಚಿಸಿವೆ. ಮೊಬೈಲ್ ಫೋನ್‌ಗಳ ಉತ್ಪಾದನೆಯಲ್ಲಿ ಭಾರತವೀಗ 2ನೇ ಸ್ಥಾನಕ್ಕೇರಿದೆ. ಮುಂದಿನ ಕೆಲವು ವರ್ಷಗಳಲ್ಲಿ ಭಾರತದಲ್ಲಿ ಇಲೆಕ್ಟ್ರಾನಿಕ್ಸ್ ಮತ್ತು ಇನ್ನಿತರ ಹಲವು ವಸ್ತುಗಳ ಉತ್ಪಾದನೆ ಮತ್ತು ರಫ್ತು ಪ್ರಮಾಣದಲ್ಲಿ ಭಾರೀ ಏರಿಕೆಯಾಗಲಿದೆ.

ಭಾರತ–ಐಸ್ಲೆಂಡ್, ವಾಣಿಜ್ಯ ಸಂಘದ ಅಧ್ಯಕ್ಷ ಪ್ರಸೂನ್ ದಿವಾನ್‌ರು ಈ ಒಪ್ಪಂದವು ಅಮೇರಿಕ ಹಾಗೂ ಯೂರೋಪಿಯನ್ ದೇಶಗಳಲ್ಲೂ ಭಾರತಕ್ಕೆ ವ್ಯಾಪಾರದ ಅವಕಾಶ ತೆರೆಯಲಿವೆ. ವಿಶೇಷವಾಗಿ ಸ್ವರ್ಣಾಭರಣ ಕುಶಲಕರ್ಮಿಗಳು ಆಸ್ಟ್ರೇಲಿಯಾದಿಂದ ಕಲಾತ್ಮಕ ಕುಸುರಿ ಕೆಲಸ ಮಾಡುವ ಸೂಕ್ಷ್ಮ ಯಂತ್ರಗಳು, ಅಮೂಲ್ಯ ಹರಳುಗಳನ್ನು ಆಮದು ಮಾಡಿಕೊಂಡು ಇವುಗಳಿಂದ ಆಭರಣಗಳನ್ನು ತಯಾರಿಸಿ ವಿದೇಶಿ ಮಾರುಕಟ್ಟೆಗಳಿಗೆ ರಫ್ತು ಮಾಡಬಹುದು. ಇದರಿಂದ ವಿದೇಶಿ ವಿನಿಮಯ, ಉದ್ಯೋಗಾವಕಾಶ ವೃದ್ಧಿಸುವುದರೊಂದಿಗೆ ಹೊಸ ಆವಿಷ್ಕಾರಗಳು, ತಂತ್ರಜ್ಞಾನಗಳು, ಉತ್ಪಾದನಾ ತಂತ್ರಗಳು ಬರಲಿವೆ. ಇವುಗಳ ಪರಿಣಾಮ ಸ್ವರೂಪ ಭಾರತವು ಜಗತ್ತಿನ ಬೃಹತ್ ಉತ್ಪಾದಕ ದೇಶವಾಗಲಿದೆ. ಪ್ರಸೂನ್‌ರ ಪ್ರಕಾರ ಪ್ರಸ್ತುತ ಆಸ್ಟ್ರೇಲಿಯನ್ ಮಾರುಕಟ್ಟೆಯ ಮೇಲೆ ಚೀನಾ ಮತ್ತು ತೈವಾನ್‌ನ ಬಲವಾದ ಹಿಡಿತವಿದೆ. ಈ ಒಪ್ಪಂದವು ಭವಿಷ್ಯದಲ್ಲಿ ಭಾರತದ ಕಂಪನಿಗಳಿಗೂ ಅವಕಾಶಗಳನ್ನು ತೆರೆಯಲಿದೆ. ECTAಯಿಂದಾಗಿ 2007 ರಿಂದ ಭಾರತವು ಯೂರೋಪಿಯನ್ ದೇಶಗಳೊಂದಿಗೆ ಶೂನ್ಯ ಸುಂಕ ಒಪ್ಪಂದಕ್ಕಾಗಿ ಪಡುತ್ತಿರುವ ಯತ್ನಕ್ಕೆ ಯಶಸ್ಸು ಲಭಿಸುವ ಸಾಧ್ಯತೆ ಇದೆ. ಈ ಉದ್ದೇಶಕ್ಕಾಗಿ ಪ್ರಧಾನಿ ಮೋದಿಯವರು Local Go Global ಘೋಷಣೆಯನ್ನು ಮಾಡಿದ್ದಾರೆ. ಇದರಿಂದಾಗಿ 2021–22ರ ವಿತ್ತ ವರ್ಷದಲ್ಲಿ ಭಾರತವು 420 ಬಿಲಿಯನ್ ಡಾಲರ್ ಮೌಲ್ಯದ ರಫ್ತು ಮಾಡಿ ದಾಖಲೆ ನಿರ್ಮಿಸಿದೆ.

ಭಾರತದ ಪ್ರಧಾನಿ ಮೋದಿಯವರು ಈ ಒಪ್ಪಂದದ ಬಗ್ಗೆ ಪ್ರತಿಕ್ರಿಯಿಸುತ್ತಾ ECTA ಉಭಯ ದೇಶಗಳ ಮಧ್ಯೆ ದ್ವಿಪಕ್ಷೀಯ ಸಹಕಾರ ಸಂಬಂಧ ಬಲಪಡಿಸುವಲ್ಲಿ ಒಂದು ಸ್ಮರಣೀಯ ಘಟನೆಯಾಗಿದೆ. ಈ ಒಪ್ಪಂದದಿಂದ ಆಸ್ಟ್ರೇಲಿಯಾವು ಭಾರತಕ್ಕೆ ರಫ್ತು ಮಾಡುವ ಶೇ.85ರಷ್ಟು ವಸ್ತುಗಳು ಸುಂಕ ಮುಕ್ತವಾಗಲಿದೆಯೆಂದು ಹರ್ಷ ವ್ಯಕ್ತಪಡಿಸಿದರೆ, ಆಸ್ಟ್ರೇಲಿಯಾ ಪ್ರಧಾನಿ ಸ್ಕಾಟ್ ಮಾರಿಸನ್ ಕೂಡ ಈ ಒಪ್ಪಂದದ ಸಂಭ್ರಮವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಿದರು. ಪ್ರಧಾನಿ ಮೋದಿಯವರ ನೆಚ್ಚಿನ ತಿನಿಸಾದ ಕಿಚಡಿಯನ್ನು ಮಾರಿಸನ್ ಸ್ವತಃ ತಾವೇ ತಯಾರಿಸಿದ ಫೋಟೋ ಹಂಚಿಕೊಂಡಿದ್ದು, "ಇದು ಪ್ರಧಾನಿ ಮೋದಿಯವರ ಮೆಚ್ಚಿನ ತಿನಿಸು. ಅವರ ತಾಯಿಯನ್ನು ನೋಡಲು ಹೋದಾಗಲೆಲ್ಲ ಈ ತಿಂಡಿ ಸವಿಯುತ್ತಾರೆ" ಎಂದಿದ್ದಾರೆ. ಸ್ಕಾಟ್‌ರ ಈ ಟ್ವೀಟ್‌ಗೆ ನೆಟ್ಟಿಗರು ಪ್ರೀತಿಯಿಂದ ಪ್ರತಿಕ್ರಿಯಿಸಿದ್ದು, ಈ ತಿನಿಸು ಮತ್ತು ಉಭಯ ರಾಷ್ಟ್ರಗಳ ಬಾಂಧವ್ಯ ಎರಡೂ ಉತ್ತಮವಾಗಿವೆ ಎಂದಿದ್ದಾರೆ.



ಭಾರತದ ಪ್ರಧಾನಿ ನರೇಂದ್ರ ಮೋದಿ



ಆಸ್ಟ್ರೇಲಿಯಾ ಪ್ರಧಾನಿ ಸ್ಕಾಟ್ ಮಾರಿಸನ್

ಮೈಸೂರು ಪೊಲೀಸ್ 'ಬ್ಯಾಂಡ್ ಹೌಸ್' ಸಂರಕ್ಷಣಾ ಕಾರ್ಯಕ್ಕೆ ಚಾಲನೆ: ಬಿಎನ್‌ಪಿಎಂಎಲ್ ನೆರವು



ಮೈಸೂರು, ಮೇ 12(ಎಸ್‌ಬಿಡಿ)– ಮೈಸೂರಿನ ಪಾರಂಪರಿಕ ಕಟ್ಟಡಗಳಲ್ಲೊಂದಾದ ಶತಮಾನದ 'ಬ್ಯಾಂಡ್ ಹೌಸ್' ಸಂರಕ್ಷಣೆ ಕಾರ್ಯಕ್ಕೆ ಚಾಲನೆ ಸಿಕ್ಕಿದೆ.

ಈ ಹಿಂದೆ ಮೈಸೂರು ನಗರ ಪೊಲೀಸ್ ಆಯುಕ್ತರ ಕಚೇರಿ ಕಾರ್ಯನಿರ್ವಹಿಸುತ್ತಿದ್ದ 102 ವರ್ಷಗಳ 'ಬ್ಯಾಂಡ್ ಹೌಸ್' ಪಾರಂಪರಿಕ ಕಟ್ಟಡದ ಸಂರಕ್ಷಣಾ ಕಾರ್ಯವನ್ನು ಬ್ಯಾಂಕ್ ನೋಟ್ ಪೇಪರ್ ಮಿಲ್ ಲಿಮಿಟೆಡ್‌ನ(ಬಿಎನ್‌ಪಿಎಂಎಲ್) ಸಿಎಸ್‌ಆರ್ ನಿಧಿ 64 ಲಕ್ಷ ರೂ. ಅಂದಾಜು ವೆಚ್ಚದಲ್ಲಿ ಕೈಗೊಳ್ಳಲಾಗುತ್ತಿದೆ. ಪುರಾತತ್ವ, ವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯೊಂದಿಗಿನ ಒಡಂಬಡಿಕೆಯೊಂದಿಗೆ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ ಕಾಮಗಾರಿಗೆ ಇಂದು ಶಂಕುಸ್ಥಾಪನೆ ನೆರವೇರಿಸಲಾಯಿತು.

ಈ ವೇಳೆ ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ, ಬ್ಯಾಂಕ್ ನೋಟ್ ಪೇಪರ್ ಮಿಲ್ ಲಿಮಿಟೆಡ್ ಮೈಸೂರು ಇದರ ವ್ಯವಸ್ಥಾಪಕ ನಿರ್ದೇಶಕ ಕೆ.ಜಿ. ವಿಶ್ವನಾಥನ್, ಅಧಿಕಾರಿಗಳಾದ ಧರಣಿ ಕುಮಾರ, ಅನಂತ್ ಹೆಗಡೆ, ಅಭಯ್ ಕುಮಾರ್ ಮಹಾಪಾತ್ರೋ, ಪುರಾತತ್ವ ಇಲಾಖೆಯ ಸಿ.ಟಿ.ಮಹೇಶ್, ಜೆ. ಸತೀಶ್, ಸಿ.ಎನ್.ಮಂಜುಳ, ಗುತ್ತಿಗೆದಾರ ಟಿ. ಸುಭಾಷ್ ಮತ್ತಿತರರು ಉಪಸ್ಥಿತರಿದ್ದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ ಅರಮನೆ ವಾದ್ಯಗೋಷ್ಠಿ ಅಭ್ಯಾಸಕ್ಕಾಗಿ 1920ರಲ್ಲಿ 'ಬ್ಯಾಂಡ್ ಹೌಸ್' ನಿರ್ಮಿಸಲಾಗಿತ್ತು. ಕೆಂಗಲ್ ಹನುಮಂತಯ್ಯ ಅವರು ಮುಖ್ಯಮಂತ್ರಿಯಾಗಿದ್ದಾಗ 1952ರಲ್ಲಿ ಅರಮನೆ ವಾದ್ಯಗೋಷ್ಠಿಯನ್ನು ಪೊಲೀಸ್ ಇಲಾಖೆಗೆ ಸೇರ್ಪಡೆಗೊಳಿಸಲಾಯಿತು. ಜೊತೆಗೆ ತಂಡದ ಹೆಸರೂ ಪೊಲೀಸ್ ವಾದ್ಯಗೋಷ್ಠಿಯಾಗಿ ಬದಲಾಯಿತು. ನಂತರದಲ್ಲಿ ಲಲಿತಮಹಲ್ ರಸ್ತೆಯ ಅಶ್ವಾರೋಹಿದಳ(ಮೌಂಟೆಡ್ ಪೊಲೀಸ್ ಕಂಪನಿ)ದ ಕಟ್ಟಡಕ್ಕೆ ಸ್ಥಳಾಂತರಿಸಲಾಗಿತ್ತು. 'ಬ್ಯಾಂಡ್ ಹೌಸ್' ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಪೊಲೀಸ್ ಆಯುಕ್ತರ ಕಚೇರಿ, ಹೊಸ ಕಟ್ಟಡಕ್ಕೆ ಸ್ಥಳಾಂತರಗೊಂಡಿರುವ ಹಿನ್ನೆಲೆಯಲ್ಲಿ ಹಳೇ ಕಟ್ಟಡದ ಸಂರಕ್ಷಣೆಗೆ ಮುಂದಾಗಿದ್ದು, 'ಬ್ಯಾಂಡ್ ಹೌಸ್' ಮೂಲ ಸ್ವಾನಕ್ಕೆ ಮರಳಲಿದೆ.

ತೆರೆದ ಮೊಗಸಾಲೆ ಹಾಗೂ ಗೇಬಲ್ ಹೆಂಚಿನ ಛಾವಣಿ ಹೊಂದಿರುವ ಈ ಪಾರಂಪರಿಕ ಕಟ್ಟಡವನ್ನು ಆಧುನೀಕರಣಗೊಳಿಸಲು ತಜ್ಞರು ಹಾಗೂ ನುರಿತ ಆರ್ಕಿಟೆಕ್ಟ್‌ಗಳಿಂದ ಅಂದಾಜು ಪಟ್ಟಿ ತಯಾರಿಸಲಾಗಿದೆ. ಮಂಗಳೂರು ಹೆಂಚುಗಳ ಛಾವಣಿ, ಮರದ ಕಂಬಗಳು, ಮಳೆ ನೀರು ಸೋರಿಕೆ ಸೇರಿದಂತೆ ಎಲ್ಲಾ ಸಿವಿಲ್ ಕಾಮಗಾರಿಯನ್ನು ಮೂಲ ಪಾರಂಪರಿಕ ವಿನ್ಯಾಸಕ್ಕೆ ಧಕ್ಕೆಯಾಗದಂತೆ ಕೈಗೊಳ್ಳಲು ಯೋಜನೆ ರೂಪಿಸಲಾಗಿದೆ. ಯೋಜನೆ ಪೂರ್ಣಗೊಂಡ ನಂತರ 'ಬ್ಯಾಂಡ್ ಹೌಸ್' ಹಾಗೂ ಪೊಲೀಸ್ ಆಯುಕ್ತರ ಹೊಸ ಕಟ್ಟಡದ ನಡುವಿನ ಖಾಲಿ ಸ್ಥಳದಲ್ಲಿ ನಿತ್ಯ ಇಂಗ್ಲಿಷ್ ಹಾಗೂ ಕರ್ನಾಟಕ ಪೊಲೀಸ್ ಬ್ಯಾಂಡ್ ತಂಡಗಳಿಂದ ಸಂಗೀತ ಸಂಜೆ ಆಯೋಜಿಸುವ ಚಿಂತನೆಯಿದೆ.

ರಂಗಭೂಮಿಯಿಂದ ಖೈದಿಗಳಿಗೆ ಹೊಸ ಜೀವನ

ಮೈಸೂರು ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕಿ ದಿವ್ಯಾಶ್ರೀ ಅಭಿಪ್ರಾಯ



ಮೈಸೂರು,ಮೇ12(ಜಿಎ)– ಖೈದಿಗಳಿಗೂ ಸಹ ಹೊಸ ಜೀವನವನ್ನು ನೀಡುವ ಕ್ಷೇತ್ರವೆಂದರೆ ಅದು ರಂಗಭೂಮಿ ಎಂದು ಮೈಸೂರು ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕಿ ದಿವ್ಯಾಶ್ರೀ ಅಭಿಪ್ರಾಯಪಟ್ಟರು. ಕಲಾಮಂದಿರದ ಆವರಣದಲ್ಲಿರುವ ಕಿರುರಂಗಮಂದಿರದಲ್ಲಿ ಸಂಚಲನ ಮೈಸೂರು ರಂಗ ತಂಡದ ವತಿಯಿಂದ ನಡೆಯುತ್ತಿರುವ ಸಂಚಲನ ರಂಗೋತ್ಸವದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಕಾರಾಗೃಹದ ಖೈದಿಗಳಿಗೆ ನಾಟಕದ ಬಗ್ಗೆ ತರಬೇತಿ ಕೊಡಿಸಿ ಅವರಿಂದ ನಾಟಕ ಪ್ರದರ್ಶನ ಮಾಡಿಸಿರುವುದರಿಂದ ನನಗೆ ರಂಗಭೂಮಿಯ ಪರಿಚಯವಿದೆ ಎಂದ ಅವರು, ಜೈಲಿನಲ್ಲಿ ಅಪರಾಧಿಗಳಿದ್ದಾರೆ ಎನ್ನುವುದನ್ನು ಹೊರತುಪಡಿಸಿದರೆ. ಅವರಿಗೂ ಮನಸ್ಸಿದೆ ಎನ್ನುವುದನ್ನು ತಿಳಿಯಬೇಕಿದೆ ಎಂದರು. ಕಾರಾಗೃಹದಲ್ಲಿ ಅನೇಕ ಖೈದಿಗಳಿಗೆ ರಂಗಭೂಮಿ ಮೇಲೆ ಆಸಕ್ತಿಯಿದ್ದು, ಕೆಲವರು ಬಿಡುಗಡೆಯ ನಂತರ ರಂಗಭೂಮಿಯಲ್ಲಿ ಸಕ್ರಿಯವಾಗಿ ತೊಡಗಿರುವ ಅನೇಕ ಉದಾಹರಣೆಗಳಿವೆ. ಹಾಗಾಗಿ ಖೈದಿಗಳ ಮನಸ್ಸಿನ ಮೇಲೆ ನಾಟಕಗಳು ಸಾಕಷ್ಟು ಪ್ರಭಾವ ಬೀರಿವೆ. ಹಾಗೆ ಇವುಗಳಿಂದ ಬದಲಾವಣೆಯನ್ನು ಕಂಡಿದ್ದಾರೆ ಎಂದು ಹೇಳಿದರು.

ಬಳಿಕ ಜಯರಾಮ್ ರಾಯಪುರ ಅವರ 'ವಾರಸುದಾರ' ನಾಟಕ ವೇದಿಕೆ ಮೇಲೆ ಪ್ರದರ್ಶನ ಕಂಡಿತು. ಕಾರ್ಯಕ್ರಮದಲ್ಲಿ ಪ್ರಗತಿಪರ ಚಿಂತಕ ಚಿನ್ನಸ್ವಾಮಿ ವಡ್ಡಗೆರೆ, ಹಿರಿಯ ರಂಗ ನಿರ್ದೇಶಕ ಪ್ರಸಾದ್ ಕುಂದೂರು, ಸಂಚಲನ ಅಧ್ಯಕ್ಷ ದೀಪಕ್ ಮೈಸೂರು ಹಾಜರಿದ್ದರು.

ಅಸನಿ ಚಂಡಮಾರುತ ಫಲ: ಮೈಸೂರಿನ ತಾಪಮಾನ ಕುಸಿತ



ಮೈಸೂರು, ಮೇ 12(ಆರ್‌ಕೆಬಿ, ಎಂಕೆ)– ಅಸನಿ ಚಂಡಮಾರುತದಿಂದಾಗಿ ರಾಜ್ಯದ ಹಲವೆಡೆ ನಿರಂತರ ಮಳೆಯಾಗಿದ್ದು, 38 ಡಿಗ್ರಿ ಸೆಲ್ಸಿಯಸ್‌ಗೆ ಏರಿದ್ದ ಮೈಸೂರಿನ ತಾಪಮಾನ 5 ಡಿಗ್ರಿಯಷ್ಟು ಕಡಿಮೆಯಾಗಿದೆ.

ಸತತ ಮಳೆಯಿಂದ ಮೈಸೂರಿನ ವಾತಾವರಣ ತಂಪಾಗಿದ್ದು, ಜನರು ತುಸು ನೆಮ್ಮದಿಯ ನಿಟ್ಟುಸಿರು ಬಿಡುವಂತಾಗಿದೆ. ನಾಗನಹಳ್ಳಿಯಲ್ಲಿರುವ ಗ್ರಾಮೀಣ ಕೃಷಿ ಹವಾಮಾನ ಕ್ಷೇತ್ರ ವಿಭಾಗದ ಬಿಡುಗಡೆ ಮಾಡಿರುವ ಅಂಕಿ–ಅಂಶಗಳ ಪ್ರಕಾರ, ಅಸಾನಿ ಪ್ರಭಾವದಿಂದ ತಾಪಮಾನವು ಮೇ 10 (ಮಂಗಳವಾರ)ರಿಂದ ಕಡಿಮೆಯಾಗತೊಡಗಿದೆ.

ಮೇ 11ರಂದು ಗರಿಷ್ಠ ತಾಪಮಾನವು 34 ಡಿಗ್ರಿ ಸೆಲ್ಸಿಯಸ್‌ನಲ್ಲಿತ್ತು. ಮುಂದಿನ ನಾಲ್ಕು ದಿನಗಳವರೆಗೆ ಅಂದರೆ ಮೇ 15 ರವರೆಗೆ ಸಾಧಾರಣ ಮಳೆಯಾಗುವುದರಿಂದ ತಾಪಮಾನವು 33 ಡಿಗ್ರಿ ಸೆಲ್ಸಿಯಸ್ ಇರಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಗುರುವಾರ ರಾತ್ರಿಯಿಂದ ಅಸನಿ ಚಂಡಮಾರುತದ ಪ್ರಭಾವ ಕಡಿಮೆಯಾಗಲಿದ್ದು, ಮೇ 15ರ ನಂತರ ತಾಪಮಾನ ಹೆಚ್ಚಾಗುವ ಸಾಧ್ಯತೆಯಿದೆ ಎಂದು ಹವಾಮಾನ ತಜ್ಞರು ತಿಳಿಸಿದ್ದಾರೆ.

178.9 ಮಿ.ಮೀ ಮಳೆ: ಮೈಸೂರು ಜಿಲ್ಲೆಯಲ್ಲಿ ವಾಡಿಕೆ ಮಳೆಗಿಂತ 58.9 ಮಿ.ಮೀ(ಕಳೆದ ವರ್ಷಕ್ಕೆ ಹೋಲಿಕೆ ಮಾಡಿದರೆ) ಮಳೆ ಹೆಚ್ಚಾಗಿ ಬಿದ್ದಿದ್ದು, ಇಲ್ಲಿಯವರೆಗೆ 178.9 ಮಿ.ಮೀ(ಮೇ 11ರವರೆಗೆ) ಮಳೆಯಾಗಿದೆ. ಹೆಚ್.ಡಿ.ಕೋಟೆಯಲ್ಲಿ 181.9 ಮಿ.ಮೀ, ಪಿರಿಯಾಪಟ್ಟಣ 175.9 ಮಿ.ಮೀ, ಹುಣಸೂರು 190.3 ಮಿ.ಮೀ, ಮೈಸೂರು 163.2 ಮಿ.ಮೀ, ಸರಗೂರು 176 ಮಿ.ಮೀ, ಕೆ.ಆರ್.ನಗರ 210.2 ಮಿ.ಮೀ, ನಂಜನಗೂಡು 165.6 ಮಿ.ಮೀ, ಟಿ.ನರಸೀಪುರ 195 ಮಿ.ಮೀ ಮಳೆಯಾಗಿದೆ.

ಮುಂದುವರೆದ ಮಳೆ: ಮೈಸೂರಿನಲ್ಲಿ ಗುರುವಾರ ಸುರಿದ ಮಳೆಗೆ ಕುವೆಂಪು ನಗರ ಬಸ್ ಡಿಪೋ ಸಮೀಪದ ಪಡುವಣ ರಸ್ತೆಯಲ್ಲಿ ಮರದ ಕೊಂಬೆ ಮುರಿದು ಬಿದ್ದಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಬೆಳ್ಳಿ ಬೆಳಕು

ಸತ್ಯಮೂರ್ತಿ ತೋಳಹುಣಸೆ



ದೇಶ-ವಿದೇಶಗಳಲ್ಲಿ ಹಾರಲಿದೆ ಯೋಗರಾಜಭಟ್ಟರ ಗಾಳಿಪಟ 2

ಕನ್ನಡ ಚಿತ್ರರಂಗಕ್ಕೆ ತಮ್ಮದೇ ಆದ ಸದಭಿರುಚಿಯ ಸಿನಿಮಾಗಳನ್ನು ನೀಡಿರುವ ಯೋಗರಾಜ್ ಭಟ್ ನಿರ್ದೇಶನದ, ಗೋಲ್ಡನ್ ಸ್ಟಾರ್ ಗಣೇಶ್, ದಿಗಂತ್, ಪವನ್ ಕುಮಾರ್ ಮುಖ್ಯಭೂಮಿಕೆಯಲ್ಲಿರುವ, ಬಹು ನಿರೀಕ್ಷಿತ "ಗಾಳಿಪಟ 2" ಚಿತ್ರ ಆಗಸ್ಟ್ 12 ರಂದು ಬಿಡುಗಡೆಯಾಗಲಿದೆ. ಕರ್ನಾಟಕದಲ್ಲಷ್ಟೇ ಅಲ್ಲದೇ ಹೊರರಾಜ್ಯ ಹಾಗೂ ಹೊರದೇಶಗಳಲ್ಲೂ "ಗಾಳಿಪಟ 2" ಬಿಡುಗಡೆಯಾಗಲಿದೆ.

ಸೂರಜ್ ಪ್ರೊಡಕ್ಷನ್ಸ್ ಲಾಂಛನದಲ್ಲಿ ರಮೇಶ್ ರೆಡ್ಡಿ ಅವರು ಈ ಚಿತ್ರ ನಿರ್ಮಾಣ ಮಾಡಿದ್ದಾರೆ. ಬಹಳ ದಿನಗಳ ನಂತರ ಯೋಗರಾಜ್ ಭಟ್ - ಗಣೇಶ್ ಜೋಡಿಯಲ್ಲಿ ಬರುತ್ತಿರುವ ಈ ಚಿತ್ರದ ಬಗ್ಗೆ ಸಾಕಷ್ಟು ನಿರೀಕ್ಷೆಯಿದೆ.

ಈಗಾಗಲೇ ಟೀಸರ್ ಹಾಗೂ ಹಾಡಿನ ಮೂಲಕ "ಗಾಳಿಪಟ 2" ಜನಮನ ಗೆದ್ದಿದೆ. ಅದರಲ್ಲೂ ಇತ್ತೀಚೆಗೆ ಬಿಡುಗಡೆಯಾದ ಪರೀಕ್ಷೆ ಹಾಡಿಗಂತೂ ಭಾರೀ ಮೆಚ್ಚುಗೆ ವ್ಯಕ್ತವಾಗಿದೆ. ಅರ್ಜುನ್ ಜನ್ಯ ಸಂಗೀತ ನೀಡಿದ್ದಾರೆ. ಸಂತೋಷ್ ರೈ ಪಾತಾಜೆ ಈ ಚಿತ್ರದ ಛಾಯಾಗ್ರಾಹಕರು. ಅನಂತನಾಗ್, ರಂಗಾಯಣ ರಘು, ಬುಲೆಟ್ ಪ್ರಕಾಶ್, ವೈಭವಿ ಶಾಂಡಿಲ್ಯ, ಶರ್ಮಿಳಾ ಮಾಂಡ್ರೆ ಸುಧಾ ಬೆಳವಾಡಿ, ಪದ್ಮಜಾರಾವ್ ಚಿತ್ರದಲ್ಲಿದ್ದಾರೆ.





ರವಿಚಂದ್ರನ್ ಪುತ್ರ ಈಗ ತ್ರಿವಿಕ್ರಮ

VIKRAM RAVICHANDRAN — HIGH VOLTAGE STORY

ಕ್ರೇಜಿಸ್ಟಾರ್ ರವಿಚಂದ್ರನ್ ಅವರ ಪುತ್ರ ವಿಕ್ರಮ್ ನಟಿಸಿರುವ 'ತ್ರಿವಿಕ್ರಮ' ಜೂ.24ರಂದು ರಾಜ್ಯಾದ್ಯಂತ ಬಿಡುಗಡೆಯಾಗುತ್ತಿದೆ. ಬಿಡುಗಡೆ ದಿನಾಂಕ ಅನೌನ್ಸ್ ಮಾಡಲೆಂದೇ ಚಿತ್ರತಂಡ ಪತ್ರಿಕಾಗೋಷ್ಠಿ ಕರೆದಿತ್ತು. ಹಿರಿಯನಟಿ ತಾರಾ, ಶರಣ್, ಮನುರಂಜನ್, ಸಾಧು ಕೋಕಿಲ, ಆದಿಲೋಕೇಶ್, ಶಿವಮಣಿ, ಸಂತೋಷ್ ಆನಂದರಾಮ್ ಮುಂತಾದವರು ಈ ಕಾರ್ಯಕ್ರಮದಲ್ಲಿ ಹಾಜರಿದ್ದರು.

ಸಹನಾಮೂರ್ತಿ ನಿರ್ದೇಶನದ ಈ ಚಿತ್ರಕ್ಕೆ ರಾಮ್ಕೋ ಸೋಮಣ್ಣ ಅವರು ಬಂಡವಾಳ ಹಾಕಿದ್ದಾರೆ. ಸಹನಾಮೂರ್ತಿ ನನ್ನ ಸ್ನೇಹಿತ. ಆತ ಈ ಚಿತ್ರದ ಕಥೆ ಮಾಡಿಕೊಂಡು ಅನೇಕರ ಹತ್ತಿರ ಹೇಳುತ್ತಿದ್ದ. ಕೊನೆಗೆ ನಾನೂ ಕೇಳಿದೆ. ತುಂಬಾ ಚೆನ್ನಾಗಿದೆ ಅನಿಸಿತು, ಹಾಗಾಗಿ ಈ ಸಿನಿಮಾ ನಿರ್ಮಾಣಕ್ಕೆ ಮುಂದಾದೆ. ಚಿತ್ರದ ಕ್ಲೈಮ್ಯಾಕ್ಸ್ ನಿಜಕ್ಕೂ ಅದ್ಭುತವಾಗಿ ಮೂಡಿಬಂದಿದೆ. 2019ರಲ್ಲಿ ಚಿತ್ರ ಆರಂಭವಾಯಿತು. ಅಪ್ಪು ಅವರೇ ಬಂದು ಕ್ಲಾಪ್ ಮಾಡಿದ್ದರು. ಚಿತ್ರದ ಎಲ್ಲಾ ಇವೆಂಟ್‌ಗಳಿಗೂ ಬರುವ ಭರವಸೆ ನೀಡಿದ್ದರು. ಆದರೆ ವಿಧಿಲಿಖಿತವೇ ಬೇರೆಯಾಗಿತ್ತು. ಈ ಸಮಯದಲ್ಲಿ ಅವರನ್ನು ನೆನಪಿಸಿಕೊಳ್ಳುತ್ತೇನೆ ಎಂದು ಸೋಮಣ್ಣ ಹೇಳಿದರು.

ನಾಯಕ ವಿಕ್ರಮ್ ಮಾತನಾಡಿ, ಈ ಚಿತ್ರದ ಕಥೆಯನ್ನು ನಾನು ಪುನೀತ್ ಅವರಿಗೆ ಹೇಳಿದಾಗ ತುಂಬಾ ಇಷ್ಟಪಟ್ಟಿದ್ದರು. ಒಂದು ಹಾಡನ್ನೂ ಹಾಡುತ್ತೇನೆ ಅಂದಿದ್ದರು. ಅವರು ನಮ್ಮ ಜೊತೆಗೇ ಇದ್ದಾರೆ. ಈ ಚಿತ್ರದ ಕಥೆಯನ್ನು ನಾನು ನಮ್ಮಪ್ಪನಿಗೂ ಪೂರ್ತಿ ಹೇಳಿಲ್ಲ. ಕಥೆ ಗೊತ್ತಿರುವುದು ನನಗೆ, ಅಪ್ಪು ಹಾಗೂ ಶಿವಣ್ಣ ಅವರಿಗೆ. ನಾನು ರವಿಚಂದ್ರನ್ ಮಗನಾದರೂ ಚಿತ್ರರಂಗಕ್ಕೆ ನಾಯಕನಾಗಿ ಹೊಸಬ ಎಂದರು. ನಿರ್ದೇಶಕ ಸಹನಾಮೂರ್ತಿ ಮಾತನಾಡಿ, ಇದು ನನ್ನ ನಿರ್ದೇಶನದ ಮೂರನೇ ಚಿತ್ರ, ವಿಕ್ರಮ್ ಮಧ್ಯಮ ವರ್ಗದ ಹುಡುಗನಾಗಿ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಗುತ್ತಾರೆ. ಅರ್ಜುನ್ ಜನ್ಯ ಅವರ ಸಂಗೀತದ ಅಮ್ಮನ ಕುರಿತಾದ ಹಾಡು ಈಗಾಗಲೇ ವೈರಲ್ ಆಗಿದೆ. ನಾಯಕಿಯಾಗಿ ಆಕಾಂಕ್ಷಶರ್ಮ ಅಭಿನಯಿಸಿದ್ದಾರೆ. ಜೂನ್ 24 ಚಿತ್ರ ತೆರೆಗೆ ಬರಲಿದೆ ಎಂದರು. ನಟ ಸಾಧುಕೋಕಿಲ ಅವರು ಚಿತ್ರೀಕರಣ ಸಮಯದಲ್ಲಾದ ಅನುಭವಗಳನ್ನು ಹೇಳಿಕೊಂಡರು.



ತ್ರಿವಿಕ್ರಮ ಚಿತ್ರದಲ್ಲಿ ನಾಯಕಿ ಆಕಾಂಕ್ಷಶರ್ಮ

ಕುತೂಹಲ ಹುಟ್ಟಿಸುವ ಫಿಸಿಕ್ಸ್ ಟೀಚರ್

ಕಿರುತೆರೆಯಲ್ಲಿ ಸುಮಾರು ವರ್ಷಗಳಿಂದ ಗುರುತಿಸಿಕೊಂಡಿರುವ ಶಶಿಕುಮಾರ್ ಹಾಗೂ ನಂದಿತಾ ಅವರ ಪುತ್ರ ಸುಮುಖ ನಿರ್ದೇಶಿಸಿ, ನಾಯಕನಾಗಿ ನಟಿಸಿರುವ ಚಿತ್ರ 'ಫಿಸಿಕ್ಸ್ ಟೀಚರ್'. ಸಸ್ಪೆನ್ಸ್ ಥ್ರಿಲ್ಲರ್ ಕಥಾಹಂದರ ಇರುವ ಈ ಚಿತ್ರದ ಟ್ರೇಲರ್ ಇತ್ತೀಚೆಗೆ ಬಿಡುಗಡೆಯಾಗಿದೆ. ಇದೇ ಇಪ್ಪತ್ತೇಳರಂದು ಚಿತ್ರ ರಾಜ್ಯಾದ್ಯಂತ ಬಿಡುಗಡೆಯಾಗುತ್ತಿದೆ. ಈಗಾಗಲೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಈ ಚಿತ್ರ ಪ್ರದರ್ಶನಗೊಂಡು, ಮೆಚ್ಚುಗೆಗೆ ಪಾತ್ರವಾಗಿದೆ.

ಈ ಸಂದರ್ಭದಲ್ಲಿ ನಿರ್ದೇಶಕ, ನಟ ಸುಮುಖ ಮಾತನಾಡುತ್ತ, ಇದು ಬೇರೆಯದೇ ರೀತಿಯ ಸಿನಿಮಾ, ಹಾಗೆಂದ ಕೂಡಲೇ ಆರ್ಟ್ ಸಿನಿಮಾ ಥರ ಅಲ್ಲ. ಸಾಕಷ್ಟು ಕಮರ್ಷಿಯಲ್ ಎಲಿಮೆಂಟ್ ಈ ಚಿತ್ರದಲ್ಲಿವೆ. ಎಲ್ಲಾ ನಟರ ಅಭಿನಯ ಚೆನ್ನಾಗಿದೆ. ಮೇ 27 ತೆರೆಗೆ ಬರುತ್ತಿದೆ ಎಂದರು. ಬಿಡುಗಡೆಗೂ ಮುನ್ನವೇ ನಮ್ಮ ಚಿತ್ರಕ್ಕೆ ಸಿಗುತ್ತಿರುವ ಪ್ರತಿಕ್ರಿಯೆ ಕಂಡು ಸಂತೋಷವಾಗಿದೆ. ಈಗ ಟ್ರೇಲರ್ ಬಂದಿದೆ. ಸದ್ಯ ಹಾಡೊಂದು ಸಹ ಬಿಡುಗಡೆಯಾಗಲಿದೆ ಎಂದರು ನಾಯಕಿ ಪ್ರೇರಣ ಕಂಬಂ.

ಸುಮುಖನನ್ನು ಹುಟ್ಟಿದ ದಿನದಿಂದ ನೋಡಿದ್ದೀನಿ. ಅವನ ಜೊತೆ ಕೆಲಸ ಮಾಡಿದ್ದು ಖುಷಿ ತಂದಿದೆ. ಆತ ಉತ್ತಮ ನಿರ್ದೇಶಕ. ಆದರೆ ಅದಕ್ಕಿಂತ ಆತ ಉತ್ತಮ ನಟ ಎನ್ನುತ್ತೇನೆ. ಈ ಸಿನಿಮಾ ಜನರ ಮೆಚ್ಚುಗೆ ಪಡೆಯಲಿ ಎಂದರು ನಟ ರಾಜೇಶ್ ನಟರಂಗ.


ನಿರ್ಮಾಪಕ ಶಶಿಕುಮಾರ್, ನಂದಿತಾ, ಪ್ರಹರ್ಷ, ಲೇಖಕ ಜೋಗಿ, ಕಥೆ ಬರೆದಿರುವ ಸ್ಕಂದ ಸುಬ್ರಹ್ಮಣ್ಯ ಹಾಗೂ ನಿರ್ಮಾಣ ನಿರ್ವಾಹಕ ಅಕ್ಷಯ್ "ಫಿಸಿಕ್ಸ್ ಟೀಚರ್"ಗೆ ಶುಭಕೋರಿದರು.



ನಟ ಸುಮುಖ, ನಾಯಕಿ ಪ್ರೇರಣ ಕಂಬಂ

ಸಿನಿಪದಬಂಧ-007

ಆಜ಼ಾದ್ ಜಿ. ಆಚಾರ್ಯ 6361429085



ಹೆಸರು

ವಿಳಾಸ

ದೂರವಾಣಿ ಸಂಖ್ಯೆ

ಎಡದಿಂದ ಬಲಕ್ಕೆ

1. ಬೆಂಕಿಯಲ್ಲಿ ಬಂಧಿಯಾದ ದೇವರಾಜ್-ವಿನಯಪ್ರಸಾದ್ 5
4. ಬರಗೂರು ರಾಮಚಂದ್ರಪ್ಪ ನಿರ್ದೇಶನದಲ್ಲಿ ಭಾಗಿಯಾದ ತಾರಾ 4
7. ಶರಣ್-ಅಸ್ಮಿತಾರಿಗೆ ಸಿಕ್ಕ ಗೆಲುವು 3
8. ಡಾ. ರಾಜ್-ಅಂಬರೀಶ್ ಒಂದೇ ತಾಯಿಯ ಮಕ್ಕಳು 7
13. ------- ಯಾರಮ್ಮಾ? ಮನಮೆಚ್ಚಿದ ಹುಡುಗಿಗೆ ಶಿವಣ್ಣ ಕೇಳಿದ್ದು 7
14. ನವಿಲಿನ ಹೆಸರಿನ ಡಾ.ರಾಜ್ ಸಿನಿಮಾ 3
18. ಸುರೇಶ್ ಹೆಬ್ಳೀಕರ್ ಮಾಡಿದ ಮ್ಯಾಜಿಕ್ 4
19. ಭುಜಂಗಯ್ಯನ ----- 5

ಮೇಲಿನಿಂದ ಕೆಳಕ್ಕೆ

1. ರವಿಚಂದ್ರನ್ ನಟನೆಯಲ್ಲಿ ಎರಡು ತಲೆಮಾರುಗಳ ಪ್ರೀತಿ 3
2. ---ವೇದ 3
3. ದ್ವಾರಕೀಶ್ ನಿರ್ದೇಶನದ ರವಿಚಂದ್ರನ್-ಭಾನುಪ್ರಿಯ ಚಿತ್ರ 3
4. ದ್ವಾರಕೀಶ್ ನಿರ್ಮಾಣದ ಪುಣ್ಯವಂತರು 5
5. ಯುದ್ಧ ಶೂರ ಪುನೀತ್ ರಾಜಕುಮಾರ್ 5
6. ದಿಗಂತ್-ಐಂದ್ರಿತಾ ರೈ ಚಿತ್ರ, ದೇವಲೋಕದ ಹೂವು 4
9. ಶ್ರೀನಗರ --, ಶೀರ್ಷಾಸನದಲ್ಲಿ 2
10. ಯು. ಆರ್. ಅನಂತಮೂರ್ತಿ ಕಾದಂಬರಿ ಆಧಾರಿತ ಚಿತ್ರ 2
11. ಸುರೇಶ್ ಹೆಬ್ಳೀಕರ್ ನಟನೆಯ ಕಬ್ಬಿನ ಹಾಲು ಅರೆಯುವ ಸ್ಥಳ 4
12. ಕುಮಾರ್ ಬಂಗಾರಪ್ಪ ನಟನೆಯ "ಸಾವಿಲ್ಲದ ಪ್ರೀತಿ" 5
13. ನಮ್ಮ ಪ್ರೀತಿಗೆರಡೇ ಅಕ್ಷರ, ಅದರಾಳ ------ 5
15. ಗಿರೀಶ್ ಕಾರ್ನಾಡ್ ನಟನೆಯ ಚಿತ್ರ, ---ಭೈರವಿ 3
16. ದುರ್ಯೋಧನನಾದ ಬಿ.ಸಿ ಪಾಟೀಲ್ 3
17. ನಮ್ಮೂರ---, ಅಂಬರೀಶ್ ಚಿತ್ರ 3

ಸಿನಿ ಪದಬಂಧ 006ರ ಸರಿ ಉತ್ತರ

ಅ	ಮ	ರ	ಶಿ	ಲ್ಪಿ	ಜ	ಕ	ಣಾ	ಚಾ	ರಿ	■
ಜ್ಞಾ	■	■	■	■	ಯ	■	■	■	■	ಮ್ಯ
ತ	■	ಸಾ	ಹ	ಸ	ಸಿಂ	ಹ	■	ಪ	ತಂ	ಗಾ
ವಾ	■	■	■	■	ಹ	■	ವೀ	■	■	ಲ
ಸ	ನಾ	ದಿ	■	ಮು	■	ಆ	ರ	ದ	ಗಾ	ಯ
■	■	■	■	ಕುಂ	■	ಹು	■	■	■	■
ಆ	ನಂ	ದ	ಕಂ	ದ	■	ತಿ	■	ಕ	ದಂ	ಬಾ
ಪ್ತ	■	■	ರಿ	■	ಈ	■	■	■	■	ಳು
ಮಿ	ಲ	ನ	■	ಸಂ	ಬಂ	ಧ	ಸ್ನೇ	ಹ	■	ಬಂ
ತ್ರ	■	■	■	■	ಧ	■	■	■	■	ಗಾ
■	ಭು	ಜಂ	ಗ	ಯ್ಯ	ನ	ದ	ಶಾ	ವ	ತಾ	ರ

ವಿಜೇತರು: ಹು.ವೆಂ.ಮಿತ್ರ
285/1, ದಿವಾನ್ಸ್ ರಸ್ತೆ,
ಚಾಮರಾಜ ಮೊಹಲ್ಲಾ, ಮೈಸೂರು

ಕಾಣೆಯಾದ ಯುವತಿಯ ಸುತ್ತ ಟ್ವೆಂಟಿ ಒನ್ ಹವರ್ಸ್



ಬಡವ ರಾಸ್ಕಲ್ ಖ್ಯಾತಿಯ ಡಾಲಿ ಧನಂಜಯ್ ಈಗ ಸಸ್ಪೆನ್ಸ್, ಥ್ರಿಲ್ಲರ್ ಚಿತ್ರದಲ್ಲಿ ಅಭಿನಯಿಸಿದ್ದಾರೆ. ಆ ಚಿತ್ರದ ಹೆಸರು '21 ಹವರ್ಸ್'. ಜೈಶಂಕರ್‌ಪಂಡಿತ್ ನಿರ್ದೇಶನದ ಈ ಚಿತ್ರದ ಟ್ರೇಲರ್ ಇತ್ತೀಚೆಗೆ ಬಿಡುಗಡೆಯಾಯಿತು. ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಧನಂಜಯ್, ಮಲೆಯಾಳಿ ಹುಡುಗಿಯೊಬ್ಬಳು ಬೆಂಗಳೂರಿಗೆ ಬಂದು ಕಾಣೆಯಾದಾಗ, ಆಕೆಯ ಹುಡುಕಾಟದ ಸುತ್ತ ನಡೆಯುವ ಘಟನೆಗಳೇ ಈ ಚಿತ್ರದ ಕಥಾವಸ್ತು. ಒಬ್ಬ ತನಿಖಾಧಿಕಾರಿಯಾಗಿ ನಾನೀ ಚಿತ್ರದಲ್ಲಿ ಅಭಿನಯಿಸಿದ್ದೇನೆ. ಕರ್ನಾಟಕ ಹಾಗೂ ಕೇರಳದಲ್ಲಿ ನಡೆಯುವ ಕಥೆಯಾಗಿರುವುದರಿಂದ ಚಿತ್ರದಲ್ಲಿ ಕನ್ನಡ ಹಾಗೂ ಮಲೆಯಾಳಂನಲ್ಲಿ ಸಂಭಾಷಣೆಗಳಿವೆ ಬಹಳ ದಿನಗಳ ನಂತರ ಸಸ್ಪೆನ್ಸ್, ಥ್ರಿಲ್ಲರ್ ಚಿತ್ರವೊಂದರಲ್ಲಿ ನಟಿಸಿರುವುದಾಗಿ ಹೇಳಿದರು.

ನಂತರ ನಿರ್ದೇಶಕ ಜೈಶಂಕರ್ ಪಂಡಿತ್ ಮಾತನಾಡಿ, ನಾನು ಮೂಲತಃ ಕರ್ನಾಟಕದವನು. ಆದರೆ ಈಗ ಕೇರಳದಲ್ಲಿದ್ದೇನೆ. ಹಲವಾರು ಜಾಹೀರಾತುಗಳನ್ನು ಮಾಡಿದ್ದೇನೆ. ಕನ್ನಡದಲ್ಲಿ ನನ್ನ ನಿರ್ದೇಶನದ ಮೊದಲ ಚಿತ್ರವಿದು. ಇಪ್ಪತ್ತೊಂದು ಗಂಟೆಗಳಲ್ಲಿ ನಡೆಯುವ ಈ ಕುತೂಹಲಕಾರಿ ಕಥೆಯಲ್ಲಿ ಹಲವಾರು ತಿರುವುಗಳು, ವಿಶೇಷತೆಗಳಿವೆ. ಧನಂಜಯ್ ಜೊತೆ ಕೆಲಸ ಮಾಡಿದ್ದು ಸಂತೋಷವಾಗಿದೆ ಎಂದು ಹೇಳಿದರು.

ಮತ್ತೊಬ್ಬ ನಟ ಸುದೇವ್ ನಾಯರ್ ಮಾತನಾಡುತ್ತ, ನಾನು ಈ ಹಿಂದೆ ಓಲ್ಡ್‌ಮಾಂಕ್ ಚಿತ್ರದಲ್ಲಿ ನಟಿಸಿದ್ದೆ. ಈ ಚಿತ್ರದಲ್ಲಿ ಧನಂಜಯ್ ಜೊತೆಗೆ ಒಂದೊಳ್ಳೆ ಪಾತ್ರದಲ್ಲಿ ಅಭಿನಯಿಸಿದ ಖುಷಿಯಿದೆ ಎಂದರು. ಉಡುಪಿ ಮೂಲದ ನಟ ರಾಹುಲ್‌ಮಾಧವ ಮಾತಾಡುತ್ತ, ನಾನು ಕರ್ನಾಟಕದವನೇ ಆದರೂ ಬೆಳೆದಿದ್ದು ಕೇರಳದಲ್ಲಿ. ಹಿಂದೆ ಟಿ.ಎನ್.ಸೀತಾರಾಮ್ ಅವರ ಕಾಫಿತೋಟ ಚಿತ್ರದಲ್ಲಿ ಅಭಿನಯಿಸಿದ್ದೆ. ಈಗ ಈ ಚಿತ್ರದಲ್ಲಿ ನಟಿಸಿದ್ದೇನೆ ಎಂದು ಹೇಳಿದರು. ಚಿತ್ರದ ನಿರ್ಮಾಪಕರಾದ ಬಾಲಕೃಷ್ಣ ಎನ್.ಎಸ್, ಅಭಿಷೇಕ್ ರುದ್ರಮೂರ್ತಿ, ಸುನೀಲ್‌ಗೌಡ ಹಾಗೂ ಪ್ರವೀಣ್ ಮಹದೇವ್ ಚಿತ್ರದ ಕುರಿತಂತೆ ಬಗ್ಗೆ ಮಾತನಾಡಿದರು. ರುಪರ್ಟ್ ಫರ್ನಾಂಡಿಸ್ ಸಂಗೀತ ನಿರ್ದೇಶನ, ತಿರುನವುಕ್ಕರಸು ಅವರ ಛಾಯಾಗ್ರಹಣ, ರಿಚರ್ಡ್ ಕೆವಿನ್ ಅವರ ಸಂಕಲನ ಹಾಗೂ ಪ್ರತಾಪ್ ಆರ್. ಮೆಂಡನ್ ಅವರ ಕಲಾನಿರ್ದೇಶನವಿರುವ ಈ ಚಿತ್ರಕ್ಕೆ ಸುಕೃತ್ ವಿ. ಹಾಗೂ ಡಿ.ವಿ.ಬಾಲಸುಬ್ರಹ್ಮಣ್ಯ ಸಂಭಾಷಣೆ ಬರೆದಿದ್ದಾರೆ. ಶೋಭಾ ಅಂಜನಪ್ಪ ಈ ಚಿತ್ರದ ಕಾರ್ಯಕಾರಿ ನಿರ್ಮಾಪಕರು. ಕೆ.ಆರ್.ಜಿ. ಸ್ಟುಡಿಯೋಸ್ ಮೂಲಕ ಮೇ 20ರಂದು 21 ಹವರ್ಸ್ ಬಿಡುಗಡೆಯಾಗುತ್ತಿದೆ.

ಸಾಟರ್‌ಡೇ ನೈಟಲಿ, ಪಾರ್ಟಿ ಮೂಡಲಿ..



ವೀಕೆಂಡ್ ಬಂತೆಂದರೆ ಬೆಂಗಳೂರಿಗರಿಗೆ ಎಲ್ಲಿಲ್ಲದ ಹೊಸ ಉತ್ಸಾಹ. ಅದರಲ್ಲೂ ಐಟಿ, ಬಿಟಿ ಕಂಪನಿಗಳಲ್ಲಿ ಕೆಲಸ ಮಾಡುವವರಿಗಂತೂ ಹಬ್ಬ. ಇದೇ ಮೂಡಲ್ಲಿ ಇಲ್ಲೊಂದು ತಂಡ ಸಾಟರ್‌ಡೇ ನೈಟಲಿ ಎಂಬ ಹೆಸರಿನ ಆಲ್ಬಮ್ ಸಾಂಗ್‌ವೊಂದನ್ನು ರೆಡಿಮಾಡಿದೆ. ಆ ಹಾಡಿನ ಬಿಡುಗಡೆ ಕಾರ್ಯಕ್ರಮ ಇತ್ತೀಚೆಗೆ ನೆರವೇರಿತು. ಶ್ರೀಮಹದೇವ್ ಹಾಗೂ ಪೂಜಾ ಅಭಿನಯದ ಈ ಹಾಡನ್ನು ಪ್ರಣವ್ ಆಡಿಯೋ ಕಂಪನಿ ಹೊರತಂದಿದೆ. ರವಿಕುಮಾರ್ ಅವರ ನಿರ್ದೇಶನದ ಈ ಹಾಡಿಗೆ ಪ್ರೇಮ್ ಭರತ್ ಸಂಗೀತ ಸಂಯೋಜನೆ ಮಾಡಿದ್ದಾರೆ. ನಾಗರಾಜಮೂರ್ತಿ ಇದರ ಕ್ಯಾಮೆರಾ ವರ್ಕ್ ನಿಭಾಯಿಸಿದ್ದಾರೆ.

ಫಿಲಂ ಚೇಂಬರ್ ಉಪಾಧ್ಯಕ್ಷ ಉಮೇಶ್ ಬಣಕಾರ್ ಮುಖ್ಯ ಅತಿಥಿಯಾಗಿ ಆಗಮಿಸಿ ಪ್ರಣವ್ ಆಡಿಯೋ ಲೋಗೋ ಲಾಂಚ್ ಮಾಡಿದರು. ಸಂತೃಪ್ತಿ ಕಂಬೈನ್ಸ್‌ನ ವಿರೂಪಾಕ್ಷ, ಬ್ಯುಸಿನೆಸ್ ಹೆಡ್ ರಶ್ಮಿತಾ ವೆಂಕಟೇಶ್, ಕಲಾವಿದರಾದ ಶ್ರೀ(ಮಹದೇವ್), ಪೂಜಾ, ನಿರ್ದೇಶಕ ರವಿಕುಮಾರ್ ಹಾಗೂ ಇತರರು ವೇದಿಕೆಯಲ್ಲಿ ಹಾಜರಿದ್ದರು. ಈ ಸಂದರ್ಭದಲ್ಲಿ ಮಾತನಾಡಿದ ರವಿಕುಮಾರ್, ಏನಾದರೂ ಹೊಸದಾಗಿ ಮಾಡಬೇಕು ಎಂದುಕೊಂಡಾಗ ಈ ಐಡಿಯಾ ಹೊಳೆಯಿತು. ಎಂಜಿ ರಸ್ತೆ ಹಾಗೂ ಚರ್ಚ್ ಸ್ಟ್ರೀಟ್‌ನಲ್ಲಿ 2 ದಿನ ರಾತ್ರಿ ವೇಳೆಯಲ್ಲಿ ಈ ಹಾಡನ್ನು ಶೂಟ್ ಮಾಡಿದ್ದೇವೆ ಎಂದರು. ನಾಯಕನಟ ಶ್ರೀ ಮಾತನಾಡಿ, ನನ್ನ ಮೊದಲ ಆಲ್ಬಂ ಇದು, ಸಿದ್ದು ಹಾಗೂ ಪ್ರೇಮ್ ಬಂದು ಈ ಹಾಡಿನ ಬಗ್ಗೆ ಹೇಳಿದರು, ಹಾಡು ತುಂಬಾ ಕ್ಯಾಚಿ ಆಗಿತ್ತು, ಡ್ಯಾನ್ಸ್ ಕೂಡ ಇದೆ ಎಂದರು. ನಾಯಕಿ ಪೂಜಾ ಮಾತನಾಡಿ ತಾನು ಈ ಹಾಡಿನ ಮೂಲಕ ಮೊದಲ ಬಾರಿಗೆ ಬಣ್ಣ ಹಚ್ಚುತ್ತಿರುವುದಾಗಿ ಹೇಳಿದರು.

ಸಿದ್ದು ಅವರ ರಚನೆಯ ಈ ಆಲ್ಬಮ್ ಹಾಡಿಗೆ ಅನಿರುದ್ದ ಶಾಸ್ತ್ರಿ ದನಿಯಾಗಿದ್ದಾರೆ.

ಸರ್ಕಾರದ ಅನುದಾನ ಸಮರ್ಪಕವಾಗಿ ಸದ್ಬಳಕೆಯಾಗಲಿ

ಜಿಪಂ ಆಡಳಿತಾಧಿಕಾರಿ ರಾಮ್ ಪ್ರಸಾದ್ ಮನೋಹರ್



ಮಂಡ್ಯ,ಮೇ 12(ಮೋಹನ್‌ರಾಜ್)– ಜಿಲ್ಲೆಯಲ್ಲಿ ವಿವಿಧ ಇಲಾಖೆಗಳಲ್ಲಿ ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಕ್ಷಿಪ್ರಗತಿಯಲ್ಲಿ ಸಾಗಬೇಕು. ನಿಗದಿಪಡಿಸಿದ ಸಮಯಕ್ಕೆ ಪೂರ್ಣಗೊಳ್ಳಬೇಕು. ಸರ್ಕಾರದ ಅನುದಾನ ಸಮರ್ಪಕವಾಗಿ ಸದ್ಬಳಕೆಯಾಗಬೇಕು ಎಂದು ಜಿಲ್ಲಾ ಪಂಚಾಯತ್‌ನ ಆಡಳಿತ ಅಧಿಕಾರಿ ಡಾ.ವಿ. ರಾಮ್ ಪ್ರಸಾದ್ ಮನೋಹರ್ ತಿಳಿಸಿದರು.

ಜಿಲ್ಲಾ ಪಂಚಾಯತ್‌ನ ಕಾವೇರಿ ಸಭಾಂಗಣದಲ್ಲಿ ನಡೆದ ಕೆ.ಡಿ.ಪಿ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸರ್ಕಾರದ ಸೌಲಭ್ಯಗಳು ಸಾರ್ವಜನಿಕರಿಗೆ ಸಮರ್ಪಕವಾಗಿ ತಲುಪುವ ರೀತಿ ಕಾರ್ಯ ನಿರ್ವಹಿಸಿ, ಇಲ್ಲವಾದಲ್ಲಿ ಕ್ರಮ ಕೈಗೊಳ್ಳಲಾಗುವುದು. ಅಧಿಕಾರಿಗಳು ಮಾಡುವ ಕೆಲಸ ತೃಪ್ತಿದಾಯಕವಾಗಿರಬೇಕು. ನಿಯಮಾನುಸಾರವಾಗಿ ಕರ್ತವ್ಯ ನಿರ್ವಹಿಸಿ ಎಂದು ಅಧಿಕಾರಿಗಳಿಗೆ ಸಲಹೆ ನೀಡಿದರು.

ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದಿಂದ ವಿವಿಧ ಇಲಾಖೆಗಳ ಕಾಮಗಾರಿಯನ್ನು ಕೈಗೊಳ್ಳಲಾಗಿದೆ. ಕಾಮಗಾರಿಗಳು ನಿಗದಿಪಡಿಸಿರುವಂತೆ ಪಾರದರ್ಶಕವಾಗಿ ಪೂರ್ಣಗೊಳ್ಳಬೇಕು ಹಾಗೂ ಗುಣಮಟ್ಟದಿಂದ ಕೂಡಿರಬೇಕು. ಈ ಕುರಿತಂತೆ ಇಲಾಖೆ ಅಧಿಕಾರಿಗಳು ಹಾಗೂ ಸಂಬಂಧಿಸಿದ ತಾಲೂಕು ಕಾರ್ಯನಿರ್ವಾಹಕ ಅಧಿಕಾರಿಗಳು ಪರಿಶೀಲನೆ ನಡೆಸಿ ವರದಿ ನೀಡಬೇಕು. ವರದಿಯ ಆಧಾರದ ಮೇಲೆ ಖುದ್ದು ಭೇಟಿ ನೀಡಿ ಕಾಮಗಾರಿಗಳ ಪರಿಶೀಲನೆ ನಡೆಸುತ್ತೇನೆ. ಲೋಪ ಕಂಡುಬಂದಲ್ಲಿ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಕೆ ನೀಡಿದರು. ಕಾಮಗಾರಿಯನ್ನು ಗುತ್ತಿಗೆದಾರರು ನಿಗದಿತ ಸಮಯದಲ್ಲಿ ಪೂರ್ಣಗೊಳಿಸಬೇಕು. ಇದಕ್ಕೆ ಸಂಬಂಧಿಸಿದಂತೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಒಪ್ಪಂದದಲ್ಲಿ ನಿಗದಿತ ಸಮಯದಲ್ಲಿ ಪೂರ್ಣಗೊಳಿಸದಿದ್ದರೆ ದಂಡ ವಿಧಿಸುವ ಬಗ್ಗೆ ಉಲ್ಲೇಖವಿದ್ದರೆ, ಒಪ್ಪಂದದಂತೆ ಕ್ರಮಕೈಗೊಳ್ಳಿ ಎಂದರು.

ಪಿಎಂಜಿಎಸ್‌ವೈ ಹಂತದಲ್ಲಿ ಅನುಮೋದನೆಗೊಂಡ ಕಾಮಗಾರಿಗಳ ಕುರಿತು ಚರ್ಚಿಸಿ 30 ನೂತನ ಕಾಮಗಾರಿಯಲ್ಲಿ 11 ಪೂರ್ಣಗೊಂಡು, 21 ಕಾಮಗಾರಿಗಳ ಪ್ರಗತಿಯಲ್ಲಿನ ಮಾಹಿತಿ ಪಡೆದ ಅವರು, ಬಾಕಿ ಉಳಿದ ಕೆಲಸವನ್ನು ಪೂರ್ಣಗೊಳಿಸಿ. ಬಾಕಿ ಉಳಿದಿರುವ ಕಾಮಗಾರಿಗಳಿಗೆ ಟೆಂಡರ್ ಕರೆದು ಸಂಬಂಧಪಟ್ಟವರ ಜೊತೆ ಪರಿಶೀಲಿಸಿ, ಸಕಾಲದಲ್ಲಿ ಪೂರ್ಣಗೊಳಿಸಿ ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಜೂನ್ ಅಂತ್ಯದೊಳಗೆ ಉಳಿದಿರುವ ಎಲ್ಲಾ ಇಲಾಖೆಯ ಕಾಮಗಾರಿಗಳನ್ನು ಪೂರ್ಣಗೊಳಿಸಿ. ಪರಿಶೀಲನೆಗಾಗಿ ವಿಶೇಷ ತಂಡಗಳನ್ನು ರಚಿಸಲಾಗುವುದು. ಸರ್ಕಾರ ನೀಡುವ ಅನುದಾನವನ್ನು ಸರಿಯಾಗಿ ಬಳಕೆ ಮಾಡುವಂತಹ ನಿಟ್ಟಿನಲ್ಲಿ ಎಲ್ಲಾ ಇಲಾಖೆಯ ಅಧಿಕಾರಿಗಳು ಜಾಗರೂಕತೆಯಿಂದ ಕರ್ತವ್ಯ ನಿರ್ವಹಿಸಿ. ಯಾವುದೇ ಲೋಪಕ್ಕೆ ಅವಕಾಶ ನೀಡಬೇಡಿ ಎಂದರು.

ಸಿಇಓ ಎಸ್.ಎಂ.ದಿವ್ಯ ಪ್ರಭು ಮಾತನಾಡಿ, ಯಾವುದೇ ಕೆಲಸ ಮಾಡುವಾಗ ಒಂದು ಗುರಿ ಇಟ್ಟು ಸಮಯಕ್ಕೆ ಸರಿಯಾಗಿ ಕಾರ್ಯ ನಿರ್ವಹಿಸಿ. ಸರ್ಕಾರ ನೀಡುವಂತಹ ಅನುದಾನ ಸದುಪಯೋಗ ಮಾಡಿ, ಇಲಾಖೆಯಲ್ಲಿ ಗುಣಮಟ್ಟದ ಕಾಮಗಾರಿಗಳ ಬಗ್ಗೆ ಕಾಳಜಿ ವಹಿಸಿ. ಮಾರ್ಚ್ ಅಂತ್ಯದ ಕಾರ್ಯಗಳು ಪೂರ್ಣಗೊಂಡಿಲ್ಲದ ಇಲಾಖಾ ಅಧಿಕಾರಿಗಳು ಶೀಘ್ರ ಪೂರ್ಣಗೊಳಿಸಬೇಕು ಎಂದರು.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಯೋಜನೆಯಂತೆ ಜಲ ಜೀವನ್ ಮಿಷನ್ ನಲ್ಲಿ ಸಾರ್ವಜನಿಕರಿಗೆ ಬೇಕಾದ ಸೌಲಭ್ಯವನ್ನು ವಿಳಂಬವಿಲ್ಲದೆ ಒದಗಿಸಬೇಕು ಎಂದರು.

ಸಭೆಯಲ್ಲಿ ಜಿಪಂ ಉಪ ಕಾರ್ಯದರ್ಶಿ ಸರಸ್ವತಿ, ಯೋಜನಾಧಿಕಾರಿ ಪ್ರಭುಸ್ವಾಮಿ, ಐಎಫ್‌ಎಸ್ ಅಧಿಕಾರಿ ಪಿ.ಯತೀಶ್ ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳಿದ್ದರು.

ಮದುವೆ ಮಂಟಪದಿಂದ ಪರೀಕ್ಷಾ ಕೇಂದ್ರಕ್ಕೆ ಬಂದು ಪರೀಕ್ಷೆ ಬರೆದ ವಧು

ಪಾಂಡವಪುರ,ಮೇ 12– ಮದುವೆ ದಿನವೇ ಪರೀಕ್ಷೆ ನಿಗದಿಯಾಗಿದ್ದರಿಂದ ಚಿನಕುರಳಿಯ ಎಸ್‌ಟಿಜಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿನಿಯೊಬ್ಬಳು ಕಲ್ಯಾಣಮಂಟಪದಿಂದ ನೇರವಾಗಿ ಪರೀಕ್ಷಾ ಕೇಂದ್ರಕ್ಕೆ ತೆರಳಿ ಪರೀಕ್ಷೆ ಬರೆಯುವ ಮೂಲಕ ಮಾದರಿಯಾಗಿದ್ದಾಳೆ.

ತಾಲೂಕಿನ ಚಿನಕುರಳಿಯಲ್ಲಿರುವ ಶಾಸಕ ಸಿ.ಎಸ್.ಪುಟ್ಟರಾಜು ಮಾಲೀಕತ್ವದ ಎಸ್‌ಟಿಜಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಪ್ರಥಮ ವರ್ಷದ ಬಿಕಾಂ ವಿದ್ಯಾಭ್ಯಾಸ ಮಾಡುತ್ತಿರುವ ಎಲ್.ಐಶ್ವರ್ಯ ಅವರಿಗೆ ಬುಧವಾರ ಮದುವೆ ನಿಶ್ಚಯವಾಗಿತ್ತು. ಆದರೆ ಮದುವೆ ದಿನದಂದೇ ಪರೀಕ್ಷೆ ಇದ್ದ ಹಿನ್ನೆಲೆಯಲ್ಲಿ ಧಾರಾ ಕಾರ್ಯಕ್ರಮ ಮುಗಿಸಿ ಹಸೆಮಣೆಯಿಂದ ನೇರವಾಗಿ ಕಾಲೇಜಿಗೆ ತೆರಳಿ ಪರೀಕ್ಷೆ ಬರೆದು ಎಲ್ಲರ ಪ್ರಶಂಸೆಗೆ ಪಾತ್ರರಾಗಿದ್ದಾರೆ.

ತಾಲೂಕಿನ ಲಿಂಗಾಪುರ ಗ್ರಾಮದ ಕಮಲ ಮತ್ತು ಯೋಗೇಂದ್ರ ದಂಪತಿ ಪುತ್ರಿ ಐಶ್ವರ್ಯ ಹಾಗೂ ಮೈಸೂರು ಜಿಲ್ಲೆಯ ಚಿಕ್ಕಬ್ಯಾಡರಹಳ್ಳಿ ಗ್ರಾಮದ ಭಾಗ್ಯಲಕ್ಷ್ಮೀ ಹಾಗೂ ಸೋಮಶೇಖರ್ ದಂಪತಿ ಪುತ್ರ ಅವಿನಾಶ್ ವಿವಾಹ ಪಾಂಡವಪುರ ಪಟ್ಟಣದ ಟಿಎಪಿಸಿಎಂಎಸ್ ಕಲ್ಯಾಣ ಮಂಟಪದಲ್ಲಿ ಬುಧವಾರ ನಿಗದಿಯಾಗಿತ್ತು. ಅದೇ ದಿನ ಬಿಕಾಂ ಪರೀಕ್ಷೆ ಇದ್ದ ಹಿನ್ನೆಲೆಯಲ್ಲಿ ಮದುವೆ ಮುಗಿದ ಬಳಿಕ ಕುಟುಂಬಸ್ಥರು ಹಾಗೂ ಅತ್ತೆ, ಮಾವ, ಪತಿಯ ಅನುಮತಿ ಪಡೆದು ಪರೀಕ್ಷೆ ಕೇಂದ್ರಕ್ಕೆ ಆಗಮಿಸಿ ಪರೀಕ್ಷೆ ಬರೆದಿದ್ದಾರೆ.



ಶಾಸಕ ಹಾಗೂ ಸಂಸ್ಥೆಯ ಸಿಇಓ ಶ್ಲಾಘನೆ: ಹೊಸಬಾಳಿನ ಹೊಸಿಲಿಗೆ ಕಾಲಿಟ್ಟ ಘಳಿಗೆಯಲ್ಲೇ ಭವಿಷ್ಯದ ದೃಷ್ಟಿಯಿಂದ ಜವಾಬ್ದಾರಿಯುತವಾಗಿ ಪರೀಕ್ಷೆ ಬರೆದ ವಿದ್ಯಾರ್ಥಿನಿ ಐಶ್ವರ್ಯ ಹಾಗೂ ಅವರಿಗೆ ಸಹಕಾರ ನೀಡಿದ ಹಿರಿಯರಿಗೆ ಶಾಸಕ ಸಿ.ಎಸ್.ಪುಟ್ಟರಾಜು, ಶಿಕ್ಷಣ ಸಂಸ್ಥೆಯ ಸಿಇಓ ಸಿ.ಪಿ.ಶಿವರಾಜು ಅಭಿನಂದನೆ ಸಲ್ಲಿಸಿದ್ದಾರೆ.

ಮಂಡ್ಯ ಒಕ್ಕೂಟದಿಂದ ಅಧಿಕ ಹಾಲು ಪೂರೈಕೆ

ಪಾಂಡವಪುರ, ಮೇ 12(ಎಸ್.ಚಂದ್ರಶೇಖರ್)– ರಾಜ್ಯದ 14 ಹಾಲು ಒಕ್ಕೂಟಗಳ ಪೈಕಿ ಮಂಡ್ಯ ಒಕ್ಕೂಟದಲ್ಲಿ ಅಧಿಕ ಹಾಲು ಪೂರೈಕೆಯಾಗುತ್ತಿದೆ. ಆದರೆ, ಗುಣಮಟ್ಟದಲ್ಲಿ ಮಾತ್ರ ಕೊನೆಯ ಸ್ಥಾನದಲ್ಲಿದ್ದೇವೆ ಎಂದು ಮನ್‌ಮುಲ್ ನಿರ್ದೇಶಕ ಕಾಡೇನಹಳ್ಳಿ ರಾಮಚಂದ್ರ ಹೇಳಿದರು.

ಪಟ್ಟಣದ ಮನ್‌ಮುಲ್ ಕಚೇರಿಯಲ್ಲಿ ಒಕ್ಕೂಟದಿಂದ ವಿವಿಧ ಯೋಜನೆಗಳ ಫಲಾನುಭವಿಗಳಿಗೆ ಪರಿಹಾರದ ಚೆಕ್ ವಿತರಣೆ ಮಾಡಿ ಮಾತನಾಡಿದರು. ಮಂಡ್ಯ ಒಕ್ಕೂಟಕ್ಕೆ ದಾಖಲೆಯ 9.70 ಲಕ್ಷ ಲೀಟರ್ ಹಾಲು ಪೂರೈಕೆಯಾಗುತ್ತಿದೆ. ಆದರೆ, ಗುಣಮಟ್ಟದಲ್ಲಿ ಮಾತ್ರ ಕೊನೆಯಲ್ಲಿದ್ದೇವೆ. ಹೀಗಾದರೆ ಒಕ್ಕೂಟಕ್ಕೆ ನಷ್ಟ ಉಂಟಾಗಲಿದೆ ಎಂದು ತಿಳಿಸಿದರು.

ರೈತರು ಡೇರಿಗೆ ಗುಣಮಟ್ಟದ ಹಾಲು ಪೂರೈಕೆ ಮಾಡಿದರೆ ಅಧಿಕ ಹಣ ದೊರೆಯಲಿದೆ. ಒಕ್ಕೂಟ ಹಾಗೂ ಸರಕಾರದ ಪ್ರೋತ್ಸಾಹದ ಹಣ ಸೇರಿ ಲೀಟರ್‌ಗೆ 31 ರೂ. ಆಗಲಿದೆ. ಜತೆಗೆ ಒಕ್ಕೂಟವು ಮತ್ತೆ ಪ್ರತಿ ಲೀಟರ್‌ಗೆ 2 ರೂ. ಹಾಲಿನ ದರವನ್ನು ಹೆಚ್ಚಳ ಮಾಡುವುದರ ಬಗ್ಗೆ ಚಿಂತನೆ ನಡೆಸುತ್ತಿದೆ ಎಂದು ಭರವಸೆ ನೀಡಿದರು.

ಒಕ್ಕೂಟದಿಂದ ಸಿಗುವ ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಒಕ್ಕೂಟದಿಂದ ಸುಮಾರು 48 ಮಂದಿಗೆ ವಿವಿಧ ಯೋಜನೆಯ ಸೌಲಭ್ಯದಡಿ 18.56 ಲಕ್ಷ ರೂ. ಪರಿಹಾರ ಹಣದ ಚೆಕ್ ನೀಡಲಾಗುತ್ತಿದೆ. ಅಕಾಲಿಕವಾಗಿ ಸಾವನ್ನಪ್ಪಿದ ರಾಸುಗಳ 29 ಮಂದಿಗೆ ಸುಮಾರು 13.60 ಲಕ್ಷ ಪರಿಹಾರ ಹಣದ ಚೆಕ್ ನೀಡುತ್ತಿದ್ದೇವೆ. ಮರಣ



ಹೊಂದಿದ ಷೇರುದಾರರ ಕುಟುಂಬದ 5 ಮಂದಿಗೆ ತಲಾ 10 ಸಾವಿರದಂತೆ 50 ಸಾವಿರ, ಹಾಲು ಕರೆಯುವ ಯಂತ್ರ ಖರೀದಿಗೆ ಪ್ರೋತ್ಸಾಹ ಧನವಾಗಿ 11 ಮಂದಿಗೆ 1.96 ಲಕ್ಷ ಸಬ್ಸಿಡಿ ಹಣದ ಚೆಕ್ ನೀಡಲಾಗುತ್ತಿದೆ. ಕೋವಿಡ್‌ನಿಂದ ಮೃತಪಟ್ಟ ಕುಟುಂಬದ ಇಬ್ಬರಿಗೆ ತಲಾ 50 ಸಾವಿರದಂತೆ 1 ಲಕ್ಷ ಪರಿಹಾರ ನೀಡಲಾಗುತ್ತಿದೆ ಎಂದರು.

ಉಪವ್ಯವಸ್ಥಾಪಕ ಪ್ರಸಾದ್ ಮಾತನಾಡಿ, ಗುಣಮಟ್ಟದಲ್ಲಿ ಕೊನೆಯ ಸ್ಥಾನದಲ್ಲಿ ಇದ್ದ ತಾಲೂಕು ಈಗ ಎರಡನೇ ಸ್ಥಾನಕ್ಕೆ ಬಂದಿದೆ. ಇನ್ನಷ್ಟು ಸಹಕರಿಸಿದರೆ ಮೊದಲ ಸ್ಥಾನಕ್ಕೆ ಹೋಗಬಹುದು. ಈ ಬಗ್ಗೆ ಎಲ್ಲಾ ಕಾರ್ಯದರ್ಶಿಗಳು ಸಹಕರಿಸಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಮಾರ್ಗ ವಿಸ್ತರಣಾಧಿಕಾರಿಗಳಾದ ಮಂಜುನಾಥ್, ಸಿದ್ದರಾಜು, ಉಷಾ ಸೇರಿದಂತೆ ಹಲವರು ಇದ್ದರು.



ಕೆ.ಆರ್.ಪೇಟೆ ತಾಲೂಕಿನ ಬೀರುವಳ್ಳಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಕಮಲಮ್ಮ ರಾಮೇಗೌಡ ಮತ್ತು ಉಪಾಧ್ಯಕ್ಷರಾಗಿ ಲಕ್ಷ್ಮಮ್ಮ ಕಾಳಯ್ಯ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಇವರನ್ನು ಗ್ರಾಮದ ಮುಖಂಡರು ಹಾಗೂ ಸಂಘದ ಆಡಳಿತ ಮಂಡಳಿ ನಿರ್ದೇಶಕರು ಅಭಿನಂದಿಸಿದರು.

ವಿವಿಧೆಡೆ ಅಭಿಮಾನಿಗಳಿಂದ ಎ.ಸಿ.ಶ್ರೀಕಂಠಯ್ಯ ಪುಣ್ಯಸ್ಮರಣೆ



ಶ್ರೀರಂಗಪಟ್ಟಣ, ಮೇ12(ವಿನಯ್ ಕಾರೇಕುರ)– ತಾಲೂಕಿನ ಕೆ.ಶೆಟ್ಟಿಹಳ್ಳಿ ಗ್ರಾಮದಲ್ಲಿ ದಿ॥ ಎ.ಸಿ.ಶ್ರೀಕಂಠಯ್ಯರವರ 25ನೇ ವರ್ಷದ ಪುಣ್ಯ ಸ್ಮರಣಾರ್ಥ ನೀಲಾಂಚಲ ಟ್ರಸ್ಟ್ ವತಿಯಿಂದ ಎ.ಸಿ.ಶ್ರೀಕಂಠಯ್ಯ ವಿದ್ಯಾ ಸಂಸ್ಥೆಯನ್ನು ಮಾಜಿ ಶಾಸಕಿ ಪಾರ್ವತಮ್ಮ ಶ್ರೀಕಂಠಯ್ಯ ಹಾಗೂ ಶಾಸಕ ರವೀಂದ್ರ ಶ್ರೀಕಂಠಯ್ಯ ಲೋಕಾರ್ಪಣೆಗೊಳಿಸಿದರು.

ನಂತರ ಶಾಸಕ ರವೀಂದ್ರ ಶ್ರೀಕಂಠಯ್ಯ ಮಾತನಾಡಿ, ಕೆ.ಶೆಟ್ಟಿಹಳ್ಳಿ ಸುರೇಶ್ ಅವರು ನಮ್ಮ ತಂದೆಯವರ ಪರಮ ಆಪ್ತರಾಗಿದ್ದು, ಅವರ 25ನೇ ವರ್ಷದ ಪುಣ್ಯ ಸ್ಮರಣಾ ದಿನವೇ ಶಾಲಾ ಕಟ್ಟಡವನ್ನು ಉದ್ಘಾಟಿಸುವುದು ಅವರ ಕನಸಾಗಿತ್ತು. ಇಂದು ಸಮಾಜದ ಸುಧಾರಣೆಗೆ ಶಾಲೆ ಆರಂಭಿಸಿರುವ ಸುರೇಶ್ ನಮ್ಮ ತಂದೆಯವರ ಹೆಸರಿಟ್ಟು ಅವರಿಗೆ ಗೌರವ ಸೂಚಿಸುತ್ತಿರುವುದು ಸಂತಸ ತಂದಿದೆ ಎಂದರು.

ತಾಲೂಕಿನ ಮಕ್ಕಳಿಗೆ ಉತ್ತಮ ಪ್ರಾಥಮಿಕ ಶಿಕ್ಷಣವನ್ನು ನೀಡುವ ಸದುದ್ದೇಶದಿಂದ ಎ.ಸಿ.ಶ್ರೀಕಂಠಯ್ಯ ಅವರ ಹೆಸರಿನಲ್ಲಿ ಆಂಗ್ಲ ಮಾಧ್ಯಮ ಶಾಲೆಯನ್ನು ತೆರೆಯುವ ಮೂಲಕ ಗ್ರಾಮೀಣ ಭಾಗದ ಮಕ್ಕಳು ಗುಣಮಟ್ಟದ ಶಿಕ್ಷಣ ಪಡೆಯಲು ಅನುವು ಮಾಡಿಕೊಟ್ಟಿದ್ದಾರೆ. ಮೈಸೂರಿನ ನುರಿತ ಬೋಧಕ ವರ್ಗ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸಲಿದ್ದು, ಮಕ್ಕಳ ಶೈಕ್ಷಣಿಗೆ ಶ್ರೇಯೋಭಿವೃದ್ಧಿಗೆ ಶಾಲೆ ದಾರಿದೀಪವಾಗಲಿ ಎಂದು ಶುಭ ಹಾರೈಸಿದರು.



ಹಣ್ಣು ಸಿಹಿ ವಿತರಣೆ: ಜಿಲ್ಲೆಯ ಹಿರಿಯ ರಾಜಕಾರಣಿ ದಿವಂಗತ ಎ.ಸಿ.ಶ್ರೀಕಂಠಯ್ಯ ಅವರ 25ನೇ ವರ್ಷದ ಪುಣ್ಯ ಸ್ಮರಣಾರ್ಥ ಪಟ್ಟಣ ಸೇರಿದಂತೆ ತಾಲೂಕಿನ ಹಲವೆಡೆ ಎ.ಸಿ. ಶ್ರೀಕಂಠಯ್ಯರವರ ಅಭಿಮಾನಿಗಳ ಬಳಗ ಸಿಹಿ ಹಾಗೂ ಹಣ್ಣು ಹಂಚುವ ಮೂಲಕ ಸ್ಮರಿಸಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಎ.ಸಿ ಶ್ರೀಕಂಠಯ್ಯ ಅವರ ಅಭಿಮಾನಿ ಬಳಗದ ಅಧ್ಯಕ್ಷ ಹಾಗೂ ಕಾಡಾ ಮಾಜಿ ಸದಸ್ಯ ಹೆಚ್.ಕೆ. ಅಶೋಕ್ ನೇತೃತ್ವದಲ್ಲಿ ನೂರಾರು ಅಭಿಮಾನಿಗಳು ತೆರಳಿ ರೋಗಿಗಳು, ನಾನ್‌ಕ್ಲಿನಿಕಲ್ ಸಿಬ್ಬಂದಿ, ವೈದ್ಯರು ಹಾಗೂ ಆರೋಗ್ಯ ಇಲಾಖಾ ಸಿಬ್ಬಂದಿಗಳಿಗೆ ಹಣ್ಣು ಹಾಗೂ ಸಿಹಿ ವಿತರಣೆ ಮಾಡಿದರು.

ನಂತರ ಹೆಚ್.ಕೆ.ಅಶೋಕ್ ಮಾತನಾಡಿ, ಎ.ಸಿ.ಶ್ರೀಕಂಠಯ್ಯ ಅವರು ಜನಸಾಮಾನ್ಯರೊಂದಿಗೆ ಬೆರೆತು, ಸಮಾಜ ಸೇವೆ ಮಾಡಿ ಅವರ ಕಷ್ಟಗಳಿಗೆ ನೆರವಾದವರು. ಅವರಂತೇ ಕುಟುಂಬದ ಸದಸ್ಯರು ಸಹ ಪ್ರಸ್ತುತ ಸಾಮಾನ್ಯ ಜನರ ಪರವಾಗಿ ಶ್ರಮಿಸುತ್ತಲೇ ಬಂದಿದ್ದಾರೆ ಎಂದರು. ಈ ವೇಳೆ ಜಿ.ಪಂ ಮಾಜಿ ಸದಸ್ಯ ಮರೀಗೌಡ, ಪುರಸಭೆ ಉಪಾಧ್ಯಕ್ಷ ಕೃಷ್ಣಪ್ಪ, ಸ್ಥಾಯಿ ಸಮಿತಿ ಅಧ್ಯಕ್ಷ ಶ್ರೀನಿವಾಸ್, ಸದಸ್ಯ ಎಸ್.ಪ್ರಕಾಶ್, ರವಿಕುಮಾರ್, ಮಾಜಿ ಸದಸ್ಯರಾದ ಜಿ.ಪಿ. ಲಿಂಗೇಗೌಡ, ಜಿ.ಪಿ.ಲಕ್ಷ್ಮಣ್, ಗಂಗಾಧರ್, ಬಾಲು, ಡಾ॥ ವೆಂಕಟೇಶ್, ಡಾ॥ ಮಾರುತಿ ಸೇರಿದಂತೆ ನೂರಾರು ಅಭಿಮಾನಿಗಳು ಇದ್ದರು.

ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಹೊಣೆ

ಘನತ್ಯಾಜ್ಯ ನಿರ್ವಹಣೆ ನಿಯಮಗಳ ಅನುಷ್ಠಾನ ಕುರಿತು ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿ ರಾಜ್ಯ ಸಮಿತಿ ಅಧ್ಯಕ್ಷ ನ್ಯಾಯಮೂರ್ತಿ ಸುಭಾಷ್ ಬಿ.ಆಡಿ ಪ್ರತಿಪಾದನೆ



ಮೈಸೂರು, ಮೇ 12(ಆರ್‌ಕೆ)–ಭಾರತದ ಸಂವಿಧಾನದ ಪ್ರಕಾರ ಪರಿಸರ ರಕ್ಷಿಸುವುದು ಪ್ರತಿಯೊಬ್ಬ ನಾಗರಿಕರ ಜವಾಬ್ದಾರಿ ಎಂದು ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿ ರಾಜ್ಯ ಸಮಿತಿ ಅಧ್ಯಕ್ಷರೂ ಆದ ಮಾಜಿ ಉಪ ಲೋಕಾಯುಕ್ತ ಹಾಗೂ ನಿವೃತ್ತ ಹೈಕೋರ್ಟ್ ನ್ಯಾಯಮೂರ್ತಿ ಸುಭಾಷ್ ಬಿ.ಆಡಿ ಅವರು ಇಂದಿಲ್ಲಿ ತಿಳಿಸಿದ್ದಾರೆ.

ಜಿಲ್ಲಾಡಳಿತ ಮತ್ತು ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಮೈಸೂರಿನ ಆಡಳಿತ ತರಬೇತಿ ಸಂಸ್ಥೆಯಲ್ಲಿ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ಮತ್ತು ಚುನಾಯಿತ ಪ್ರತಿನಿಧಿಗಳಿಗಾಗಿ ಏರ್ಪಡಿಸಿದ್ದ 'ಘನತ್ಯಾಜ್ಯ ನಿರ್ವಹಣೆ ನಿಯಮಗಳು – 2016' ಅನುಷ್ಠಾನ ಕುರಿತ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಸಂವಿಧಾನದ ಪರಿಚ್ಛೇಧ 51ಎ ಪ್ರಕಾರ ನಮ್ಮ ಸುತ್ತಲಿನ ಪರಿಸರ ರಕ್ಷಿಸುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ವಾಯು ಮಾಲಿನ್ಯ, ಜಲ ಮಾಲಿನ್ಯ ತಡೆಗಟ್ಟುವ ಮೂಲಕ ಸ್ವಚ್ಛತೆ ಕಾಪಾಡಿ ರೋಗ–ರುಜಿನ ಬಾರದಂತೆ ಎಚ್ಚರ ವಹಿಸುವುದು ಅತ್ಯವಶ್ಯವಾಗಿದ್ದು, ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು, ಜನಪ್ರತಿನಿಧಿಗಳು, ತ್ಯಾಜ್ಯ ಉತ್ಪತ್ತಿ ಮಾಡುವ ಪ್ರತಿಯೊಬ್ಬ ವ್ಯಕ್ತಿಯೂ ಜಾಗೃತರಾಗುವುದು ಅವಶ್ಯ ಎಂದು ಅಭಿಪ್ರಾಯಪಟ್ಟರು.

ದೇಶದಲ್ಲೇ ಕರ್ನಾಟಕ ರಾಜ್ಯಕ್ಕೆ ವಿಶೇಷ ಸ್ಥಾನವಿದೆ. ಐಟಿ–ಬಿಟಿ, ಇ–ಗವರ್ನೆನ್ಸ್ ನಂತಹ ಹಲವು ಸುಧಾರಿತ ಕ್ರಮಗಳಿಗೆ ಖ್ಯಾತಿಯಾಗಿರುವ ರಾಜ್ಯದಲ್ಲಿ ಸಾಂಸ್ಕೃತಿಕ, ಪಾರಂಪರಿಕ ನಗರಿ ಮೈಸೂರು ನಂ.1 ಸ್ವಚ್ಛನಗರ ಎಂಬ ಖ್ಯಾತಿ ಗಳಿಸಿದ್ದು, ನಂತರ ಸ್ಥಾನಗಳು ಕೈಬಿಟ್ಟು ಹೋಗಿದ್ದರೂ ಮತ್ತೆ ಅದೇ ಸ್ಥಾನಕ್ಕೇರಬೇಕಾಗಿದೆ ಎಂದರು.

ನೀರಿನಲ್ಲಿ, ವಾಯುವಿನಲ್ಲಿ ಮಲೀನ ಅಂಶಗಳು ಸೇರಿದರೆ ಅದರ ದುಷ್ಪರಿಣಾಮ ಮನುಷ್ಯನ ಆರೋಗ್ಯದ ಮೇಲೆ ಬೀರುತ್ತದೆ. ಕೈಗಾರಿಕಾ ತ್ಯಾಜ್ಯ, ಚರಂಡಿ ನೀರು ನಾಲೆ, ಕೆರೆ, ನದಿ ಸೇರಿದರೆ ಅಂತರ್ಜಲ ಕಲುಷಿತವಾಗುತ್ತದೆ. ಅದೇ ರೀತಿ ವಾಯು ಮಾಲಿನ್ಯದಿಂದ ಅನಾರೋಗ್ಯ ಆವರಿಸುತ್ತದೆ. ಕಸ ವಿಂಗಡಣೆ, ಸಂಸ್ಕರಣೆ ಮತ್ತು ವಿಲೇವಾರಿ ಪ್ರಕ್ರಿಯೆ ವೈಜ್ಞಾನಿಕವಾಗಿ ನಡೆಯುವಂತೆ ಅಧಿಕಾರಿಗಳು ನೋಡಿಕೊಳ್ಳಬೇಕು ಎಂದರು.

ಮಾಲಿನ್ಯ ರಹಿತ ಹಾಗೂ ಸ್ವಚ್ಛ ಪರಿಸರ ನಿರ್ವಹಣೆಗಾಗಿ ಇರುವ ಕಾನೂನುಗಳನ್ನು ಚಾಚೂ ತಪ್ಪದೇ ಅನುಷ್ಠಾನಗೊಳಿಸುವ ಜವಾಬ್ದಾರಿ ಅಧಿಕಾರಿಗಳದ್ದಾಗಿದ್ದು, ತ್ಯಾಜ್ಯ ನಿರ್ವಹಣೆಗೆ ಸರ್ಕಾರ ಸಹ ಹಣಕಾಸಿನ ನೆರವು ನೀಡಬೇಕು. ಲ್ಯಾಂಡ್ ಫಿಲ್ಲಿಂಗ್ ಮಾಡಲು ಸೂಕ್ತ ಜಾಗವನ್ನು ಒದಗಿಸುವುದು ಅತೀ ಮುಖ್ಯ. ಸ್ವಚ್ಛತೆ, ಘನತ್ಯಾಜ್ಯ ನಿರ್ವಹಣೆ ಕಾನೂನು ಉಲ್ಲಂಘಿಸಿದರೆ ದಂಡ ವಿಧಿಸುವ ಅವಕಾಶವಿರುವುದರಿಂದ ಸ್ವಚ್ಛತೆ ಕಾಪಾಡುವ ಮೂಲಕ ಮೈಸೂರು ನಗರ ಮತ್ತು ಜಿಲ್ಲೆ ಮತ್ತೆ ದೇಶದ ಪ್ರಥಮ ಸ್ವಚ್ಛ ನಗರ ಎಂಬ ಬಿರುದು ಗಳಿಸಲು ಪ್ರತಿಯೊಬ್ಬರೂ ಪಣ ತೊಡಬೇಕೆಂದು ಅವರು ನುಡಿದರು.

ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ ಅಧ್ಯಕ್ಷತೆ ವಹಿಸಿದ್ದ ಕಾರ್ಯಾಗಾರದಲ್ಲಿ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತರೆಡ್ಡಿ, ಆರೋಗ್ಯಾಧಿಕಾರಿ ಡಾ.ಡಿ.ಜಿ.ನಾಗರಾಜ್, ಹೆಚ್ಚುವರಿ ಆಯುಕ್ತೆ ಎಂ.ಜೆ.ರೂಪ, ಜಿಪಂ ಉಪ ಕಾರ್ಯದರ್ಶಿ ಡಾ.ಪ್ರೇಂಕುಮಾರ್, ಜಿಲ್ಲಾ ನಗರ ಅಭಿವೃದ್ಧಿ ಕೋಶದ ಷರೀಫ್ ಸೇರಿದಂತೆ ಹಲವರು ಪಾಲ್ಗೊಂಡಿದ್ದರು. ದಿನಪೂರ್ತಿ ನಡೆದ ಅಧಿವೇಶನದಲ್ಲಿ ಸ್ಥಳೀಯ ಸಂಸ್ಥೆಗಳ ಜನಪ್ರತಿನಿಧಿಗಳು, ಅಧಿಕಾರಿಗಳು, ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳು ಭಾಗವಹಿಸಿ ಘನತ್ಯಾಜ್ಯ ನಿರ್ವಹಣೆ ನಿಯಮಗಳ ಬಗ್ಗೆ ತಜ್ಞರಿಂದ ಅಗತ್ಯ ಮಾಹಿತಿ ತಿಳಿದುಕೊಂಡರು.

ಮೇ 15ರಂದು ಎಂಎಂಸಿಆರ್‌ಐ 93ನೇ ಘಟಿಕೋತ್ಸವ

2016ನೇ ತಂಡದ 150 ಅಭ್ಯರ್ಥಿಗಳಿಗೆ ನಾನಾ ಪದವಿ ಪ್ರದಾನ





ಮೈಸೂರು, ಮೇ 12(ಆರ್‌ಕೆ)– ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (MMC&RI)ಯ 93ನೇ ಘಟಿಕೋತ್ಸವ ಸಮಾರಂಭ ಮೇ 15ರಂದು ನಡೆಯಲಿದೆ.

ಮೈಸೂರಿನ ಜೆ.ಕೆ.ಮೈದಾನದ ಅಮೃತ ಮಹೋತ್ಸವ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಸಂಸ್ಥೆ ನಿರ್ದೇಶಕ ಡಾ.ಹೆಚ್.ಎನ್.ದಿನೇಶ್, 2016ರಲ್ಲಿ ಪ್ರವೇಶ ಪಡೆದು, ವೈದ್ಯಕೀಯ ಪದವಿ ಪೂರೈಸಿರುವ ತಂಡದ 150 ಅಭ್ಯರ್ಥಿಗಳಿಗೆ ವೈದ್ಯಕೀಯ ಪದವಿ ಪ್ರದಾನ ಮಾಡಲಾಗುವುದು ಎಂದರು.

ಮೈಸೂರು ಮೆಡಿಕಲ್ ಕಾಲೇಜು ಹಿರಿಯ ವಿದ್ಯಾರ್ಥಿಗಳ ಸಂಘದ ಸಹಯೋಗದೊಂದಿಗೆ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಮೇ 15ರಂದು ಬೆಳಗ್ಗೆ 11 ಗಂಟೆಗೆ ನಡೆಯಲಿರುವ ಸಮಾರಂಭದಲ್ಲಿ ಇನ್ಫೋಸಿಸ್ ಪ್ರತಿಷ್ಠಾನದ ಮುಖ್ಯಸ್ಥೆ ಸುಧಾಮೂರ್ತಿ ಅವರು ಪದವಿ ಪ್ರದಾನ ಮಾಡಲಿದ್ದು, ಆದಿಚುಂಚನಗಿರಿ ವಿಶ್ವವಿದ್ಯಾಲಯದ ಕುಲಪತಿ ಡಾ. ಎಂ.ಎ. ಶೇಖರ್, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಡಾ. ಚಂದ್ರಶೇಖರ್ ಶೆಟ್ಟಿ ಭಾಗವಹಿಸುವರು.

ವಿವಿಧ ವಿಭಾಗಗಳಲ್ಲಿ ಅತಿ ಹೆಚ್ಚು ಅಂಕ ಗಳಿಸಿ ಅಗ್ರಸ್ಥಾನ ಪಡೆದ ಅಭ್ಯರ್ಥಿಗಳಿಗೆ 13 ದತ್ತಿ ನಿಧಿ ಬಹುಮಾನ ನೀಡಲಾಗುವುದಲ್ಲದೆ, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ನಡೆಸಿದ ಪರೀಕ್ಷೆಯಲ್ಲಿ ಸಂಸ್ಥೆಯ ವಿದ್ಯಾರ್ಥಿಗಳು 3 ಮತ್ತು 5ನೇ ರ್‍ಯಾಂಕ್ ಪಡೆದಿದ್ದಾರೆ. ಘಟಿಕೋತ್ಸವದಲ್ಲಿ ಇಂಟರ್ನ್‌ಶಿಪ್ ವೇಳೆ ವಿದ್ಯಾರ್ಥಿಗಳ ಅನುಭವ ದಾಖಲಿಸಿರುವ ಪುಸ್ತಕವನ್ನು ಬಿಡುಗಡೆ ಮಾಡಲಾಗುವುದು ಎಂದು ತಿಳಿಸಿದರು.

ಕಾಲೇಜಿನ ಹಿರಿಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಡಾ. ಎಸ್.ಚಂದ್ರಶೇಖರ್, ಕಾರ್ಯದರ್ಶಿ ಡಾ. ಹೆಚ್.ಬಿ.ಶಶಿಧರ, ಪ್ರಾಂಶುಪಾಲರಾದ ಡಾ. ಕೆ.ಆರ್.ದಾಕ್ಷಾಯಿಣಿ, ಪ್ರಾಧ್ಯಾಪಕರಾದ ಡಾ. ಎಂ.ಆರ್.ಸವಿತಾ, ಡಾ.ಪ್ರಶಾಂತ ಹಾಗೂ ಡಾ. ಅರ್ಜುನ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಕೆ.ಆರ್., ಚೆಲುವಾಂಬ, ಪಿಕೆಟಿಬಿ ಆಸ್ಪತ್ರೆಗಳ ಅಭಿವೃದ್ಧಿಗೆ ಸಿದ್ಧತೆ: ಡೀನ್ ಡಾ.ಹೆಚ್.ಎನ್.ದಿನೇಶ್

ಮೈಸೂರು: ಮೈಸೂರು ಮೆಡಿಕಲ್ ಕಾಲೇಜಿನ ಶತಮಾನೋತ್ಸವ ಆಚರಣೆ ಪ್ರಯುಕ್ತ ಇದರ ಅಧೀನದ ಕೆ.ಆರ್., ಚೆಲುವಾಂಬ ಮತ್ತು ಪಿಕೆಟಿಬಿ ಆಸ್ಪತ್ರೆಗಳಲ್ಲಿ ಹೊಸ ವಿಭಾಗ ತೆರೆಯುವುದೂ ಸೇರಿದಂತೆ ಅವುಗಳ ಸಮಗ್ರ ಅಭಿವೃದ್ಧಿಗೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ ಎಂದು ಎಂಎಂಸಿ ಅಂಡ್ ಆರ್‌ಐ ಡೀನ್ ಡಾ.ಹೆಚ್.ಎನ್.ದಿನೇಶ್ ತಿಳಿಸಿದ್ದಾರೆ.

ಶತಮಾನೋತ್ಸವದ ಅಂಗವಾಗಿ ಸಂಸ್ಥೆಯಲ್ಲಿ 4 ಹೊಸ ವಿಭಾಗ ತೆರೆಯಲು ನಿರ್ಧರಿಸಲಾಗಿದ್ದು, ಅದಕ್ಕಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಅನುದಾನ ಕೋರಲಾಗಿದೆ. 2 ವರ್ಷಗಳಲ್ಲಿ ಈ ವಿಭಾಗಗಳು ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸಲಿವೆ ಎಂದರು.

ಪಿಕೆಟಿಬಿ ಆಸ್ಪತ್ರೆಯಲ್ಲಿ ಶ್ವಾಸಕೋಶ ವಿಭಾಗ, ಕೆ.ಆರ್.ಆಸ್ಪತ್ರೆಯಲ್ಲಿ ಮಧುಮೇಹ ಸಮಸ್ಯೆ ಉಳ್ಳವರ ಚಿಕಿತ್ಸೆಗಾಗಿ ಎಂಡೋಕ್ರೋನಾಲಜಿ ವಿಭಾಗ, ವೃದ್ಧಾಪ್ಯದಲ್ಲಿ ಬರುವ ಕಾಯಿಲೆಗಳಿಗೆ ಜೆರಿಯಾಟ್ರಿಕ್ಸ್ ವಿಭಾಗ ಮತ್ತು ತುರ್ತು ಔಷಧ ಘಟಕ ತೆರೆಯಲು ಸಿದ್ಧತೆ ನಡೆಸಲಾಗಿದೆ. ಆಸ್ಪತ್ರೆ ಸ್ಪೆಷಲ್ ವಾರ್ಡ್‌ಗಳಿರುವ ಹಳೇ ಕಟ್ಟಡ ತೆರವುಗೊಳಿಸಿ ಅಲ್ಲಿ 56 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಹೊರ ರೋಗಿ (ಓಪಿಡಿ) ಕಟ್ಟಡ ನಿರ್ಮಿಸಲು ಡಿಪಿಆರ್ ತಯಾರಿಸಲಾಗಿದ್ದು, ಪೀಠೋಪಕರಣ ಹಾಗೂ ಯಂತ್ರೋಪಕರಣ ಖರೀದಿಗೆ 7 ಕೋಟಿ ರೂ.ಗಳಿಗೆ ಪ್ರಸ್ತಾವನೆ ಸಲ್ಲಿಸಲಾಗುತ್ತಿದೆ ಎಂದರು.

250 ಸೀಟುಗಳಿಗೆ ಪ್ರಸ್ತಾವನೆ: ಕಾಲೇಜಿನಲ್ಲಿ ಹಾಲಿ ಇರುವ 150 ವೈದ್ಯಕೀಯ ಸೀಟುಗಳನ್ನು 250ಕ್ಕೆ ಹೆಚ್ಚಿಸಲು ಪ್ರಸ್ತಾವನೆ ಸಲ್ಲಿಸಲಾಗಿದೆ. ಅದಕ್ಕೆ ಬೇಕಾಗಿರುವ ಹಾಸ್ಟೆಲ್, ಪ್ರಾಧ್ಯಾಪಕರು ಹಾಗೂ ಇನ್ನಿತರ ಮೂಲಭೂತ ಸೌಲಭ್ಯ ಕಲ್ಪಿಸಲು ಮುಂದಾಗಿದ್ದು, ಮುಂದಿನ ಶೈಕ್ಷಣಿಕ ವರ್ಷದಿಂದ 100 ಸೀಟು ಹೆಚ್ಚಳಕ್ಕೆ ಅನುಮತಿ ಪಡೆಯಲು ಪ್ರಯತ್ನಿಸಲಾಗುತ್ತಿದೆ. ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಇಂಗ್ಲೆಂಡ್‌ನಲ್ಲಿ ಸೇವೆ ಸಲ್ಲಿಸುತ್ತಿರುವ ಹಿರಿಯ ವಿದ್ಯಾರ್ಥಿಗಳು ಸೇರಿ ಒಂದು ಸಂಘ ಸ್ಥಾಪಿಸಿಕೊಂಡಿದ್ದು, ಆ ಪೈಕಿ ಡಾ.ರಾಮಚಂದ್ರ ಸೇರಿದಂತೆ ಹಲವರು ಕಾಲೇಜಿಗೆ 72 ಲಕ್ಷ ರೂ. ದೇಣಿಗೆ ನೀಡಿದ್ದಾರೆ. ಇನ್ನೂ ಹಲವರು ನೆರವು ನೀಡಲು ಮುಂದೆ ಬಂದಿದ್ದಾರೆ ಎಂದರು.

ರಣಹದ್ದುಗಳ ಸಂರಕ್ಷಣೆ ಸಂಬಂಧ ಅಧ್ಯಯನ ಒಡಂಬಡಿಕೆಗೆ ಸಹಿ

ಮೈಸೂರು, ಮೇ 12(ಆರ್‌ಕೆ)–ಡಿಎನ್‌ಎ ಪ್ರೊಫೈಲಿಂಗ್ ತಂತ್ರ ಬಳಸಿ ರಾಮನಗರದ ರಾಮದೇವರ ಬೆಟ್ಟದಲ್ಲಿ ರಣಹದ್ದುಗಳ ಸಂರಕ್ಷಣೆ ಅಂಗವಾಗಿ ಅಧ್ಯಯನ ಮತ್ತು ಸಂಶೋಧನೆ ಸಂಬಂಧ ಮೈಸೂರು ವಿಶ್ವವಿದ್ಯಾನಿಲಯವು ಅರಣ್ಯ ಇಲಾಖೆಯೊಂದಿಗೆ ಒಡಂಬಡಿಕೆ ಮಾಡಿಕೊಂಡಿತು.

ಮಾನಸ ಗಂಗೋತ್ರಿಯ ವಿಜ್ಞಾನ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಜಿ.ಹೇಮಂತ ಕುಮಾರ್ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ ವಿ.ದೇವರಾಜು ಅವರು ಒಡಂಬಡಿಕೆಗೆ ಸಹಿ ಹಾಕಿದರು. ಮೈಸೂರು ವಿಶ್ವವಿದ್ಯಾನಿಲಯದ ಜೆನೆಟಿಕ್ಸ್ ಮತ್ತು ಜಿನೋಮಿಕ್ಸ್ ಅಧ್ಯಯನ ವಿಭಾಗವು ಅರಣ್ಯ ಇಲಾಖೆಯೊಂದಿಗೆ ನೂತನ ಡಿಎನ್‌ಎ ತಂತ್ರಜ್ಞಾನ ಬಳಸಿಕೊಂಡು ರಾಮನಗರದ ರಾಮದೇವರ ಬೆಟ್ಟ ರಣಹದ್ದು ಸಂರಕ್ಷಣಾ ಧಾಮದಲ್ಲಿ ವೈಜ್ಞಾನಿಕ ಅಧ್ಯಯನ ಮತ್ತು ಸಂಶೋಧನೆ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ.

ಈ ಸಂದರ್ಭ ಮಾತನಾಡಿದ ಪ್ರೊ. ಹೇಮಂತಕುಮಾರ್, ಜೆನೆಟಿಕ್ಸ್ ಮತ್ತು ಜಿನೋಮಿಕ್ಸ್ ವಿಭಾಗವು ಮಾನವ ಆರೋಗ್ಯ ಮತ್ತು ಕ್ಷೇಮ ಪಾಲನೆಗಾಗಿ ಅಧ್ಯಯನ ನಡೆಸಿ ಯುವ ಜನಾಂಗದ ಜ್ಞಾನ ವೃದ್ಧಿಯಲ್ಲಿ ಸಾಧನೆ ಮಾಡಿದೆ. ವಿಭಾಗದ ಮುಖ್ಯಸ್ಥೆ



ಪ್ರೊ. ಎಸ್.ಎಸ್.ಮಾಲಿನಿ ನೇತೃತ್ವದಲ್ಲಿ ರಣಹದ್ದುಗಳ ಸಂರಕ್ಷಣೆಗಾಗಿ ನಡೆಯುತ್ತಿರುವ ಸಂಶೋಧನೆಗೆ ವಿಶ್ವವಿದ್ಯಾನಿಲಯವು ಸಂಪೂರ್ಣ ಸಹಕಾರ ನೀಡಲಿದೆ ಎಂದರು.

ಪ್ರೊ.ಮಾಲಿನಿ ಮಾತನಾಡಿ, ಭಾರತದಲ್ಲಿ ಕಂಡು ಬರುವ 9 ಜಾತಿಯ ರಣಹದ್ದುಗಳು ನಮ್ಮ ಪರಿಸರದಲ್ಲಿ ಪ್ರಮುಖ ಸ್ಥಾನ ಪಡೆದಿದ್ದು, ಇತ್ತೀಚೆಗೆ ಅವುಗಳ ಸಂಖ್ಯೆ ಕ್ಷೀಣಿಸುತ್ತಿದೆ. ಅಳಿವಿನ ಅಂಚಿನಲ್ಲಿರುವ ರಣಹದ್ದುಗಳ ಪ್ರಭೇಧಗಳನ್ನು ರಕ್ಷಿಸಲು ಅರಣ್ಯ ಇಲಾಖೆ ಸಹಯೋಗದಲ್ಲಿ ಸಂಶೋಧನೆ ಮಾಡಲು ಒಡಂಬಡಿಕೆ ಮಾಡಿಕೊಳ್ಳಲಾಗಿದೆ ಎಂದರು. ಕೊಳ್ಳೇಗಾಲ ವಿಭಾಗದ ಡಿಸಿಎಫ್ ವಿ.ಏಡುಕೊಂಡಲು, ಬಾಂಬೆ ನ್ಯಾಚುರಲ್ ಸೊಸೈಟಿಯ ಡಾ. ವಿಭುಪ್ರಕಾಶ್ ಮಾಥುರ ಪಾಲ್ಗೊಂಡು, ವಿಷಯ ಕುರಿತು ಮಾತನಾಡಿದರು.

ಉದ್ಯಮಿ ಶರತ್ ಆತ್ಮಹತ್ಯೆ ಪ್ರಕರಣ

ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ ಅಧ್ಯಕ್ಷರ ಬಂಧನಕ್ಕೆ ಶಾಸಕ ಯತೀಂದ್ರ ಸಿದ್ದರಾಮಯ್ಯ ಆಗ್ರಹ

ಮೈಸೂರು, ಮೇ 12(ಆರ್‌ಕೆಬಿ)–ಉದ್ಯಮಿ ಶರತ್ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ ಅಧ್ಯಕ್ಷ ಅಪ್ಪಣ್ಣ ಬಂಧನಕ್ಕೆ ಕಾಂಗ್ರೆಸ್ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.



ಆತ್ಮಹತ್ಯೆ ಮಾಡಿಕೊಂಡ ಉದ್ಯಮಿ ಶರತ್ ಕಚೇರಿಗೆ ಶಾಸಕ ಯತೀಂದ್ರ ಸಿದ್ದರಾಮಯ್ಯ ನೇತೃತ್ವದ ನಿಯೋಗ ಭೇಟಿ ನೀಡಿತು. ಈ ವೇಳೆ ಶರತ್ ಸಹೋದರಿ ಬಳಿ ದೂರವಾಣಿ ಮೂಲಕ ಮಾತುಕತೆ ನಡೆಸಿದ ಯತೀಂದ್ರ ಸಿದ್ದರಾಮಯ್ಯ, ಘಟನೆಯ ಸಂಪೂರ್ಣ ಮಾಹಿತಿ ಪಡೆದರು. ಬಳಿಕ ಮಾಧ್ಯಮಗಳ ಜತೆ ಮಾತನಾಡಿದ ಅವರು, ಅಪ್ಪಣ್ಣ ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ ಅಧ್ಯಕ್ಷ ಸ್ಥಾನದಲ್ಲಿ ಮುಂದುವರೆಯಲು ನೈತಿಕತೆ ಇಲ್ಲ. ಕೂಡಲೇ ಆ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು.

ಪ್ರವೀಣ್ ಮತ್ತು ಅಪ್ಪಣ್ಣ ಅವರ ವಂಚನೆಯಿಂದ ಶರತ್ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅವರ ಕುಟುಂಬದ ಜೊತೆ ನಾವು ಇದ್ದೇವೆ ಎಂದು ಧೈರ್ಯ ತುಂಬಲು ಬಂದಿದ್ದೇವೆ. ಈ ಪ್ರಕರಣದಲ್ಲಿ ಅಪ್ಪಣ್ಣನವರ ಕೈವಾಡ ಇದೆ. ಪ್ರಕರಣದಲ್ಲಿ ಅವರು ಪ್ರಭಾವ ಬೀರುವ ಸಾಧ್ಯತೆ ಇದೆ. ಹೀಗಾಗಿ ಮೃತರ ಪತ್ನಿ ಭಯದಿಂದ ಮನೆ ಖಾಲಿ ಮಾಡಿದ್ದಾರೆ. ಮಾರ್ಚ್ ತಿಂಗಳಲ್ಲೇ ಎಫ್‌ಐಆರ್ ಆಗಿದೆ. ಈ ಕೂಡಲೇ ಅಪ್ಪಣ್ಣ ಅವರನ್ನು ಬಂಧಿಸಬೇಕು. ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಾಮಾಣಿಕ ತನಿಖೆ ಆಗಬೇಕು. ಕೋರ್ಟ್ ಕೂಡ ಮೊದಲ ಆರೋಪಿ ಪ್ರವೀಣ್ ನಿರೀಕ್ಷಣಾ ಜಾಮೀನು ವಜಾ ಮಾಡಿದೆ ಎಂದರು.

ವಾಯುವಿಹಾರಕ್ಕೆ ತೆರಳಿದ್ದ ಮಹಿಳೆ ಸರ ಅಪಹರಣ

ಮೈಸೂರು, ಮೇ 12(ಆರ್‌ಕೆ)–ವಾಯು ವಿಹಾರಕ್ಕೆ ತೆರಳಿದ್ದ ಮಹಿಳೆಯ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಿರುವ ಘಟನೆ ಮೈಸೂರಿನ ವಿಜಯನಗರ 3ನೇ ಹಂತದಲ್ಲಿ ನಡೆದಿದೆ. ಇಲ್ಲಿನ ನಿವಾಸಿ ಹೆಚ್.ಆರ್.ಪ್ರಕಾಶ್ ಅವರ ಪತ್ನಿ ಸುನಿತಾ(50) ಚಿನ್ನದ ಸರ ಕಳೆದುಕೊಂಡವರು. ಹೆರಿಟೇಜ್ ಕ್ಲಬ್ ಸಮೀಪ ಪಾರ್ಕಿನಲ್ಲಿ ಮುಂಜಾನೆ 5.30ಕ್ಕೆ ವಾಯು ವಿಹಾರದಲ್ಲಿದ್ದಾಗ ಬಂದ ಯುವಕನೋರ್ವ ಸುನಿತಾ ಅವರ ಕೊರಳಿನಿಂದ 30 ಗ್ರಾಂ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಿದ್ದಾನೆ. ವಿಜಯನಗರ ಠಾಣೆ ಎಸ್‌ಐ ಶಬರೀಶಗೌಡ, ಸಿಬ್ಬಂದಿ ಮಹಜರು ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಮೇ 16 ರಂದು ಸಾಮೂಹಿಕ ಸತ್ಯನಾರಾಯಣ ಪೂಜೆ

ಮಡಿಕೇರಿ, ಮೇ 12– ಮಡಿಕೇರಿ ತಾಲೂಕು ಭಾಗಮಂಡಲದ ಶ್ರೀ ಭಗಂಡೇಶ್ವರ ದೇವಾಲಯದಲ್ಲಿ ಮೇ 16 ರಂದು ಸಂಜೆ 4 ಗಂಟೆಯಿಂದ ಸಾಮೂಹಿಕ ಸತ್ಯನಾರಾಯಣ ಪೂಜೆ ನಡೆಯಲಿದೆ. ಆದ್ದರಿಂದ ಸಾರ್ವಜನಿಕ ಭಕ್ತಾದಿಗಳು ದೇವಾಲಯದಲ್ಲಿ ನಡೆಯಲಿರುವ ಸಾಮೂಹಿಕ ಸತ್ಯನಾರಾಯಣ ಪೂಜೆಯಲ್ಲಿ ಭಾಗವಹಿಸಿ ಪೂಜೆ ಯಶಸ್ವಿಗೊಳಿಸುವಂತೆ ಶ್ರೀ ಭಗಂಡೇಶ್ವರ–ತಲಕಾವೇರಿ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಬಿ.ಎಂ.ಕೃಷ್ಣಪ್ಪ ಅವರು ಕೋರಿದ್ದಾರೆ.

ಮೇ 16, ಮಾಂಸ ಮಾರಾಟ ನಿಷೇಧ

ಮೈಸೂರು, ಮೇ 12– ಬುದ್ಧಪೌರ್ಣಿಮೆ ಪ್ರಯುಕ್ತ ಮೇ 16ರಂದು ಪಾಲಿಕೆ ವ್ಯಾಪ್ತಿ ಪ್ರದೇಶದಲ್ಲಿ ಕುರಿ, ಮೇಕೆ, ಕೋಳಿ, ಹಂದಿ ಮಾಂಸ ಮತ್ತು ಮೀನು ವ್ಯಾಪಾರವನ್ನು ನಿಷೇಧಿಸಿದ್ದು, ವಿವಿಧ ಮಾಂಸದ ಅಂಗಡಿಗಳನ್ನು ಮುಚ್ಚಲು ಆದೇಶ ನೀಡಲಾಗಿದೆ.

ಮೈಸೂರು ಮಿತ್ರ ಶುಕ್ರವಾರ 13 ಮೇ 2022

ಇಂದು ಚಾಮರಾಜೇಶ್ವರ ನೂತನ ರಥ ಆಗಮನ



ಚಾಮರಾಜನಗರ, ಮೇ 12– ಇಲ್ಲಿನ ಇತಿಹಾಸ ಪ್ರಸಿದ್ಧ ಚಾಮರಾಜೇಶ್ವರಸ್ವಾಮಿ ದೇವಾಲಯದ ನೂತನ ರಥ ಇಂದು (ಮೇ 13) ನಗರಕ್ಕೆ ಬರಲಿದೆ. ಹೊಸ ರಥವನ್ನು ಅದ್ಧೂರಿಯಾಗಿ ಸ್ವಾಗತಿಸಲು ದೇವಾಲಯದ ಆಡಳಿತ ಮಂಡಳಿ, ಮುಖಂಡರು ಹಾಗೂ ಭಕ್ತ ಸಮೂಹ ಸಕಲ ಸಿದ್ಧತೆ ಕೈಗೊಂಡಿದ್ದಾರೆ. ಬೆಳಗ್ಗೆ ಸಂತೇಮರಹಳ್ಳಿ ವೃತ್ತದಲ್ಲಿ ರಥವನ್ನು ಸ್ವಾಗತಿಸಿ, ಪೂಜೆ ಸಲ್ಲಿಸಿ ಆದಿಶಕ್ತಿ ದೇವಾಲಯದಿಂದ ಡೀವಿಯೇಷನ್ ರಸ್ತೆ, ಭುವನೇಶ್ವರಿ ವೃತ್ತ, ಕೆಎಸ್ಆರ್‌ಟಿಸಿ ಬಸ್ ನಿಲ್ದಾಣದ ಮೂಲಕ ಸುಲ್ತಾನ್ ಷರೀಫ್ ವೃತ್ತ, ದೊಡ್ಡಂಗಡಿ ಬೀದಿ, ಚಿಕ್ಕಂಗಡಿ ಬೀದಿಗಳಲ್ಲಿ ಮೆರವಣಿಗೆ ನಡೆಸಿ, ದೇವಾಲಯಕ್ಕೆ ಮೂರು ಸುತ್ತು ಪ್ರದಕ್ಷಿಣೆ ಮಾಡಿಸಿ, ದೇವಾಲಯದ ಆವರಣದಲ್ಲಿ ಮೆರವಣಿಗೆ ಮುಕ್ತಾಯಗೊಳ್ಳುತ್ತದೆ.

ಜು.13ಕ್ಕೆ ರಥೋತ್ಸವ: ಹಳೆಯ ಬ್ರಹ್ಮರಥಕ್ಕೆ ಕಿಡಿಗೇಡಿಯೊಬ್ಬ ಬೆಂಕಿ ಹಚ್ಚಿದ ಕಾರಣಕ್ಕೆ ಆಷಾಢ ಮಾಸದಲ್ಲಿ ನಡೆಯುವ ಚಾಮರಾಜೇಶ್ವರ ರಥೋತ್ಸವ ಸ್ಥಗಿತಗೊಂಡು 5 ವರ್ಷವಾಗಿತ್ತು ಹೊಸ ರಥ ನಿರ್ಮಾಣ ವಿಳಂಬವಾಗಿದ್ದರಿಂದ ಅದ್ಧೂರಿ ಜಾತ್ರೋತ್ಸವ ನಡೆದಿರಲಿಲ್ಲ. ಈ ಬಾರಿ ಜಾತ್ರೆಯ ದಿನ ಜುಲೈ 13ಕ್ಕೆ ನಿಗದಿಯಾಗಿದೆ. ಈ ಬಾರಿ ಅದ್ಧೂರಿಯಾಗಿ ರಥೋತ್ಸವ ನಡೆಸಲು ತೀರ್ಮಾನಿಸಲಾಗಿದೆ.

'ಅಸನಿ' ಪ್ರಭಾವ: ಜಿಲ್ಲೆಯಲ್ಲಿ ದಿನವಿಡೀ ಜಿಟಿ-ಜಿಟಿ ಮಳೆ

ಚಾಮರಾಜನಗರ, ಮೇ 12– ಬಂಗಾಳಕೊಲ್ಲಿಯಲ್ಲಿ ಎದ್ದಿರುವ 'ಅಸನಿ' ಚಂಡಮಾರುತದ ಪ್ರಭಾವದಿಂದ ಜಿಲ್ಲೆಯಲ್ಲಿ ಕಳೆದೆರಡು ದಿನಗಳಿಂದ ಜಿಟಿ-ಜಿಟಿ ಮಳೆಯಾಗುತ್ತಿದ್ದು, ಗುರುವಾರ ದಿನವಿಡೀ ಮೋಡ ಕವಿದ ವಾತಾವರಣ ನಿರ್ಮಾಣವಾಗಿತ್ತು.

ಚಾಮರಾಜನಗರ, ಯಳಂದೂರು, ಕೊಳ್ಳೇಗಾಲ ತಾಲೂಕುಗಳ ವ್ಯಾಪ್ತಿಯಲ್ಲಿ ಬುಧವಾರ ರಾತ್ರಿ ಜೋರು ಮಳೆಯಾದರೆ, ಗುರುವಾರ ಮುಂಜಾನೆಯಿಂದಲೇ ತುಂತುರು ಮಳೆಯಾಯಿತು. ಗುಂಡ್ಲುಪೇಟೆ, ಹನೂರು ಭಾಗದಲ್ಲಿ ಇಡೀ ದಿನ ತುಂತುರು ಮಳೆಯಾಗಿದೆ.

ನಿರಂತರವಾಗಿ ಸುರಿಯುತ್ತಿದ್ದ ಮಳೆಯಿಂದಾಗಿ ಜನರ ಓಡಾಟಕ್ಕೆ ತೊಂದರೆಯಾಯಿತು. ದ್ವಿಚಕ್ರ ವಾಹನ ಸವಾರರು ಸಂಚರಿಸಲು ಪ್ರಯಾಸಪಟ್ಟರು. ಬಹುತೇಕರು ದಿನನಿತ್ಯದ ಓಡಾಟಕ್ಕೆ ಆಟೋ, ಬಸ್‌ಗಳನ್ನು ಅವಲಂಬಿಸಿದರು. ಉತ್ತಮ ಮಳೆಯಾಗುತ್ತಿರುವುದರಿಂದ ಕೆರೆ-ಕಟ್ಟೆಗಳು ಭರ್ತಿಯಾಗುತ್ತಿದ್ದು, ರೈತರು ಕೃಷಿ ಚಟುವಟಿಕೆಗಳನ್ನು ಆರಂಭಿಸಿದ್ದಾರೆ



ಉತ್ತಮ ಕೆಲಸದಿಂದ ಮಾನವ ಜನ್ಮ ಪಾವನ

ಶೃಂಗೇರಿ ಶ್ರೀ ಶಾರದಾ ಪೀಠದ ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿ ಅಭಿಮತ



ಉತ್ತಮ ಕಾರ್ಯಗಳಿಗೆ ದಾನ ಮಾಡಬೇಕು. ಉತ್ತಮ ಕಾರ್ಯಗಳನ್ನು ಮಾಡುವಾಗ ಧೈರ್ಯ ಕಳೆದುಕೊಳ್ಳಬಾರದು. ಕರ್ಮ ಅನುಷ್ಠಾನಕ್ಕೆ ಶ್ರದ್ಧೆ ಅಗತ್ಯ. ಶ್ರದ್ಧೆ ಇಲ್ಲದೇ ಯಾವುದೇ ಫಲವಿಲ್ಲ. ಮನುಷ್ಯನಿಗೂ- ಪಶುವಿಗೂ ವ್ಯತ್ಯಾಸವಿದ್ದು, ಮನುಷ್ಯನಿಗೆ ಧರ್ಮಾಚರಣೆ ಮಾಡುವ ಸ್ಥಿತಿ ಇದೆ. ಧರ್ಮ ಆಚರಣೆ ಮೂಲಕ ಅವರು ತಮ್ಮ ಮಾನವ ಜನ್ಮವನ್ನು ಸಾರ್ಥಕಪಡಿಸಿಕೊಳ್ಳಬೇಕು.

–ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿ, ಶೃಂಗೇರಿ ಶ್ರೀ ಶಾರದಾ ಪೀಠ ಮಠ.

ಚಾಮರಾಜನಗರ, ಮೇ 12– ಶರೀರ, ಮನಸ್ಸು, ಮಾತುಗಳಿಂದ ಉತ್ತಮ ಕೆಲಸ ಮಾಡುವ ಮೂಲಕ ಮಾನವನ ಜನ್ಮವನ್ನು ಪಾವನವಾಗಿಸಿಕೊಳ್ಳಬೇಕು ಎಂದು ಶೃಂಗೇರಿ ಶ್ರೀ ಶಾರದಾ ಪೀಠ ಮಠದ ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿ ಹೇಳಿದರು.

ತಾಲೂಕಿನ ಹೆಬ್ಬಸೂರು ಶ್ರೀ ಶೃಂಗೇರಿ ಶಂಕರ ಮಠದ ವಿಮಾನ ಗೋಪುರ ಮತ್ತು ರಾಜಗೋಪುರ ಕುಂಭಾಭಿಷೇಕ ಮಹೋತ್ಸವ ಕಾರ್ಯಕ್ರಮದ ಮುನ್ನ ಅನುಗ್ರಹ ಭಾಷಣ ಮಾಡಿ ಸರ್ವ ಭಕ್ತರಿಗೂ ಆಶೀರ್ವದಿಸಿ ಅನುಗ್ರಹಿಸಿದರು. ಹೆಬ್ಬಸೂರು ಗ್ರಾಮದ ಶ್ರೀಶಂಕರ ಮಠ ವೈಶಿಷ್ಟ್ಯತೆಯಿಂದ ಕೂಡಿದ್ದು, ಶ್ರದ್ಧಾ-ಭಕ್ತಿಯಿಂದ ಉತ್ತಮ ಧಾರ್ಮಿಕ ಕಾರ್ಯಕ್ರಮಗಳನ್ನು ನಿರ್ವಹಿಸಿಕೊಂಡು ಅಭಿವೃದ್ಧಿಯನ್ನು ಸಾಧಿಸುತ್ತಿದೆ. ಇದಕ್ಕೆ ಕಾರಣ ಮಠದ ಭಕ್ತರು. ಶ್ರೀಶಂಕರ ಭಕ್ತರಿಗೆ ಸದಾಕಾಲ ತಾಯಿ ಅನುಗ್ರಹ ಮತ್ತು ಗುರುಪರಂಪರೆ ಅನುಗ್ರಹ ಇದೆ ಎಂದು ತಿಳಿಸಿದರು.

ಆದಿಗುರು ಶ್ರೀ ಶಂಕರಾಚಾರ್ಯರು ವೇದಗಳನ್ನು ಪ್ರಾಮಾಣಿಕವಾಗಿ ಪ್ರತಿಪಾದನೆ ಮಾಡಿ ಮಾನವ ಜನಾಂಗಕ್ಕೆ ಸರಿಯಾದ ಮಾರ್ಗ ತೋರಿಸಿದರು. ಶಂಕರಾಚಾರ್ಯರ ದಿವ್ಯ ದೃಷ್ಟಿಯಿಂದ ಭಾರತೀಯ ಸನಾತನ ಧರ್ಮ ಪುನರುತ್ಥಾನವಾಯಿತು. ಇಂದು ನಾವೆಲ್ಲರೂ ಧರ್ಮ ಶ್ರದ್ಧೆಯಿಂದ ಬದುಕಲು ಮತ್ತು ಭಾರತದ ಪರಂಪರೆಗಳು ಉಳಿಯಲು ಶ್ರೀ ಶಂಕರಾಚಾರ್ಯರು ಪ್ರಮುಖ ಕಾರಣರು ಎಂದರು.

ಬಳಿಕ, ಶ್ರೀಮಠದಲ್ಲಿ ಶ್ರೀ ಚಂದ್ರಮೌಳೇಶ್ವರ ಪೂಜಾ ಕೈಂಕರ್ಯವನ್ನು ಸ್ವಾಮೀಜಿ ಅವರು ನೆರವೇರಿಸಿದರು. ಇದಕ್ಕೂ ಮೊದಲು ಬೆಳಗ್ಗೆ ಗಣಪತಿ, ಸುಬ್ರಹ್ಮಣ್ಯ, ಶಾರದಾಂಬೆ ಆದಿಶಂಕರಾಚಾರ್ಯ, ಸೀತಾ, ರಾಮ, ಲಕ್ಷ್ಮಣ ಸಹಿತ ವಿಗ್ರಹಗಳಿಗೆ ವಿಶೇಷ ಪೂಜೆ ನೆರವೇರಿಸಲಾಯಿತು. ನಂತರ ಸ್ವಾಮೀಜಿ ಅವರ ನೇತೃತ್ವದಲ್ಲಿ ಕುಂಭಾಭಿಷೇಕ ನಡೆಯಿತು. ಬಳಿಕ, ರಾಜಗೋಪುರ, ವಿಮಾನ ಗೋಪುರ, ಸುವರ್ಣ ಮಿಶ್ರಿತ ಕಳಶಗಳಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ರಾಜ್ಯವಲ್ಲದೇ ದೇಶದ ವಿವಿಧೆಡೆಯಿಂದ ಸಾವಿರಾರು ಭಕ್ತರು ಪಾಲ್ಗೊಂಡಿದ್ದರು.

ಈ ವೇಳೆ ಹೆಚ್ಚುವರಿ ಜಿಲ್ಲಾಧಿಕಾರಿ ಕಾತ್ಯಾಯಿನಿದೇವಿ, ಶಾಸಕ ಸಿ.ಪುಟ್ಟರಂಗಶೆಟ್ಟಿ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಹೆಚ್.ವಿ.ರಾಜೀವ್, ಶೃಂಗೇರಿ ಶಂಕರ ಮಠದ ಆಡಳಿತಾಧಿಕಾರಿ ಗೌರಿಶಂಕರ್, ಹೆಬ್ಬಸೂರು ಮಠದ ಧರ್ಮಾಧಿಕಾರಿ ಶ್ರೀಧರ್ ಪ್ರಸಾದ್, ಮೈಸೂರು ಶಂಕರ ಮಠದ ಧರ್ಮಾಧಿಕಾರಿ ರಾಮಚಂದ್ರ, ಭಾಸ್ಕರ್, ಸತ್ಯನಾರಾಯಣ, ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಜಿ.ಎಂ.ಹೆಗ್ಗಡೆ, ತಾಲೂಕು ಬ್ರಾಹ್ಮಣ ಸಂಘದ ಅಧ್ಯಕ್ಷ ಹೆಚ್.ವಿ.ನಾಗರಾಜ್, ಮುಖಂಡರಾದ ವೆಂಕಟೇಶಪ್ಪ, ಬೋಜರಾಜ್, ಕೃಷ್ಣಮೂರ್ತಿ, ತ್ಯಾಗರಾಜ್, ಮಂಜುನಾಥ್ ಪ್ರಸಾದ, ಮಹಿಳಾ ಸಂಘದ ಸರಳಂಭ, ಭಾರತಿ, ಶ್ರೀ ಶಂಕರ ತತ್ವ ಪ್ರಸಾರ ಅಭಿಯಾನದ ಜಿಲ್ಲಾ ಪ್ರಧಾನರಾದ ಸುರೇಶ ಋಗ್ವೇದಿ, ಕೊಳ್ಳೇಗಾಲ ಬ್ರಾಹ್ಮಣ ಸಂಘದ ಶೇಖರ್ ಶಾಸ್ತ್ರಿ, ಯಳಂದೂರು ಬ್ರಾಹ್ಮಣ ಸಂಘದ ಮುರಳಿ ಇದ್ದರು. ಕೊಯಮತ್ತೂರು ಶ್ರೀ ಚಂದ್ರಶೇಖರ ಭಾರತೀ ವೇದಪಾಠ ಶಾಲೆ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಗುಂಡ್ಲುಪೇಟೆ: ಲಂಚಕ್ಕೆ ಬೇಡಿಕೆ, ಎಸಿಬಿ ಬಲೆಗೆ ಬಿದ್ದ ಕಂದಾಯ ನಿರೀಕ್ಷಕ

ಗುಂಡ್ಲುಪೇಟೆ, ಮೇ 12(ಸೋಮ್.ಜಿ)– ಭೂಮಿ ಅನ್ಯಾಕ್ರಾಂತ ಮಾಡಲು ಲಂಚದ ಬೇಡಿಕೆಯಿಟ್ಟು ಲಂಚ ಸ್ವೀಕರಿಸುತ್ತಿದ್ದ ಕಂದಾಯ ನಿರೀಕ್ಷಕ ಎಸಿಬಿ ಬಲೆಗೆ ಬಿದ್ದಿರುವ ಘಟನೆ ಪಟ್ಟಣದ ತಾಲೂಕು ಕಚೇರಿ ಆವರಣದಲ್ಲಿ ಗುರುವಾರ ನಡೆದಿದೆ.



ಕಸಬಾ ಹೋಬಳಿಯ ಆರ್‌ಐ ಶ್ರೀನಿವಾಸಮೂರ್ತಿ ಎಸಿಬಿ ಬಲೆಗೆ ಬಿದ್ದ ಅಧಿಕಾರಿ. ಪಟ್ಟಣದ ನಿವಾಸಿಯೊಬ್ಬರು ತಾಲೂಕಿನ ಕೂತನೂರು ಗ್ರಾಮದ ಸರ್ವೇ ನಂಬರ್ 586ರಲ್ಲಿ ಒಂದು ಎಕರೆ 39 ಗುಂಟೆ ಜಮೀನನ್ನು ಕೃಷಿಯೇತರ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡಿಕೊಡುವಂತೆ ಕೋರಿದ್ದರು. ಇದಕ್ಕೆ ಆರೋಪಿ ಅಧಿಕಾರಿ ಶ್ರೀನಿವಾಸಮೂರ್ತಿ 4 ಸಾವಿರ ಲಂಚ ನೀಡುವಂತೆ ಬೇಡಿಕೆ ಇಟ್ಟಿದ್ದ. ಇದರಿಂದ ಬೇಸತ್ತು ಸಂತ್ರಸ್ತ ಎಸಿಬಿ ಮೊರೆ ಹೋಗಿ ದೂರು ನೀಡಿದರು.

ದೂರಿನನ್ವಯ ಕಾರ್ಯಾಚರಣೆಗಿಳಿದ ಎಸಿಬಿ ಅಧಿಕಾರಿಗಳು, ಇಂದು 4 ಸಾವಿರ ರೂ. ಲಂಚ ಸ್ವೀಕರಿಸುತ್ತಿದ್ದ ಕಂದಾಯ ನಿರೀಕ್ಷಕ ಶ್ರೀನಿವಾಸಮೂರ್ತಿಯನ್ನು ಲಂಚದ ಹಣದ ಸಮೇತ ವಶಕ್ಕೆ ಪಡೆದು ದೂರು ದಾಖಲಿಸಿಕೊಂಡಿದ್ದಾರೆ.

ಕಾರ್ಯಾಚರಣೆಯಲ್ಲಿ ಭ್ರಷ್ಟಾಚಾರ ನಿಗ್ರಹ ದಳದ ಪೊಲೀಸ್ ಅಧೀಕ್ಷಕ ವಿ.ಜೆ.ಸಜೀತ್ ಮಾರ್ಗದರ್ಶನದಲ್ಲಿ ಚಾಮರಾಜನಗರ ಎಸಿಬಿ ಪೊಲೀಸ್ ಠಾಣೆಯ ಅಧಿಕಾರಿ ಮತ್ತು ಸಿಬ್ಬಂದಿ ಭಾಗವಹಿಸಿದ್ದರು.

ಕೋಟ್ಪಾ ಕಾಯ್ದೆಯಡಿ 396 ಪ್ರಕರಣ ದಾಖಲು

ಚಾಮರಾಜನಗರ, ಮೇ 12– ಜಿಲ್ಲೆಯ ವಿವಿಧ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಕಳೆದ ಏಪ್ರಿಲ್ ಮಾಹೆಯಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡುತ್ತಿದ್ದವರ ವಿರುದ್ಧ ಕೋಟ್ಪಾ ಕಾಯ್ದೆಯಡಿ 396 ಪ್ರಕರಣಗಳನ್ನು ದಾಖಲಿಸಿಕೊಂಡು 32,200ರೂ. ದಂಡ ವಿಧಿಸಲಾಗಿದೆ ಎಂದು ಪೊಲೀಸ್ ಇಲಾಖೆ ಪ್ರಕಟಣೆ ತಿಳಿಸಿದೆ.

ಧ್ವನಿವರ್ಧಕ ಬಳಕೆಗೆ ಅನುಮತಿ ಅಗತ್ಯ



ಅರ್ಜಿ ಸ್ವೀಕಾರ ಹಾಗೂ ವಿಲೇವಾರಿಗೆ ಅಧಿಕಾರಿಗಳು ಅಗತ್ಯ ಕ್ರಮ ವಹಿಸಬೇಕು. ಶಬ್ದಮಾಲಿನ್ಯ ನಿಯಂತ್ರಣ ಕುರಿತ ಸುತ್ತೋಲೆ ಪಾಲಿಸಬೇಕು.

–ಚಾರುಲತಾ ಸೋಮಲ್, ಜಿಲ್ಲಾಧಿಕಾರಿ.

ಚಾಮರಾಜನಗರ, ಮೇ 12– ಶಬ್ದಮಾಲಿನ್ಯ ನಿಯಂತ್ರಣ ನಿಯಮ ಸಂಬಂಧ ಹೊರಡಿಸಲಾಗಿರುವ ಸುತ್ತೋಲೆ ಅನ್ವಯ ಧ್ವನಿವರ್ಧಕ ಬಳಸುವವರು 15 ದಿನಗಳೊಳಗೆ ಅನುಮತಿ ಪಡೆಯಬೇಕಿದೆ ಎಂದು ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ತಿಳಿಸಿದ್ದಾರೆ.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಗುರುವಾರ ಶಬ್ದಮಾಲಿನ್ಯ ನಿಯಂತ್ರಣ ಸಂಬಂಧ ಅರಣ್ಯ, ಪರಿಸರ ವಿಜ್ಞಾನ ಮತ್ತು ಪರಿಸರ ಇಲಾಖೆ ಹೊರಡಿಸಿರುವ ಸುತ್ತೋಲೆ ಸಂಬಂಧ ಶಬ್ದಮಾಲಿನ್ಯ ನಿಯಂತ್ರಣ ಕುರಿತ ಕ್ರಮ ಕೈಗೊಳ್ಳುವ ಸಂಬಂಧ ನಡೆದ ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಶಬ್ದಮಾಲಿನ್ಯ ನಿಯಂತ್ರಣ (ನಿರ್ಬಂಧ ಮತ್ತು ನಿಯಂತ್ರಣ) ನಿಯಮ 2000 ಅನ್ನು ಜಾರಿಗೊಳಿಸಲು ಸುತ್ತೋಲೆ ಹೊರಡಿಸಲಾಗಿದೆ ಧ್ವನಿವರ್ಧಕ ಬಳಕೆ ಸಂಬಂಧ ಸುತ್ತೋಲೆಯಲ್ಲಿ ನೀಡಿರುವ ನಿರ್ದೇಶನಗಳನ್ನು ಪಾಲಿಸಬೇಕಿದೆ. ಈ ಪ್ರಕಾರ ಧ್ವನಿವರ್ಧಕ ಬಳಸುವವರು 15 ದಿನಗಳೊಳಗಾಗಿ ಅನುಮತಿ ಪಡೆಯಬೇಕಿದೆ ಎಂದರು.

ಧ್ವನಿವರ್ಧಕಗಳ ಬಳಕೆಗೆ ಅನುಮತಿಸುವ ಅರ್ಜಿಗಳನ್ನು ಪರಿಶೀಲಿಸಿ, ನಿರ್ಧರಿಸಲು ತಹಸೀಲ್ದಾರ್, ಪೊಲೀಸ್ ಹಾಗೂ ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರತಿನಿಧಿ ಸಮಿತಿ ರಚಿಸಲು ಸುತ್ತೋಲೆಯಲ್ಲಿ ತಿಳಿಸಲಾಗಿದೆ. ಆಯಾ ತಾಲೂಕುಗಳಲ್ಲಿ ತಹಸೀಲ್ದಾರ್ ಕಚೇರಿಯಲ್ಲಿ ಧ್ವನಿವರ್ಧಕ ಬಳಕೆ ಅನುಮತಿಗಾಗಿ ಅರ್ಜಿ ನಮೂನೆಗಳು ಲಭ್ಯವಿರುತ್ತದೆ. ಅರ್ಜಿ ಸಲ್ಲಿಸಿ ಅನುಮತಿ ಪಡೆಯಬೇಕಿದೆ ಎಂದು ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಟಿ.ಪಿ.ಶಿವಕುಮಾರ್ ಮಾತನಾಡಿ, ಧ್ವನಿವರ್ಧಕ ಬಳಕೆಗೆ ಅನುಮತಿ ಪಡೆದುಕೊಳ್ಳುವವರು ನಿಯಮಾವಳಿಯಲ್ಲಿ ಸೂಚಿಸಿರುವ ಶಬ್ದದ ಪ್ರಮಾಣದ ಮಿತಿಯನ್ನು ಪಾಲಿಸಬೇಕಿದೆ. ಧ್ವನಿವರ್ಧಕ ಬಳಕೆ ಸಂಬಂಧ ಹಗಲು ಸಮಯ ಬೆಳಗ್ಗೆ 6 ರಿಂದ ರಾತ್ರಿ 10 ಗಂಟೆಯವರೆಗೆ ಹಾಗೂ ರಾತ್ರಿ ಸಮಯ ರಾತ್ರಿ 10 ರಿಂದ ಬೆಳಗ್ಗೆ 6 ಗಂಟೆಯವರೆಗೆ ನಿಗದಿ ಮಾಡಲಾಗಿದೆ. ಕೈಗಾರಿಕಾ, ವಾಣಿಜ್ಯ, ಜನವಸತಿ, ನಿಶಬ್ದ ವಲಯ ಪ್ರದೇಶಗಳಿಗೆ ಹಗಲು ಮತ್ತು ರಾತ್ರಿ ವೇಳೆ ನಿರ್ದಿಷ್ಟ ಶಬ್ದ ಪ್ರಮಾಣದ (ಡೆಸಿಬಲ್) ಮಿತಿಯನ್ನು ನಿಗದಿಪಡಿಸಲಾಗಿದೆ ಎಂದರು.

ಸಭೆಯಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಎಸ್.ಕಾತ್ಯಾಯಿನಿದೇವಿ, ಡಿವೈಎಸ್‌ಪಿ ನಾಗರಾಜು, ತಹಸೀಲ್ದಾರರಾದ ರವಿಶಂಕರ್, ನಂಜಯ್ಯ, ಮಂಜುಳಾ, ನಾಗರಾಜು, ಆನಂದನಾಯಕ, ಜಿಲ್ಲಾ ಪರಿಸರ ಅಧಿಕಾರಿ ರಘುರಾಮ್, ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತೆ ಪಂಕಜ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಕೆ.ಸುರೇಶ್, ಇತರೆ ಅಧಿಕಾರಿಗಳು ಹಾಜರಿದ್ದರು.

ಹನೂರು: ಜಿಂಕೆ ಬೇಟೆಗಾರನ ಬಂಧನ

ಹನೂರು, ಮೇ 12(ಸೋಮು)– ಜಿಂಕೆ ಬೇಟೆಯಾಡಿದ ವ್ಯಕ್ತಿಯೊಬ್ಬನನ್ನು ಅರಣ್ಯ ಇಲಾಖೆ ಅಧಿಕಾರಿಗಳು ಬಂಧಿಸಿರುವ ಘಟನೆ ಕಾವೇರಿ ವನ್ಯಜೀವಿ ವಿಭಾಗ ಹನೂರು ವಲಯ ಪ್ರದೇಶದ ಬಂಡಳ್ಳಿ ಶಾಗ್ಯ ಗಸ್ತಿನ ಬಸವನಕಡ (ಮುದುಕಿ ಕ್ಯಾಂಪ್) ಬಳಿ ನಡೆದಿದೆ.

ಕನಕಪುರ ತಾಲೂಕಿನ ಬೊಮ್ಮಸಂದ್ರ ಗ್ರಾಮದ ಕೃಷ್ಣಪ್ಪ ಬಂಧಿತ ಆರೋಪಿ. ಈತ ಬಂದೂಕಿನಿಂದ ಬೇಟೆಯಾಡಿದ ಜಿಂಕೆಯ ಕಳೇಬರವನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಘಟನೆಯ ವಿವರ: ಬಂಧಿತ ಕೃಷ್ಣಪ್ಪ ಹಾಗೂ ಇತರೆ ಮೂವರು ಬುಧವಾರ ರಾತ್ರಿ ಬಂದೂಕಿನೊಂದಿಗೆ ಜಿಂಕೆಗಳನ್ನು ಬೇಟೆಯಾಡುತ್ತಿದ್ದಾಗ ವಿಷಯ ತಿಳಿದು ಸ್ಥಳಕ್ಕೆ ಧಾವಿಸಿದ ಅರಣ್ಯಾಧಿಕಾರಿಗಳು ಮತ್ತು ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಓರ್ವ ಆರೋಪಿಯನ್ನು ಬಂಧಿಸಿದ್ದಾರೆ. ಈ ವೇಳೆ ಇನ್ನುಳಿದ ಮೂವರು ಪರಾರಿಯಾಗಿದ್ದಾರೆ. ಇವರ ಬಗ್ಗೆ ಬಂಧಿತನಿಂದ ಪೊಲೀಸರು ಮಾಹಿತಿ ಕಲೆಹಾಕಿದ್ದು, ಅವರ ಬಂಧನಕ್ಕೆ ಬಲೆ ಬೀಸಿದ್ದಾರೆ. ಇನ್ನು ಬೇಟೆಗಾರರ ಗುಂಡಿಗೆ ಬಲಿಯಾದ ಜಿಂಕೆಯ ಕಳೇಬರವನ್ನು ಹನೂರು ಪಶು ವೈದ್ಯಾಧಿಕಾರಿ ಶಿವರಾಜ್ ಮರಣೋತ್ತರ ಪರೀಕ್ಷೆ ನಡೆಸಿದರು.

ಡಿಸಿಎಫ್ ನಂದೀಶ್, ಎಸಿಎಫ್ ಅಂಕರಾಜು ಮಾರ್ಗದರ್ಶನದಲ್ಲಿ ವಲಯಾರಣ್ಯಾಧಿಕಾರಿ ರಾಮಣ್ಣ ಪೂಜಾರ್, ಉಪ ವಲಯಾರಣ್ಯಾಧಿಕಾರಿ ಚಂದ್ರಗೌಡ ನೇತೃತ್ವದಲ್ಲಿ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ವಸತಿ ಶಾಲೆಗಳ 7,8,9ನೇ ತರಗತಿಗಳ ಪ್ರವೇಶಕ್ಕೆ ಅರ್ಜಿ ಆಹ್ವಾನ

ಚಾಮರಾಜನಗರ, ಮೇ 12– ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆ ಸಂಘದಿಂದ ನಿರ್ವಹಣೆಯಾಗುತ್ತಿರುವ ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚೆನ್ನಮ್ಮ, ಇಂದಿರಾಗಾಂಧಿ ವಸತಿ ಶಾಲೆ, ಡಾ.ಬಿ.ಆರ್.ಅಂಬೇಡ್ಕರ್ ವಸತಿ ಶಾಲೆ, ಏಕಲವ್ಯ ವಸತಿ ಶಾಲೆಗಳಿಗೆ 2022-23ನೇ ಸಾಲಿಗೆ 7, 8 ಹಾಗೂ 9ನೇ ತರಗತಿ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ವಿದ್ಯಾರ್ಥಿಗಳು ಆಯಾ ವಸತಿ ಶಾಲೆಯ ಪ್ರಾಂಶುಪಾಲರಿಂದ ಅರ್ಜಿ ಪಡೆದು ಭರ್ತಿ ಮಾಡಿ ಸಲ್ಲಿಸಲು ಮೇ 25 ಕಡೆಯ ದಿನವಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒತ್ತುವರಿ ಭೂಮಿ ಬೆಳೆಗಾರರಿಗೆ ಗುತ್ತಿಗೆ ನೀಡಲು ಚಿಂತನೆ

ಕಂದಾಯ ಸಚಿವ ಆರ್.ಅಶೋಕ್



ಮಡಿಕೇರಿ,ಮೇ 12– ಸರಕಾರಿ ಭೂಮಿ ಒತ್ತುವರಿ ಮಾಡಿಕೊಂಡು ಬೆಳೆಗಳನ್ನು ಬೆಳೆದಿರುವ ರೈತರು ಹಾಗೂ ಬೆಳೆಗಾರರ 'ಒತ್ತುವರಿದಾರ' ಎಂಬ ಹಣೆಪಟ್ಟಿ ಕಳಚುವುದರೊಂದಿಗೆ ಅವರಿಗೆ ಗೌರವಯುತ ನೆಮ್ಮದಿಯ ಬದುಕು ಕಲ್ಪಿಸಿಕೊಡಲಾಗುವುದು ಎಂದು ಕಂದಾಯ ಸಚಿವ ಆರ್.ಅಶೋಕ್ ಅಭಯ ನೀಡಿದ್ದಾರೆ.

ಮಡಿಕೇರಿಯ ಕ್ರಿಸ್ಟಲ್ ಕೋರ್ಟ್ ಸಭಾಂಗಣದಲ್ಲಿ ಜಿಲ್ಲಾ ಬಿಜೆಪಿ ಏರ್ಪಡಿಸಿದ್ದ ರೈತ ಸಮಾವೇಶದಲ್ಲಿ ಪಾಲ್ಗೊಂಡು ಮಾತನಾಡಿದ ಸಚಿವ ಆರ್.ಅಶೋಕ್, ಒತ್ತುವರಿ ಜಮೀನು ಗುತ್ತಿಗೆ ನೀಡುವುದರಿಂದ ನಿವೇಶನ ರಹಿತರಿಗೆ ಅನ್ಯಾಯವಾಗುವುದಿಲ್ಲ. ನಿವೇಶನಕ್ಕಾಗಿ ಗುರುತಿಸಲಾದ ಮತ್ತು ಭವಿಷ್ಯದಲ್ಲಿ ಸರಕಾರಿ ಯೋಜನೆಗಳಿಗೆ ಬಳಕೆ ಮಾಡಬೇಕಾದ ಭೂಮಿಯನ್ನು ಗುತ್ತಿಗೆ ನೀಡುವುದಿಲ್ಲ. ಈ ಕಾಯಿದೆ ಪ್ರಕಾರ ಗುತ್ತಿಗೆ ನೀಡಿದ ಭೂಮಿಯನ್ನು ಮರಳಿ ಸರಕಾರ ಹಿಂಪಡೆಯುವ ಅವಕಾಶವನ್ನೂ ಒದಗಿಸಲಾಗುತ್ತದೆ ಎಂದು ಸ್ಪಷ್ಟಪಡಿಸಿದರು.

ಜಿಲ್ಲೆಯ 7374 ರೈತರು 1ರಿಂದ 3 ಎಕರೆ ಜಮೀನು ಒತ್ತುವರಿ ಮಾಡಿಕೊಂಡಿದ್ದರೆ, 1910 ಮಂದಿ 3ರಿಂದ 5 ಎಕರೆ ಭೂಮಿ ಒತ್ತುವರಿ ಮಾಡಿಕೊಂಡಿದ್ದಾರೆ. ಇನ್ನು 415 ಮಂದಿ 5ರಿಂದ 10 ಎಕರೆಯಷ್ಟು ಜಾಗ ಒತ್ತುವರಿ ಮಾಡಿಕೊಂಡಿದ್ದು, 10ರಿಂದ 25 ಎಕರೆವರೆಗೆ 55 ಮಂದಿ ಭೂಮಿ ಒತ್ತುವರಿ ಮಾಡಿಕೊಂಡಿದ್ದಾರೆ ಎಂದು ಸಭೆಗೆ ಮಾಹಿತಿ ನೀಡಿದರು. ಒತ್ತುವರಿ ಜಾಗ ಗುತ್ತಿಗೆ ನೀಡುವುದರಿಂದ ಸಣ್ಣ ರೈತರು ಮತ್ತು ಬೆಳೆಗಾರರು ಹೆಚ್ಚು ಅನುಕೂಲ ಪಡೆಯಲಿದ್ದಾರೆ ಎಂದರು.

ಒತ್ತುವರಿದಾರರ ಮೇಲೆ ಕ್ರಮ ಜರುಗಿಸುವ ಕಾಯ್ದೆ 192ಎ ಅನ್ನು ನಗರ ಪ್ರದೇಶದಲ್ಲಿ ಮಾತ್ರ ಜಾರಿಗೆ ಬರುವಂತೆ ತಿದ್ದುಪಡಿ ತರಲಾಗುವುದು. ಒತ್ತುವರಿ ಭೂಮಿಗೆ ಸೂಕ್ತ ದರ ನಿಗದಿಪಡಿಸಿ ಗುತ್ತಿಗೆ ನೀಡಲಾಗುವುದು. ವಿವಿಧ ಮಾನದಂಡಗಳಲ್ಲಿ ದರ ನಿಗದಿಯಾಗಲಿದ್ದು, ಎಷ್ಟು ಭೂಮಿ ಒತ್ತುವರಿ ಮಾಡಲಾಗಿದೆ ಎಂಬ ಆಧಾರದ ಮೇಲೆ ಹಂತ ಹಂತವಾಗಿ ದರ ನಿಗದಿ ಮಾಡಲಿದ್ದೇವೆ ಎಂದು ಹೇಳಿದರು. ಅಕ್ರಮ ಸಕ್ರಮದಡಿಯಲ್ಲಿ ಹಲವು ಮಂದಿ ಅರ್ಜಿ ಸಲ್ಲಿಸದಿರುವ ಬಗ್ಗೆ ತಮ್ಮ ಗಮನಕ್ಕೆ ಬಂದಿದೆ. ಹೀಗಾಗಿ ಫಾರಂ 57ರಲ್ಲಿ ಅರ್ಜಿ ಸಲ್ಲಿಸಲು ರೈತರ ಒತ್ತಾಯದ ಮೇರೆಗೆ ಈ ಅವಧಿಯನ್ನು ಇನ್ನೂ 1 ವರ್ಷ ವಿಸ್ತರಿಸುತ್ತೇವೆ ಎಂದು ಆರ್.ಅಶೋಕ್ ಘೋಷಿಸಿದರು.

ಶಾಸಕ ಕೆ.ಜಿ ಬೋಪಯ್ಯ ಮಾತನಾಡಿ, ಒತ್ತುವರಿ ಭೂಮಿ ಲೀಸ್‌ಗೆ ನೀಡುವ ಸಂದರ್ಭ 10 ಎಕರೆಗಿಂತ ಕಡಿಮೆ ಭೂಮಿ ಒತ್ತುವರಿ ಮಾಡಿದವರಿಗೆ ಮಾತ್ರ ಈ ಯೋಜನೆ ಅನ್ವಯಿಸುವಂತೆ ಕ್ರಮವಹಿಸಬೇಕು ಎಂದು ಶಾಸಕ ಕೆ.ಜಿ. ಬೋಪಯ್ಯ ಸಚಿವ ಆರ್. ಅಶೋಕ್ ಅವರನ್ನು ಆಗ್ರಹಿಸಿದರು.

ಮಡಿಕೇರಿ ಕ್ಷೇತ್ರ ಶಾಸಕ ಅಪ್ಪಚ್ಚು ರಂಜನ್ ಮಾತನಾಡಿ, ಜಿಲ್ಲೆಯಲ್ಲಿ ಪೋಡಿ ಪ್ರಕರಣಗಳ ಇತ್ಯರ್ಥಕ್ಕೆ ಸೀಮಿತವಾಗಿ ಹೆಚ್ಚುವರಿ ಉಪವಿಭಾಗಾಧಿಕಾರಿ ಹಾಗೂ ಸರ್ವೇ ಇಲಾಖೆಯಲ್ಲಿ ಸರ್ವೇಯರ್‌ಗಳನ್ನು ನೇಮಕ ಮಾಡಬೇಕು ಎಂದು ಮನವಿ ಮಾಡಿದರು.

ಸಂವಾದ: ರೈತ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಬಿಜೆಪಿ ಮುಖಂಡ ಮನು ಮುತ್ತಪ್ಪ, ಕಂದಾಯ ಇಲಾಖೆಯಲ್ಲಿ ದಲ್ಲಾಳಿಗಳ ಹಾವಳಿ ಹೆಚ್ಚಾಗಿದೆ. ಇದಕ್ಕೆ ಕಡಿವಾಣ ಹಾಕಬೇಕೆಂದು ಆಗ್ರಹಿಸಿದರು.

ಮಾಜಿ ಸೈನಿಕರ ಸಂಘದ ಪ್ರಮುಖರಾದ ಮೇಜರ್. ಓ.ಎಸ್. ಚಿಂಗಪ್ಪ ಮಾತನಾಡಿ, ಒತ್ತುವರಿ ಭೂಮಿಯಲ್ಲಿ ಕೃಷಿ ಮಾಡಿರುವ ಪ್ರತಿ ಮಾಜಿ ಸೈನಿಕರಿಗೆ ಆ ಭೂಮಿಯನ್ನು ಶಾಶ್ವತವಾಗಿ ನೀಡಬೇಕು ಎಂದು ಒತ್ತಾಯಿಸಿದರು.

ಕೊಡಗು ಡಿಸಿಸಿ ಬ್ಯಾಂಕ್ ಅಧ್ಯಕ್ಷ ಬಾಂಡ್ ಗಣಪತಿ ಮಾತನಾಡಿ, ಪೌತಿ ಖಾತೆ ಬದಲಾವಣೆಗಾಗಿ ಹಲವಾರು ಕುಟುಂಬಗಳು ಕಳೆದ 15 ವರ್ಷಗಳಿಂದ ಕಚೇರಿ ಅಲೆಯುತ್ತಿದ್ದಾರೆ. ಇದಕ್ಕೆ ಶಾಶ್ವತ ಪರಿಹಾರ ಕಲ್ಪಿಸಲು ತಾಲೂಕು, ಹೋಬಳಿ ಮಟ್ಟದಲ್ಲಿ ಪೌತಿ ಖಾತೆ ಆಂದೋಲನ ನಡೆಸುವಂತೆ ಸಲಹೆ ನೀಡಿದರು.

ಕಾಫಿ ಬೆಳೆಗಾರರ ಒಕ್ಕೂಟದ ಪ್ರಮುಖರಾದ ವಿಶ್ವನಾಥ್ ಮಾತನಾಡಿ, ಆರ್.ಟಿ.ಸಿಯಲ್ಲಿ ಕಾಫಿ, ಅಡಕೆ, ತೆಂಗು ಬೆಳೆಗಳನ್ನು ಶಾಶ್ವತ ಬೆಳೆ ಎಂಬುದಾಗಿ ದಾಖಲು ಮಾಡಬೇಕು ಎಂದು ಒತ್ತಾಯಿಸಿದರು.

ಜಮ್ಮಾ ಬಾಣೆ, ಗೋಮಾಳ, ಏಲಕ್ಕಿ ಬೆಳೆಯುವ ಜಮ್ಮಾಮಲೆ, ಪೌತಿ ಖಾತೆ, ಉಪವಿಭಾಗಾಧಿಕಾರಿಗಳ ಕೋರ್ಟ್, ಕುಟುಂಬದ ಪಟ್ಟೇದಾರರಿಂದ ಖಾತೆ ಪ್ರತ್ಯೇಕಿಸುವುದು, ಹಾರಂಗಿ ಮುಳುಗಡೆ ಪ್ರದೇಶದ ಸಂತ್ರಸ್ತರಿಗೆ ನೀಡಿರುವ ಭೂಮಿಗೆ ಹಕ್ಕುಪತ್ರ ಒದಗಿಸುವುದು ಸೇರಿದಂತೆ ಹತ್ತಾರು ವಿಚಾರಗಳ ಕುರಿತು ಸಂವಾದ ಕಾರ್ಯಕ್ರಮದಲ್ಲಿ ವಿವಿಧ ಸಂಘ ಸಂಸ್ಥೆಗಳ ಪ್ರಮುಖರು, ಗ್ರಾಮಸ್ಥರು ಸಚಿವರ ಗಮನ ಸೆಳೆದರು. ಎಲ್ಲಾ ವಿಚಾರಗಳನ್ನು ಆಲಿಸಿದ ಕಂದಾಯ ಸಚಿವ ಆರ್.ಅಶೋಕ್, ಸಮಸ್ಯೆಗಳನ್ನು ಹಂತ-ಹಂತವಾಗಿ ಪರಿಹರಿಸಲಾಗುತ್ತದೆ. ಅದಕ್ಕಾಗಿ ಕೆಲವು ತಿದ್ದುಪಡಿಗಳನ್ನು ತರಲಾಗುತ್ತದೆ ಎಂದು ಭರವಸೆ ನೀಡಿದರು. ಇದೇ ಸಂದರ್ಭ ನೂರಾರು ಮಂದಿ ತಮ್ಮ ಅಹವಾಲುಗಳನ್ನು ಸಚಿವರಿಗೆ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯ ಸುಜಾ ಕುಶಾಲಪ್ಪ, ಪಶ್ಚಿಮ ಘಟ್ಟಗಳ ಸಂರಕ್ಷಣಾ ಕಾರ್ಯಪಡೆ ಸಮಿತಿ ಅಧ್ಯಕ್ಷ ರವಿ ಕುಶಾಲಪ್ಪ, ಬಿಜೆಪಿ ಜಿಲ್ಲಾಧ್ಯಕ್ಷ ರಾಬಿನ್ ದೇವಯ್ಯ ಸೇರಿದಂತೆ ಬಿಜೆಪಿ ಪ್ರಮುಖರು, ವಿವಿಧ ಸಂಘ ಸಂಸ್ಥೆಗಳ ಪ್ರಮುಖರು ಹಾಜರಿದ್ದರು.

ಹೆಬ್ಬಾಲೆ ಗ್ರಾಪಂನಿಂದ 20 ವ್ಯಾಪಾರ ಮಳಿಗೆಗಳ ತೆರವು



ಕುಶಾಲನಗರ, ಮೇ 12– ಹೆಬ್ಬಾಲೆ ಗ್ರಾಮ ಪಂಚಾಯತಿ ಅಧೀನದ 20 ಅಂಗಡಿ ಮಳಿಗೆಗಳನ್ನು ಗ್ರಾಪಂ ವತಿಯಿಂದ ತೆರವುಗೊಳಿಸಲಾಯಿತು.

ಗ್ರಾಮ ಪಂಚಾಯತಿ ನಿಗದಿ ಮಾಡಿದ ತಿಂಗಳ ಬಾಡಿಗೆಯ ಆಧಾರದಲ್ಲಿ ಹರಾಜಿನ ಮೂಲಕ ಅಂಗಡಿ ಮಳಿಗೆಗಳನ್ನು ನಡೆಸಿಕೊಂಡು ಬರುತ್ತಿದ್ದ ವರ್ತಕರು ಹರಾಜು ಅವಧಿ ಮುಕ್ತಾಯಗೊಂಡರೂ ಸಹ ಮರು ಹರಾಜಿನಲ್ಲಿ ಭಾಗವಹಿಸಿರಲಿಲ್ಲ.

ಅಂಗಡಿ ಮಳಿಗೆಗಳನ್ನು ಖಾಲಿ ಮಾಡಲು ಮೂರು ಬಾರಿ ನೋಟೀಸ್ ನೀಡಿದರೂ ಸಹ ಬಾಡಿಗೆದಾರರು ಮಳಿಗೆಗಳನ್ನು ಖಾಲಿ ಮಾಡದೆ ಇರುವುದರಿಂದ ಗ್ರಾಮ ಪಂಚಾಯತಿ ವತಿಯಿಂದ ಮಳಿಗೆಗಳನ್ನು ಖಾಲಿ ಮಾಡಿಸುವ ತೀರ್ಮಾನವನ್ನು ಸಭೆಯಲ್ಲಿ ಕೈಗೊಳ್ಳಲಾಗಿತ್ತು. ಇದಕ್ಕೆ ವಿರುದ್ಧವಾಗಿ ಕೆಲವು ಅಂಗಡಿ ಬಾಡಿಗೆದಾರರು ನ್ಯಾಯಾಲಯದ ಮೆಟ್ಟಿಲು ಹತ್ತಿದ್ದರು. ಅದರಂತೆ ತೆರವು ಕಾರ್ಯಾಚರಣೆಗೆ ಬುಧವಾರ ದಿನ ನಿಗದಿ ಮಾಡಲಾಗಿತ್ತು. ಈ ಸಂದರ್ಭ ಸ್ವಯಂ ಪ್ರೇರಿತರಾಗಿ ಮುಂದೆ ಬಂದ ವರ್ತಕರು ತಮ್ಮ ಅಂಗಡಿಗಳಲ್ಲಿದ್ದ ಸಾಮಾನು ಸರಂಜಾಮುಗಳನ್ನು ಖಾಲಿ ಮಾಡಿಕೊಟ್ಟರು. ಖಾಲಿ ಮಾಡಿದ ಅಂಗಡಿ ಮಳಿಗೆಗಳಿಗೆ ಪಂಚಾಯ್ತಿ ಮೂಲಕ ಬೀಗ ಜಡಿಯಲಾಯಿತು.

ಇದೇ 20 ಅಂಗಡಿ ಮಳಿಗೆಗಳ ಮರು ಹರಾಜಿಗೆ ಮೇ 20ರಂದು ದಿನಾಂಕ ನಿಗದಿ ಮಾಡಿದ್ದು ಹರಾಜಿನಲ್ಲಿ ಪಾಲ್ಗೊಳ್ಳಲು ಪಂಚಾಯ್ತಿ ವರ್ತಕರಿಗೆ ಸೂಚಿಸಿತು.

ಈ ಸಂದರ್ಭ ಗ್ರಾಪಂ ಅಧ್ಯಕ್ಷ ಎಚ್.ಎಸ್. ಮಂಜುನಾಥ್, ಉಪಾಧ್ಯಕ್ಷೆ ಅರುಣಕುಮಾರಿ, ಪಿಡಿಒ ಹರೀಶ್ ಸೇರಿದಂತೆ ಸದಸ್ಯರುಗಳು ಇದ್ದರು.

ಅಸಮಾಧಾನ: ಕಾರ್ಯಾಚರಣೆ ಸಂದರ್ಭ ವರ್ತಕರು ವಿರೋಧ ವ್ಯಕ್ತಪಡಿಸುವ ಸಾಧ್ಯತೆಯಿದ್ದು ಅಹಿತಕರ ಘಟನೆಗಳು ನಡೆಯದಂತೆ ಬಂದೋಬಸ್ತ್ ನೀಡಲು ಪೊಲೀಸ್ ಇಲಾಖೆಗೆ ಪಂಚಾಯ್ತಿ ಮೂಲಕ ಮನವಿ ಸಲ್ಲಿಸಲಾಗಿತ್ತು. ಆದರೆ ಸೋಮವಾರಪೇಟೆ ಉಪವಿಭಾಗ ಪೊಲೀಸರು ಬಂದೋಬಸ್ತ್ ನೀಡಲು ನಿರಾಕರಿಸಿದ್ದಾರೆ ಎಂದು ಗ್ರಾಮ ಪಂಚಾಯತಿ ಅಧ್ಯಕ್ಷ ಹೆಚ್.ಎಸ್ ಮಂಜುನಾಥ್ ಅಸಮಾಧಾನ ತೋಡಿಕೊಂಡಿದ್ದಾರೆ.

ಹುಲಿ ಉಗುರು ಮಾರಾಟ: ಇಬ್ಬರ ಬಂಧನ

ಮಡಿಕೇರಿ,ಮೇ 12– ಹುಲಿಯ 22 ಉಗುರುಗಳನ್ನು ಅಕ್ರಮವಾಗಿ ಮಾರಾಟ ಮಾಡಲು ಯತ್ನಿಸುತ್ತಿದ್ದ ಇಬ್ಬರು ಆರೋಪಿಗಳನ್ನು ಮಡಿಕೇರಿ ಸಿಐಡಿ ಪೊಲೀಸ್ ಅರಣ್ಯ ಘಟಕ ಬಂಧಿಸಿದೆ. ಚಾಮರಾಜನಗರ ಮೂಲದ ಜಡೆಸ್ವಾಮಿ ಮತ್ತು ರಾಮಚಂದ್ರ ಎಂಬವರೇ ಬಂಧಿತ ಆರೋಪಿಗಳಾಗಿದ್ದಾರೆ.



ಮೇ 12ರಂದು ನಗರದ ಸುದರ್ಶನ ವೃತ್ತದ ಬಳಿ ಸಿದ್ದಾಪುರ ಕಡೆಗೆ ಹೋಗುವ ರಸ್ತೆ ಬದಿಯಲ್ಲಿರುವ ಬಸ್ ನಿಲ್ದಾಣದ ಬಳಿ ಇಬ್ಬರು ವ್ಯಕ್ತಿಗಳು ಹುಲಿಯ 22 ಉಗುರುಗಳನ್ನು ಅಕ್ರಮವಾಗಿ ಇಟ್ಟುಕೊಂಡು ಅದನ್ನು ಮಾರಾಟ ಮಾಡಲು ಯತ್ನಿಸುತ್ತಿರುವ ಬಗ್ಗೆ ಮಡಿಕೇರಿ ತಾಲೂಕು ಸಿ.ಐ.ಡಿ ಪೊಲೀಸ್ ಅರಣ್ಯ ಸಂಚಾರಿ ದಳಕ್ಕೆ ಖಚಿತ ಮಾಹಿತಿ ಲಭಿಸಿತ್ತು. ಈ ಸಂದರ್ಭ ಸಿಬ್ಬಂದಿಗಳು ದಾಳಿ ನಡೆಸಿ ಇಬ್ಬರು ಆರೋಪಿಗಳನ್ನು ಮಾಲು ಸಹಿತ ಬಂಧಿಸಿದ್ದಾರೆ. ಆರೋಪಿಗಳ ವಶದಲ್ಲಿದ್ದ ಹುಲಿಯ 22 ಉಗುರುಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಸಿ.ಐ.ಡಿ ಪೊಲೀಸ್ ಅರಣ್ಯ ಘಟಕದ ಹೆಚ್ಚುವರಿ ಪೊಲೀಸ್ ಮಹಾ ನಿರೀಕ್ಷಕ ಕೆ.ವಿ.ಶರತ್ ಚಂದ್ರ ಅವರ ನಿರ್ದೇಶನದ ಮೇರೆಗೆ, ಮಡಿಕೇರಿ ಸಿ.ಐ.ಡಿ ಪೊಲೀಸ್ ಅರಣ್ಯ ಘಟಕದ ಪ್ರಭಾರ ಅಧೀಕ್ಷಕ ಎನ್.ಟಿ. ಶ್ರೀನಿವಾಸ್ ರೆಡ್ಡಿ ಮಾರ್ಗದರ್ಶನದಲ್ಲಿ ಮಡಿಕೇರಿ ಸಿಐಡಿ ಪೊಲೀಸ್ ಅರಣ್ಯ ಸಂಚಾರಿ ದಳದ ಉಪ ನಿರೀಕ್ಷಕಿ ಸಿ.ಯು. ಸವಿ, ಸಿಬ್ಬಂದಿಗಳಾದ ಶೇಖರ್, ರಾಜೇಶ್, ರಾಘವೇಂದ್ರ, ಯೋಗೇಶ್, ಮೋಹನ, ಸ್ವಾಮಿ ಮತ್ತು ಮಂಜುನಾಥ್ ಅವರುಗಳು ಕಾರ್ಯಾಚರಣೆ ನಡೆಸಿದ್ದಾರೆ.

ಪುತ್ರಿ ವಿವಾಹ ಮುಗಿಸಿದ ಕೆಲ ಸಮಯದಲ್ಲೇ ತಂದೆ ಸಾವು

ಸೋಮವಾರಪೇಟೆ, ಮೇ 12– ಇಲ್ಲಿಗೆ ಸಮೀಪದ ಕಿಬ್ಬೆಟ್ಟ ಗ್ರಾಮ ನಿವಾಸಿ 60 ವರ್ಷ ಪ್ರಾಯದ ಚಿನ್ನಪ್ಪ (ಸೋಮ) ಗುರುವಾರ ನಿಧನರಾಗಿದ್ದಾರೆ.



ಇಂದು ಇಲ್ಲಿನ ಒಕ್ಕಲಿಗರ ಸಮುದಾಯ ಭವನದಲ್ಲಿ ತಮ್ಮ ದ್ವಿತೀಯ ಪುತ್ರಿಯ ವಿವಾಹ ಸಮಾರಂಭವನ್ನು ಮುಗಿಸಿ ವಧು-ವರರನ್ನು ಗೋಕಾಕ್‌ಗೆ ಕಳುಹಿಸಿದ ಅತ್ಯಲ್ಪ ಸಮಯದಲ್ಲಿ ತೀವ್ರ ಹೃದಯಾಘಾತಕ್ಕೆ ಒಳಗಾಗಿದ್ದಾರೆ. ತಕ್ಷಣವೇ ಇಲ್ಲಿನ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿದರೂ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾರೆ.

ಮೃತರು ಪತ್ನಿ ಮತ್ತು ಈರ್ವರು ಪುತ್ರಿಯರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಶುಕ್ರವಾರ ಕಿಬ್ಬೆಟ್ಟ ಗ್ರಾಮದಲ್ಲಿ ನಡೆಯಲಿದೆ.

ಬೈಕ್-ಸ್ಕೂಟರ್ ಡಿಕ್ಕಿ: ಯೋಧ ಸೇರಿದಂತೆ ಮೂವರಿಗೆ ಗಾಯ



ಸೋಮವಾರಪೇಟೆಯಲ್ಲಿ ಬೈಕ್ ಮತ್ತು ಸ್ಕೂಟರ್ ನಡುವೆ ಸಂಭವಿಸಿದ ಅಪಘಾತದ ದೃಶ್ಯ. ಒಳಚಿತ್ರದಲ್ಲಿ ಸಿಆರ್‌ಪಿಎಫ್ ಯೋಧ ಡಾಲು ಅವರನ್ನು ಕಾಣಬಹುದು.

ಸೋ.ಪೇಟೆ,ಮೇ 12– ಬೈಕ್ ಮತ್ತು ಸ್ಕೂಟರ್ ಮುಖಾಮುಖಿ ಡಿಕ್ಕಿಯಾದ ಪರಿಣಾಮ ಓರ್ವ ಯೋಧ ಸೇರಿದಂತೆ ಮೂವರು ತೀವ್ರವಾಗಿ ಗಾಯಗೊಂಡಿರುವ ಘಟನೆ ನಗರೂರು ಮಾರುತಿ ಶೋ ರೂಂ ಎದುರಿನ ರಾಜ್ಯ ಹೆದ್ದಾರಿಯಲ್ಲಿ ಗುರುವಾರ ಮಧ್ಯಾಹ್ನ ಸಂಭವಿಸಿದೆ.

ಯಡವಾರೆ ಗ್ರಾಮದ ಕಲ್ಲುಗದ್ದೆ ಮನೆ ಬಾಲಕೃಷ್ಣ ಎಂಬುವವರ ಪುತ್ರ, ಸಿಆರ್‌ಪಿಎಫ್ ಯೋಧ ಕೆ.ಬಿ.ಡಾಲು, ಕಾಗಡಿಕಟ್ಟೆ ಗ್ರಾಮದ ಮನೋಜ್‌ಭಟ್ ಹಾಗೂ ಪೈಂಟರ್ ಆಸೀಫ್ ಗಾಯಗೊಂಡವರು. ಸ್ಕೂಟರ್ ಚಲಿಸುತ್ತಿದ್ದ ಯೋಧ ಡಾಲು ತಲೆಗೆ ತೀವ್ರ ಗಾಯವಾಗಿದ್ದು, ಕಣ್ಣಿನ ಭಾಗಕ್ಕೆ ಪೆಟ್ಟಾಗಿದೆ. ಮೈಸೂರು ಆಸ್ಪತ್ರೆಗೆ ಕರೆದೊಯ್ಯಲಾಗಿದೆ. ಬೈಕ್‌ನಲ್ಲಿದ್ದ ಆಸೀಫ್ ತಲೆಗೆ ಪೆಟ್ಟಾಗಿದ್ದು ಮೈಸೂರಿಗೆ ಹಾಗೂ ಮನೋಜ್‌ಭಟ್‌ರನ್ನು ಮಡಿಕೇರಿ ಜಿಲ್ಲಾಸ್ಪತ್ರೆಗೆ ಸೇರಿಸಲಾಗಿದೆ.ಕುಶಾಲನಗರದಿಂದ ಸೋಮವಾರಪೇಟೆಗೆ ಬರುತ್ತಿದ್ದ ಬೈಕ್ ಹಾಗೂ ಸೋಮವಾರಪೇಟೆಯಿಂದ ಯಡವಾರೆಗೆ ಹೋಗುತ್ತಿದ್ದ ಸ್ಕೂಟರ್ ನಡುವೆ ಅಪಘಾತ ಸಂಭವಿಸಿತ್ತು. ಸೋಮವಾರಪೇಟೆ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಲಾಯಿತು. ಸೋಮವಾರಪೇಟೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಇಂದು ಕೊಡಗು ಜಿಲ್ಲಾ ಸಂಪನ್ಮೂಲ ಕೇಂದ್ರ ಉದ್ಘಾಟನೆ

ಮಡಿಕೇರಿ, ಮೇ 12– ಕೊಡಗು ಜಿಲ್ಲಾ ಪಂಚಾಯತ್ ವತಿಯಿಂದ ಕೊಡಗು ಜಿಲ್ಲಾ ಸಂಪನ್ಮೂಲ ಕೇಂದ್ರ ಉದ್ಘಾಟನಾ ಸಮಾರಂಭವು ಮೇ 13 ರಂದು ಬೆಳಗ್ಗೆ 11 ಗಂಟೆಗೆ ಜಿ.ಪಂ.ಕಟ್ಟಡದ ಹತ್ತಿರದ ಕೊಡಗು ಜಿಲ್ಲಾ ಸಂಪನ್ಮೂಲ ಕೇಂದ್ರದಲ್ಲಿ ನಡೆಯಲಿದೆ.

ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಬಿ.ಸಿ.ನಾಗೇಶ್ ಅವರು ಉದ್ಘಾಟಿಸಲಿದ್ದಾರೆ. ಶಾಸಕರಾದ ಎಂ.ಪಿ.ಅಪ್ಪಚ್ಚುರಂಜನ್ ಅವರು ಅಧ್ಯಕ್ಷತೆ ವಹಿಸಲಿದ್ದಾರೆ. ಸರ್ಕಾರಿ ಜಮೀನುಗಳ ಸಂರಕ್ಷಣಾ ಸಮಿತಿ ಅಧ್ಯಕ್ಷರು ಹಾಗೂ ಶಾಸಕ ಕೆ.ಜಿ.ಬೋಪಯ್ಯ, ಕರ್ನಾಟಕ ರಾಜ್ಯ ಪಶ್ಚಿಮ ಘಟ್ಟಗಳ ಸಂರಕ್ಷಣಾ ಕಾರ್ಯಪಡೆ ಸಮಿತಿ ಅಧ್ಯಕ್ಷರಾದ ರವಿಕುಶಾಲಪ್ಪ, ಸಂಸದರಾದ ಪ್ರತಾಪ್‌ಸಿಂಹ, ವಿಧಾನಪರಿಷತ್ ಸದಸ್ಯರಾದ ವೀಣಾ ಅಚ್ಚಯ್ಯ, ಎಸ್.ಎಲ್.ಬೋಜೇಗೌಡ, ಸುಜಾ ಕುಶಾಲಪ್ಪ, ಆಯನೂರು ಮಂಜುನಾಥ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಎಲ್.ಕೆ.ಅತೀಕ್, ಪ್ರಧಾನ ಕಾರ್ಯದರ್ಶಿ ಉಮಾ ಮಹಾದೇವನ್, ಜಿಲ್ಲಾ ಪಂಚಾಯತ್ ಆಡಳಿತಾಧಿಕಾರಿ ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ವಿ.ಅನ್ಬುಕುಮಾರ್ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಮೈಸೂರು ಅಬ್ದುಲ್ ನಜೀರ್‌ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ನಿರ್ದೇಶಕರಾದ ಕೆ.ಲಕ್ಷ್ಮೀಪ್ರಿಯ, ಕೊಡಗು ಜಿ.ಪಂ. ಸಿಇಒ ಭಂವರ್ ಸಿಂಗ್ ಮೀನಾ ಇತರರು ಪಾಲ್ಗೊಳ್ಳಲಿದ್ದಾರೆ.

ಒಂದನೇ ಪುಟದಿಂದ

ಮತಾಂತರ ನಿಷೇಧ ಕಾಯ್ದೆಗೆ ಸುಗ್ರೀವಾಜ್ಞೆ

ಅನ್ವಯಿಸುವುದಿಲ್ಲ. 1 ಎಕರೆಯಲ್ಲಿ 8-9 ನಿವೇಶನಗಳನ್ನು ರಚಿಸಿದರೆ, ಅದಕ್ಕೆ ಟೌನ್ ಪ್ಲಾನಿಂಗ್ ಅನುಮೋದನೆ ಬೇಕಾಗುತ್ತದೆ. ಅದೇ ರೀತಿ ಲೇಔಟ್ ನಿರ್ಮಾಣ ಮಾಡಿದರೂ ಟೌನ್ ಪ್ಲಾನಿಂಗ್ ಅನುಮೋದನೆ ಅನಿವಾರ್ಯ ಎಂದು ಹೇಳಿದರು.

ಟ್ರ್ಯಾಕ್ಟರ್ ಬಳಸಿ ಕೃಷಿ ಚಟುವಟಿಕೆಯಲ್ಲಿ ತೊಡಗುವ ರೈತರಿಗೆ ಡೀಸೆಲ್ ವೆಚ್ಚಕ್ಕಾಗಿ ಎಕರೆಯೊಂದಕ್ಕೆ 250 ರೂ.ಗಳಂತೆ 5 ಎಕರೆವರೆಗೆ ಸಹಾಯ ಧನವನ್ನು ರೈತರ ಖಾತೆಗೆ ವರ್ಗಾವಣೆ ಮಾಡಲು ಸಂಪುಟ ತೀರ್ಮಾನಿಸಿದೆ ಎಂದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಕೈಗಾರಿಕಾ ನಿವೇಶನದ ಸಹಾಯ ಧನ ಈವರೆಗೂ ಶೇ.50ರಷ್ಟು ಇದ್ದುದ್ದನ್ನು ಶೇ.75ಕ್ಕೆ ಹೆಚ್ಚಿಸಲಾಗಿದೆ. ದೌರ್ಜನ್ಯಕ್ಕೊಳಗಾಗಿ ಮೃತಪಟ್ಟ ಪರಿಶಿಷ್ಟ ಜಾತಿ ಮತ್ತು ಪಂಗಡದವರ ಕುಟುಂಬದವರಿಗೆ ಅನುಕಂಪ ಆಧಾರದಲ್ಲಿ ಸರ್ಕಾರಿ ನೌಕರಿ ನೀಡಲು ತೀರ್ಮಾನಿಸಲಾಗಿದ್ದು, ಸರ್ಕಾರಿ ನೌಕರರು ಮೃತಪಟ್ಟಾಗ ಅವರ ವಾರಸುದಾರರಿಗೆ ಅನುಕಂಪ ಆಧಾರದ ಮೇಲೆ ನೌಕರಿ ನೀಡಲು ಯಾವ ನಿಯಮಗಳನ್ನು ಅನುಸರಿಸಲಾಗುತ್ತದೆಯೋ ಅದೇ ನಿಯಮ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಅನ್ವಯಿಸುತ್ತದೆ ಎಂದು ಸಚಿವರು ಹೇಳಿದರು.

ಮೇ 17ರೊಳಗೆ ಪೂರ್ಣಗೊಳಿಸಿ

ಹಿಂಭಾಗದಲ್ಲಿರುವ ಹಿಂದೂ ದೇಗುಲದಲ್ಲಿ ವರ್ಷಪೂರ್ತಿ ಪ್ರಾರ್ಥನೆ ಸಲ್ಲಿಸಲು ಐದು ಹಿಂದೂ ಮಹಿಳೆಯರು ಸಲ್ಲಿಸಿದ ಅರ್ಜಿಗಳ ಮೇಲೆ ನ್ಯಾಯಾಲಯವು ಈ ವರ್ಷದ ಏಪ್ರಿಲ್‌ನಲ್ಲಿ ಪರಿಶೀಲನೆಗೆ ಆದೇಶಿಸಿತ್ತು. ಪ್ರಸ್ತುತ ಈ ತಾಣವನ್ನು ವರ್ಷಕ್ಕೊಮ್ಮೆ ಪ್ರಾರ್ಥನೆಗಾಗಿ ತೆರೆಯಲಾಗಿದೆ. ಮಹಿಳೆಯರು ಹಳೆಯ ದೇವಾಲಯದ ಸಂಕೀರ್ಣದಲ್ಲಿ ಪ್ರಾರ್ಥಿಸಲು ಅನುಮತಿಯನ್ನು ಬಯಸಿದ್ದಾರೆ. ಈ ಹಿಂದೆ ಮೇ 10ರೊಳಗೆ ವರದಿ ಸಲ್ಲಿಸುವಂತೆ ಸ್ಥಳೀಯ ನ್ಯಾಯಾಲಯ ಅಧಿಕಾರಿಗಳಿಗೆ ಸೂಚಿಸಿತ್ತು.

ಎಲ್ಲವೂ ಗುಪ್ತ್... ಗುಪ್ತ್...

ಸಂದೇಶ ತಲುಪಿಸಿದ್ದಾರೆ. ಇದು ಏನು ಎಂಬುದು ಬಹಿರಂಗಗೊಂಡಿಲ್ಲ. ಮುಖ್ಯಮಂತ್ರಿಯವರು ದೆಹಲಿಯಿಂದ ತಡರಾತ್ರಿ ಹಿಂತಿರುಗುತ್ತಿದ್ದಂತೆ ಎಲ್ಲಾ ಹಿರಿಯ ಸಚಿವರನ್ನು ಸಂಪರ್ಕಿಸಿ, ಇಂದು ಮಧ್ಯಾಹ್ನದ ನಡೆಯುತ್ತಿರುವ ಸಂಪುಟ ಸಭೆಗೆ ಕಡ್ಡಾಯವಾಗಿ ಹಾಜರಾಗುವಂತೆ ಸಲಹೆ ಮಾಡಿದ್ದರು. ಬಿ.ಎಸ್. ಯಡಿಯೂರಪ್ಪ ಅವರನ್ನು ಅಧಿಕಾರದಿಂದ ಕೆಳಗಿಳಿಸುವ ಸಂದರ್ಭದಲ್ಲೂ ಪ್ರಧಾನಿಯವರು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರಿಂದಲೇ ಸಂದೇಶ ಕಳುಹಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ರಾಜನಾಥ್‌ಸಿಂಗ್ ಅಲ್ಲದೆ, ಬಿಜೆಪಿ ರಾಷ್ಟ್ರೀಯ ಹಿರಿಯ ಮುಖಂಡರೊಬ್ಬರು ಯಡಿಯೂರಪ್ಪನವರಿಗೆ ತಮ್ಮ ಸ್ಥಾನ ತೆರವುಗೊಳಿಸುವಂತೆ ಸೂಚಿಸಿದ್ದರು. ಇದೀಗ ರಾಜನಾಥ್‌ಸಿಂಗ್ ಮತ್ತು ಮುಖ್ಯಮಂತ್ರಿ ಭೇಟಿ, ಬಿಜೆಪಿ ವಲಯದಲ್ಲಿ ಭಾರೀ ಚರ್ಚೆಗೆ ಗ್ರಾಸವಾಗಿದೆ. ರಾಜನಾಥ್‌ಸಿಂಗ್ ಭೇಟಿಯ ನಂತರ ಮುಖ್ಯಮಂತ್ರಿಯವರು, ಗೃಹ ಸಚಿವರನ್ನು ಭೇಟಿ ಮಾಡಿದ ಸಂದರ್ಭದಲ್ಲಿ ಹೆಚ್ಚಿನ ರಾಜಕೀಯ ಚರ್ಚೆ ನಡೆದಿಲ್ಲ. ಬೊಮ್ಮಾಯಿ ಅವರೇ ಪ್ರಸ್ತಾಪ ಮಾಡಲು ಮುಂದಾದಾಗ ಇನ್ನು ಎರಡು ಮೂರು ದಿನದಲ್ಲಿ ನಮ್ಮ ನಿರ್ಧಾರವನ್ನು ನಿಮಗೆ ತಿಳಿಸುವುದಾಗಿ ಹೇಳಿ ಕಳುಹಿಸಿದ್ದರು.

ಜೂ.13ರಂದು ಚುನಾವಣೆ

ಮುಕ್ತಾಯವಾಗಲಿದೆ. ಈ ಕ್ಷೇತ್ರಗಳಿಗೆ ಮೇ 19ರಂದು ಅಧಿಸೂಚನೆ ಹೊರಡಲಿದ್ದು, ಅಂದೇ ನಾಮಪತ್ರ ಸಲ್ಲಿಕೆ ಆರಂಭವಾಗಲಿದೆ. ಮೇ 26 ನಾಮಪತ್ರ ಸಲ್ಲಿಕೆಗೆ ಕೊನೆ ದಿನವಾಗಿದ್ದು, ಮೇ 27ರಂದು ನಾಮಪತ್ರ ಪರಿಶೀಲನೆ, ಮೇ 30 ನಾಮಪತ್ರ ಹಿಂಪಡೆಯಲು ಕೊನೆಯ ದಿನವಾಗಿದ್ದು, ಅಗತ್ಯ ಬಿದ್ದಲ್ಲಿ ಜೂ.13ರಂದು ಬೆಳಗ್ಗೆ 8 ರಿಂದ ಸಂಜೆ 4ರವರೆಗೆ ಮತದಾನ ನಡೆಯಲಿದೆ. ಜೂ.15ರಂದು ಮತ ಎಣಿಕೆ ಕಾರ್ಯ ನಡೆಯಲಿದ್ದು, ಚುನಾವಣಾ ಪ್ರಕ್ರಿಯೆ ಜೂ.17ಕ್ಕೆ ಮುಕ್ತಾಯವಾಗಲಿದೆ ಎಂದು ಚುನಾವಣಾ ಆಯೋಗದ ಪ್ರಕಟಣೆ ತಿಳಿಸಿದೆ.

ಅಧಿಕೃತವಾಗಿ ಸೆಣಸಾಟ

ಮತ್ತು ಮಂಡ್ಯ, ಹಾಸನ ಜಿಲ್ಲಾಧಿಕಾರಿಗಳು ಸಹಾಯಕ ಚುನಾವಣಾಧಿಕಾರಿಗಳಾಗಿ ಕಾರ್ಯನಿರ್ವಹಿಸುವರು. ಪದವೀಧರರು ಮತಚಲಾಯಿಸುವ ಚುನಾವಣೆ ಇದಾಗಿದ್ದರೂ ಎಲ್ಲಾ ಪದವೀಧರರು ಮತ ಚಲಾಯಿಸಲು ಸಾಧ್ಯವಿಲ್ಲ. ಮತದಾರರ ಪಟ್ಟಿಗೆ ಹೆಸರು ನೊಂದಾಯಿಸಿಕೊಂಡಿರುವ ಪದವೀಧರರು ಮಾತ್ರ ಮತ ಚಲಾಯಿಸಲು ಅರ್ಹರಾಗಿರುತ್ತಾರೆ. ಚುನಾವಣೆಯಲ್ಲಿ ಸ್ಪರ್ಧಿಸಲು ಸಲ್ಲಿಸುವ ನಾಮಪತ್ರದಲ್ಲಿ ಕನಿಷ್ಟ 10 ಮತದಾರರು ಸೂಚಕರಾಗಿ ಸಹಿ ಮಾಡಿರಬೇಕು. ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು 5 ಸಾವಿರ ರೂ. ಹಾಗೂ ಇತರ ಅಭ್ಯರ್ಥಿಗಳು 10 ಸಾವಿರ ರೂ.ಗಳನ್ನು ಠೇವಣಿಯಾಗಿ ಇಡಬೇಕಾಗುತ್ತದೆ.

ಮೇ 19ರಂದು ಅಧಿಸೂಚನೆ ಹೊರ ಬೀಳಲಿದ್ದು, ಅಂದು ನಾಮಪತ್ರ ಸಲ್ಲಿಕೆ ಆರಂಭವಾಗಲಿದೆ. ಮೇ 26 ನಾಮಪತ್ರ ಸಲ್ಲಿಕೆಗೆ ಕೊನೆಯ ದಿನವಾಗಿದ್ದು, ಮೇ 22 ಭಾನುವಾರವಾಗಿರುವುದರಿಂದ ಅಂದು ನಾಮಪತ್ರ ಸಲ್ಲಿಕೆಗೆ ಅವಕಾಶವಿಲ್ಲ. ಮೇ 27ರಂದು ನಾಮಪತ್ರಗಳ ಪರಿಶೀಲನಾ ಕಾರ್ಯ ನಡೆಯಲಿದ್ದು, ಮೇ 30 ನಾಮಪತ್ರ ಹಿಂಪಡೆಯಲು ಕೊನೆಯ ದಿನವಾಗಿರುತ್ತದೆ. ಅಗತ್ಯವಿದ್ದಲ್ಲಿ ಜೂ.13ರಂದು ಬೆಳಗ್ಗೆ 8 ರಿಂದ ಸಂಜೆ 4ರವರೆಗೆ ಮತದಾನ ನಡೆಯಲಿದ್ದು, ಜೂ.15ರಂದು ಮತ ಎಣಿಕೆ ನಡೆಯಲಿದೆ. ಜೆಡಿಎಸ್‌ನ ಕೆ.ಟಿ. ಶ್ರೀಕಂಠೇಗೌಡ ಈ ಕ್ಷೇತ್ರದ ಹಾಲಿ ವಿಧಾನಪರಿಷತ್ ಸದಸ್ಯರಾಗಿದ್ದು, ಈಗ ನಡೆಯುವ ಚುನಾವಣೆಯಲ್ಲಿ ಸ್ಪರ್ಧೆಯಿಂದ ದೂರ ಉಳಿದಿದ್ದಾರೆ. ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಮಾಜಿ ರಾಜ್ಯಾಧ್ಯಕ್ಷ ಹೆಚ್.ಕೆ. ರಾಮು ಅವರನ್ನು ಅಭ್ಯರ್ಥಿಯಾಗಿ ಈಗಾಗಲೇ ಜೆಡಿಎಸ್ ಘೋಷಿಸಿದ್ದು, ಶ್ರೀಕಂಠೇಗೌಡರು ತಮ್ಮ ಪಕ್ಷದ ಅಧಿಕೃತ ಅಭ್ಯರ್ಥಿಯ ಪರವಾಗಿ ಈಗಾಗಲೇ ಪ್ರಚಾರ ಆರಂಭಿಸಿದ್ದಾರೆ.

ಕಳೆದ ಬಾರಿ ಮೊದಲ ಬಾರಿಗೆ ಈ ಕ್ಷೇತ್ರದಿಂದ ಸ್ಪರ್ಧಿಸಿ ಪರಾಭವಗೊಂಡಿದ್ದ ಮೈ.ವಿ. ರವಿಶಂಕರ್ ಅವರನ್ನೇ ಈ ಬಾರಿಯೂ ಬಿಜೆಪಿ ತನ್ನ ಅಭ್ಯರ್ಥಿಯಾಗಿ ಘೋಷಿಸಿದೆ. ಮಾಜಿ ಸಂಸದ, ಹಿರಿಯ ರಾಜಕೀಯ ಮುತ್ಸದ್ಧಿ ದಿವಂಗತ ಜಿ. ಮಾದೇಗೌಡರ ಪುತ್ರ ಮಧು ಮಾದೇಗೌಡ ಅವರನ್ನು ಕಾಂಗ್ರೆಸ್ ತನ್ನ ಅಧಿಕೃತ ಅಭ್ಯರ್ಥಿಯಾಗಿ ಘೋಷಿಸಿದೆ. ದಕ್ಷಿಣ ಪದವೀಧರರ ಕ್ಷೇತ್ರದ ಚುನಾವಣೆಗಾಗಿ ಕಳೆದ ಸುಮಾರು 6 ತಿಂಗಳ ಹಿಂದಿನಿಂದಲೇ ಮೂರೂ ಪಕ್ಷದ ನಾಯಕರು ತಯಾರಿ ನಡೆಸಿದ್ದು, ಪದವೀಧರರ ನೋಂದಣಿ ಕಾರ್ಯವನ್ನು ಮುಗಿಸಿದ್ದಾರೆ. ಚುನಾವಣೆ ಅಧಿಕೃತ ಘೋಷಣೆಗೂ ಮುನ್ನವೇ ಮೂರೂ ಪಕ್ಷದ ಅಭ್ಯರ್ಥಿಗಳು ಹಾಗೂ ಮುಖಂಡರು ಈ ಕ್ಷೇತ್ರ ವ್ಯಾಪ್ತಿಗೆ ಒಳಪಡುವ ನಾಲ್ಕೂ ಜಿಲ್ಲೆಗಳನ್ನು ಪದವೀಧರ ಮತದಾರರನ್ನು ಭೇಟಿ ಮಾಡುತ್ತಿದ್ದಾರೆ. ಅಲ್ಲಲ್ಲಿ ಕಾರ್ಯಕರ್ತರ ಸಭೆಗಳನ್ನು ನಡೆಸಿ, ಚುನಾವಣೆಗೆ ಅವರನ್ನು ಹುರಿದುಂಬಿಸುತ್ತಿದ್ದಾರೆ.

ಜ್ವರಕ್ಕೆ ಅಂಜಬೇಕಿಲ್ಲ

ನಿಗಾ ಇಡಲಾಗಿದೆ. ಮಕ್ಕಳಿಗೆ ಜ್ವರ ಅಥವಾ ಚರ್ಮದ ಮೇಲೆ ಗುಳ್ಳೆಗಳು ಕಂಡು ಬಂದರೆ ಸೂಕ್ತ ತಪಾಸಣೆ ಹಾಗೂ ಚಿಕಿತ್ಸೆ ನೀಡುವಂತೆ ಸೂಚಿಸಲಾಗಿದೆ ಎಂದು ಹೇಳಿದ್ದಾರೆ. ಟೊಮ್ಯಾಟೋ ಜ್ವರದ ಬಗ್ಗೆ ಸಾಮಾಜಿಕ ಜಾಲ ತಾಣಗಳಲ್ಲಿ ತಪ್ಪು ಮಾಹಿತಿ ಹರಡುತ್ತಿದೆ. ಸಾರ್ವಜನಿಕರು ಇದನ್ನು ನಂಬಬಾರದು ಎಂದು ಕಿವಿಮಾತು ಹೇಳಿದ್ದಾರೆ. ಇಲ್ಲಿ ತನಕ ಕರ್ನಾಟಕದಲ್ಲಿ ಟೊಮ್ಯಾಟೋ ಫ್ಲೂನ ಯಾವುದೇ ಪ್ರಕರಣಗಳು ದಾಖಲಾಗಿಲ್ಲ. ಆದರೆ ಗಡಿಭಾಗದಲ್ಲಿ, 5 ವರ್ಷಕ್ಕಿಂತ ಕೆಳಗಿನ ಮಕ್ಕಳಿಗೆ ಜ್ವರ ಅಥವಾ ಚರ್ಮದ ಮೇಲೆ ಗುಳ್ಳೆಗಳು ಕಾಣಿಸಿದರೆ ತಪಾಸಣೆ ಮಾಡಲು ಸೂಚಿಸಲಾಗಿದೆ. ಕೊರೊನಾ 4ನೇ ಅಲೆಯ ಗಂಭೀರತೆ ಕಡಿಮೆ ಇದೆ. ಆದರೆ ಎಲ್ಲರೂ 3ನೇ ಡೋಸ್ ಲಸಿಕೆಯನ್ನು ಪಡೆದುಕೊಳ್ಳಬೇಕು ಎಂದು ಹೇಳಿದರು.

ವಾಣಿ ವಿಲಾಸ ಮಾರುಕಟ್ಟೆ ಸೇರ್ಪಡೆ

ಸಜ್ಜಾ ಏಕಾಏಕಿ ಕುಸಿದು ಬಿದ್ದಿದೆ. ಇಟ್ಟಿಗೆ ಕುಸಿಯಲಾರಂಭಿಸಿದ ಸಂದರ್ಭದಲ್ಲೇ ಬಸ್ ಬಂದಿತು. ಆಗ ತಂಗುದಾಣದಲ್ಲಿ ನಿಂತಿದ್ದ ಮೂರ‍್ನಾಲ್ಕು ಜನ ಬಸ್ ಹತ್ತಲು ಓಡಿದ್ದರಿಂದ ಅವರೆಲ್ಲಾ ಅಪಾಯದಿಂದ ಪಾರಾದರು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ನಗರ ಬಸ್ ನಿಲ್ದಾಣದಿಂದ ಹಲವು ಬಡಾವಣೆ ಹಾಗೂ ಗ್ರಾಮಾಂತರ ಪ್ರದೇಶಕ್ಕೆ ತೆರಳುವ ಬಸ್‌ಗಳು, ಖಾಸಗಿ ವಾಹನಗಳು ಈ ಮಾರ್ಗದಲ್ಲೇ ಸಂಚರಿಸುವುದರಿಂದ ಅಗ್ರಹಾರ ವೃತ್ತಕ್ಕೆ ಹತ್ತಿರದಲ್ಲಿರುವ ಈ ತಂಗುದಾಣದಲ್ಲಿ ಸದಾ ಹೆಚ್ಚು ಜನ ಇರುತ್ತಾರೆ. ಅದರಲ್ಲೂ ಮಳೆ ಸಂದರ್ಭದಲ್ಲಿ ನಿಂತು ಕೊಳ್ಳುವುದಕ್ಕೂ ಜಾಗ ಇರದಂತೆ ಪರಿಸ್ಥಿತಿ ಇರುತ್ತದೆ. ತಂಗುದಾಣದಲ್ಲಿ ಜಾಗ ವಿಲ್ಲದಿದ್ದಾಗ ಹಿಂಭಾಗದ ಮಳಿಗೆಗಳ ಮುಂಭಾಗದಲ್ಲೂ ನಿಲ್ಲುತ್ತಿದ್ದರು. ಇಂದು ಅದೇ ಮಳಿಗೆಗಳ ಸಜ್ಜಾ ಕುಸಿದು ಬಿದ್ದಿದೆ. ಸಜ್ಜಾ ಬಿದ್ದ ರಭಸಕ್ಕೆ ಇಟ್ಟಿಗೆ, ಮಣ್ಣು ಬಸ್ ತಂಗುದಾಣದೊಳಗೂ ಹರಡಿದೆ. ಅದೃಷ್ಟವಶಾತ್ ಇಂದು ಮಳೆಯಿದ್ದರೂ ಸಹ ತಂಗುದಾಣದಲ್ಲಿ ಕೆಲವರು ಮಾತ್ರ ನಿಂತಿದ್ದರು. ಮಳಿಗೆ ಮುಂದೆಯೂ ಯಾರೂ ನಿಂತಿರಲಿಲ್ಲ. ಏನಾದರೂ ಎಂದಿನಂತೆ ಜನ ಇದ್ದಿದ್ದರೆ ಭಾರೀ ಸಾವು-ನೋವು ಸಂಭವಿಸುತ್ತಿತ್ತು ಎಂದು ಸ್ಥಳೀಯರು ಆತಂಕಿಸಿದ್ದಾರೆ.

ಸ್ಥಳಕ್ಕೆ ಆಗಮಿಸಿದ ನಗರಪಾಲಿಕೆ ಸಿಬ್ಬಂದಿ, ಕುಸಿದ ಸಜ್ಜಾ ಅವಶೇಷವನ್ನು ತೆರವುಗೊಳಿಸಿದ್ದಾರೆ. ಆದರೆ ಮಾರುಕಟ್ಟೆಯ ಇನ್ನುಳಿದ ಮಳಿಗೆಗಳ ವ್ಯಾಪಾರಿಗಳಲ್ಲಿ ಆತಂಕ ಶುರುವಾಗಿದೆ. ತಂಗುದಾಣದಲ್ಲಿ ನಿಲ್ಲುವುದಕ್ಕೂ ಭಯಪಡುವಂತಾಗಿದೆ. 1927ರಲ್ಲಿ ನಿರ್ಮಿಸಲಾದ ವಾಣಿ ವಿಲಾಸ ಮಾರುಕಟ್ಟೆಯ ಒಳ ಹಾಗೂ ಹೊರಭಾಗದಲ್ಲಿ ಸುಮಾರು 100 ಮಳಿಗೆಗಳಿವೆ. ಆದರೆ ಸಮರ್ಪಕ ನಿರ್ವಹಣೆ ಇಲ್ಲ. ಮಳೆ ನೀರು ನಿಲ್ಲದಂತೆ ಎಚ್ಚರವಹಿಸಿ, ಆಗಾಗ್ಗೆ ಕಟ್ಟಡದ ಸದೃಢತೆಯನ್ನು ಮೌಲ್ಯಮಾಪನ ಮಾಡುವ ಕಾರ್ಯವಾಗಬೇಕಿದೆ. ಇಲ್ಲವಾದರೆ ಇಂತಹ ಅವಘಡಗಳು ಸಂಭವಿಸುತ್ತಲೇ ಇರುತ್ತವೆ. ಹೆಚ್ಚು ಜನ ಸಂಚಾರ ವಿರುವ ಸ್ಥಳಗಳಲ್ಲಿರುವ ಪಾರಂಪರಿಕ ಕಟ್ಟಡಗಳ ಬಗ್ಗೆ ವಿಶೇಷ ಗಮನಹರಿಸಬೇಕು. ಜನರ ಪ್ರಾಣ ಹೋದ ಮೇಲೆ ಬಾಯಿ ಬಡಿದುಕೊಳ್ಳುವುದರಲ್ಲಿ ಅರ್ಥವಿಲ್ಲ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮದ್ಯ ಖರೀದಿಗೆ ಹಳೆ ವಿಧಾನ ಮುಂದುವರೆಸಲು ಆಗ್ರಹ

ಒಂದು ದಿನ ಮದ್ಯ ಖರೀದಿಗೆ ಇಂಡೆಂಟ್ ಹಾಕದೇ ಸಾಂಕೇತಿಕ ವಿರೋಧ

ಮೈಸೂರು,ಮೇ 12(ಪಿಎಂ)- ಮದ್ಯ ಖರೀದಿಗೆ ಹೊಸದಾಗಿ ಜಾರಿಗೆ ತಂದಿರುವ ವೆಬ್ ಇಂಡೆಂಟಿಂಗ್ ಆನ್‌ಲೈನ್ ವ್ಯವಸ್ಥೆ ಕೈಬಿಟ್ಟು ಹಳೇ ವ್ಯವಸ್ಥೆ ಮರು ಜಾರಿಗೆ ಆಗ್ರಹಿಸಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಮದ್ಯ ವರ್ತಕರ ಸಂಘದ ವತಿಯಿಂದ ಗುರುವಾರ ಪ್ರತಿಭಟನೆ ನಡೆಸಲಾಯಿತು.

ಇಂದು ಮದ್ಯ ಖರೀದಿಗೆ ಇಂಡೆಂಟ್ ಹಾಕದೇ ಸಾಂಕೇತಿಕ ವಿರೋಧದ ಮೂಲಕ ತಮ್ಮ ಆಕ್ರೋಶ ವ್ಯಕ್ತಪಡಿಸಿದ ಮದ್ಯ ವರ್ತಕರು, ತಮ್ಮ ಸಂಘಟನೆ ವತಿಯಿಂದ ಮೈಸೂರಿನ ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿರುವ ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತದ (ಕೆಎಸ್‌ಬಿಸಿಎಲ್) ಡಿಪೋ ಎದುರು ಪ್ರತಿಭಟನೆ ನಡೆಸಿ, ಶೀಘ್ರ ಬೇಡಿಕೆ ಈಡೇರಿಸುವಂತೆ ಸದರಿ ಡಿಪೋ ವ್ಯವಸ್ಥಾಪಕ ಎನ್.ಲೋಕೇಶ್ ಅವರ ಮೂಲಕ ಕೆಎಸ್‌ಬಿಸಿಎಲ್ ವ್ಯವಸ್ಥಾಪಕ ನಿರ್ದೇಶಕ ಡಾ.ಪಿ.ಸಿ.ಜಾಫರ್ ಅವರಿಗೆ ಮನವಿ ಸಲ್ಲಿಸಿದರು.

ಇದೇ ವೇಳೆ ಮಾತನಾಡಿದ ಫೆಡರೇಷನ್ ಆಫ್ ವೈನ್ ಮರ್ಚೆಂಟ್ಸ್ ಅಸೋಸಿಯೇಷನ್ ಹಾಗೂ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಮದ್ಯ ವರ್ತಕರ ಸಂಘದ ಅಧ್ಯಕ್ಷ ಎಸ್.ಗುರುಸ್ವಾಮಿ, ವೆಬ್ ಇಂಡೆಂಟಿಂಗ್ ತಂತ್ರಾಂಶ ಇನ್ನು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಇದನ್ನು ಸರಿಪಡಿಸುವಂತೆ ಒಂದು ತಿಂಗಳಿಂದ ಹೋರಾಟ ಮಾಡುತ್ತಿದ್ದೇವೆ. ಈಗ ಹಂತ ಹಂತವಾಗಿ ಸುಧಾರಣೆ ಕಾಣುವ ಲಕ್ಷಣ ಗೋಚರಿಸುತ್ತಿದೆ ಅದು ಪೂರ್ಣ ಪ್ರಮಾಣದಲ್ಲಿ ಸರಿಯಾಗುವವರೆಗೆ ಹಳೇ ವ್ಯವಸ್ಥೆಯೇ ಇರಲಿ ಎಂದು ಆಗ್ರಹಿಸಿದರು.

ಆನ್‌ಲೈನ್‌ನಲ್ಲಿ ಇಂಡೆಂಟ್ ಹಾಕಲು ರಾತ್ರಿ 9ರಿಂದ ಬೆಳಗ್ಗೆ 9ರವರೆಗೆ ಕಾಲಾವಕಾಶ ನೀಡಲಾಗಿದೆ. ಇದು ಮತ್ತಷ್ಟು ಸಮಸ್ಯೆ ಉಂಟು ಮಾಡಿದೆ. ಸುಮಾರು ರಾತ್ರಿ 11.30ರವರೆಗೆ ನಾವು ಮಳಿಗೆಯಲ್ಲೇ ವಹಿವಾಟು ನಡೆಸಬೇಕು. ಹೀಗಾಗಿ ರಾತ್ರಿ 9ರಿಂದ ಕಾಲಾವಕಾಶ ಕಲ್ಪಿಸಿರುವುದು ನಮಗೆ ಅನುಕೂಲಕರ ಸಮಯವಲ್ಲ. ಹಾಗಾಗಿ ಆನ್‌ಲೈನ್ ತಂತ್ರಾಂಶ ಸಮರ್ಪಕಗೊಳಿಸಿ, ಇದಕ್ಕೆ ಮುಂಜಾನೆ ವೇಳೆ ಅವಕಾಶ ನೀಡಬೇಕು. ಇದು ನಮ್ಮ ಎರಡನೇ ಬೇಡಿಕೆ. ಈ ಹಿಂದಿನ ಹಳೇ ವ್ಯವಸ್ಥೆಯಲ್ಲಿ ಮಧ್ಯಾಹ್ನ 1.30ಕ್ಕೆ ಹಣ ಪಾವತಿಸಿದರೆ, ಸಂಜೆ 4 ಗಂಟೆಗೆಲ್ಲಾ ಮದ್ಯ ದೊರೆಯುತ್ತಿತ್ತು. ಆದರೆ ಈಗ ಅಂತಹ ಪರಿಸ್ಥಿತಿ ಇಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಹಿಂದಿನ ವ್ಯವಸ್ಥೆ ಮರು ಜಾರಿಗೊಳಿಸಬೇಕು ಎಂಬುದು ನಮ್ಮ ಪ್ರಮುಖ ಬೇಡಿಕೆ. ಹಾಗೆಂದು ಸರ್ಕಾರದ ಹೊಸ ವ್ಯವಸ್ಥೆ ವಿರೋಧಿಸುತ್ತಿಲ್ಲ. ಹೊಂದಿಕೊಳ್ಳಲು ಕಾಲಾವಕಾಶ ನೀಡಬೇಕೆಂಬುದು ನಮ್ಮ ಆಗ್ರಹ. ಅಬಕಾರಿ ಸಚಿವರು, ಅಬಕಾರಿ ಇಲಾಖೆ ಆಯುಕ್ತರು ಹಾಗೂ ಕೆಎಸ್‌ಬಿಸಿಎಲ್ ವ್ಯವಸ್ಥಾಪಕ ನಿರ್ದೇಶಕರು ನಮ್ಮ ಫೆಡರೇಷನ್ ಜೊತೆಗೆ ಶೀಘ್ರವೇ ಸಭೆ ನಡೆಸಿ, ಎಲ್ಲಾ ಸಮಸ್ಯೆ ಬಗೆಹರಿಸುವ ಭರವಸೆ ನೀಡಿದ್ದಾರೆ. ಬಹುಶಃ ಮೇ 16ರ ಸೋಮವಾರ ಈ ಸಭೆ ನಡೆಸುವ ಸಾಧ್ಯತೆ ಇದೆ. ಆದಾಗ್ಯೂ ಸಮಸ್ಯೆ ಬಗೆಹರಿಸದಿದ್ದರೆ, ಮೇ 19ರ ನಂತರ ಇಡೀ ರಾಜ್ಯಾದ್ಯಂತ ಒಂದು ದಿನದ ಮಟ್ಟಿಗೆ ವಹಿವಾಟು ಸ್ಥಗಿತಗೊಳಿಸಿ, ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ಬಳಿಕ ಕೂರ್ಗಳ್ಳಿಯಲ್ಲಿರುವ ಕೆಎಸ್‌ಬಿಸಿಎಲ್ ಡಿಪೋ ಎದುರು ಸಹ ಸಾಂಕೇತಿಕ ಪ್ರತಿಭಟನೆ ನಡೆಸಿ, ಇಲ್ಲಿನ ಡಿಪೋ ವ್ಯವಸ್ಥಾಪಕರಿಗೆ ಮನವಿ ಸಲ್ಲಿಸಲಾಯಿತು. ಸಂಘದ ಪ್ರಧಾನ ಕಾರ್ಯದರ್ಶಿ ಆರ್.ಲಕ್ಷ್ಮಣ್, ಉಪಾಧ್ಯಕ್ಷ ಕೆ.ಪಿ.ಪರಮೇಶ್, ಕಾರ್ಯದರ್ಶಿ ಕೆ.ಎಸ್.ಮುರಳಿ, ಸಂಘಟನಾ ಕಾರ್ಯದರ್ಶಿ ಸಿ.ರಾಮಕೃಷ್ಣ ಸೇರಿದಂತೆ ಮದ್ಯ ವರ್ತಕರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.



ಮೈಸೂರಿನ ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿರುವ ಕೆಎಸ್‌ಬಿಸಿಎಲ್ ಡಿಪೋ ಎದುರು ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಮದ್ಯ ವರ್ತಕರ ಸಂಘದ ವತಿಯಿಂದ ಗುರುವಾರ ಪ್ರತಿಭಟನೆ ನಡೆಸಿ, ಡಿಪೋ ವ್ಯವಸ್ಥಾಪಕರಿಗೆ ಮನವಿ ಸಲ್ಲಿಸಲಾಯಿತು.

ಇಂಡೆಂಟ್ ಸಲ್ಲಿಕೆಗೆ ಬೆಳಗ್ಗೆ ಅವಕಾಶ ನೀಡಲಿ...

ವೆಬ್ ಇಂಡೆಂಟಿಂಗ್ ಬಗ್ಗೆ ನಮ್ಮ ಅಭ್ಯಂತರ ಇಲ್ಲ. ಆದರೆ, ಅದು ಸಮರ್ಪಕವಾಗಿ ಕೆಲಸ ಮಾಡುವಂತೆ ಆಗಬೇಕು. ಜೊತೆಗೆ ಮದ್ಯ ಖರೀದಿಗೆ ಇಂಡೆಂಟ್ ಹಾಕಲು ಈಗ ರಾತ್ರಿ 9ರಿಂದ ಬೆಳಗ್ಗೆ 9ರವರೆಗೆ ಸಮಯ ನಿಗದಿ ಮಾಡಿದ್ದು, ಇದನ್ನು ಬದಲಾಯಿಸಿ, ಬೆಳಗ್ಗೆ 9ರಿಂದ ಸಂಜೆ 6ರವರೆಗೆ ಸಮಯ ನಿಗದಿ ಮಾಡಬೇಕು.

-**ಆರ್.ಲಕ್ಷ್ಮಣ್**, ಟ್ರೂ ಸ್ಪಿರಿಟ್ಸ್‌ನ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಮದ್ಯ ವರ್ತಕರ ಸಂಘದ ಪ್ರಧಾನ ಕಾರ್ಯದರ್ಶಿಗಳು.

ಗ್ರ್ಯಾಚ್ಯುಟಿ ಹಣಕ್ಕಾಗಿ ಕಾರ್ಮಿಕರ ಪ್ರತಿಭಟನೆ



ಮೈಸೂರು,ಮೇ 12(ಪಿಎಂ)- ಬಾಕಿ ಉಪಧನ (ಗ್ರ್ಯಾಚ್ಯುಟಿ) ಶೀಘ್ರ ಕೊಡಿಸಲು ಸೂಕ್ತ ಕ್ರಮ ವಹಿಸುವಂತೆ ಕಾರ್ಮಿಕ ಇಲಾಖೆಯನ್ನು ಒತ್ತಾಯಿಸಿ ನಂಜನಗೂಡು ತಾಂಡ್ಯ ಕೈಗಾರಿಕಾ ಪ್ರದೇಶದ ಕ್ರಿಹಾನ್ ಟೆಕ್ಸ್‌ಕೆಮ್ ಪ್ರೈ.ಲಿ. ಕಂಪನಿಯ (ಕೆಟಿಪಿಎಲ್) ಕಾರ್ಖಾನೆ ಕಾರ್ಮಿಕರು ಗುರುವಾರ ಪ್ರತಿಭಟನೆ ನಡೆಸಿದರು.

ಮೈಸೂರಿನ ಕುವೆಂಪುನಗರದಲ್ಲಿರುವ ಇಲಾಖೆಯ ಉಪ ಕಾರ್ಮಿಕ ಆಯುಕ್ತರ ಕಚೇರಿ ಎದುರು ತಮ್ಮ ಕೆಟಿಪಿಎಲ್ ಯುನೈಟೆಡ್ ಎಂಪ್ಲಾಯೀಸ್ ಯೂನಿಯನ್ ಸಂಘಟನೆ ನೇತೃತ್ವದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ರೀಡ್ ಅಂಡ್ ಟೇಲರ್ ಮುಚ್ಚಿದ್ದು, ಅದರ ಬ್ರ್ಯಾಂಡ್‌ನಡಿ ಕೆಟಿಪಿಎಲ್ ಕಂಪನಿ ನಡೆಯುತ್ತಿದೆ. ಈ ಕಂಪನಿ ಆರಂಭಿಸುವಾಗ ಹಳೇ ಕಂಪನಿ ಕಾರ್ಮಿಕರಾದ ನಮ್ಮನ್ನೇ ನೇಮಕ ಮಾಡಿಕೊಳ್ಳಲಾಗಿದೆ. ಹಳೇ ಕಂಪನಿ ನಮಗೆ ನೀಡಬೇಕಿದ್ದ ಗ್ರ್ಯಾಚ್ಯುಟಿ ಹಣವನ್ನು ಹೊಸ ಕಂಪನಿ ನೀಡಲು ಮೊದಲು ಸಮ್ಮತಿಸಿ, ಇದೀಗ ನಿರಾಕರಿಸುತ್ತಿದೆ ಎಂದು ಆರೋಪಿಸಿದರು.

ಗ್ರ್ಯಾಚ್ಯುಟಿ ಹಣ ಪಡೆಯಲು 450ಕ್ಕೂ ಹೆಚ್ಚಿನ ಅರ್ಜಿಗಳನ್ನು 'ಉಪಧನ ಪಾವತಿ ಕಾಯ್ದೆ 1972'ರ ಅಡಿ ನಿಯಂತ್ರಣ ಪ್ರಾಧಿಕಾರ ಸೇರಿದಂತೆ ಸಂಬಂಧಿಸಿದವರಿಗೆ ಸಲ್ಲಿಸಿದ್ದೇವೆ. ಇದೇ ಮೇ 5ರಂದು ಅಪರ ಕಾರ್ಮಿಕ ಆಯುಕ್ತ ಮಂಜುನಾಥ್ ಅವರು ಕಂಪನಿಗೆ ಭೇಟಿ ನೀಡಿದ್ದ ವೇಳೆ ಕಾರ್ಮಿಕರ ಸಮಸ್ಯೆಗಳನ್ನು ಆಲಿಸಿ, ಕೂಡಲೇ ಉಪಧನ ಪಾವತಿಸುವಂತೆ ಆಡಳಿತ ವರ್ಗಕ್ಕೆ ಸೂಚನೆ ನೀಡಿದ್ದರು. ಆದರೆ ಈವರೆಗೆ ಯಾವುದೇ ಪ್ರಯೋಜನವಾಗಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬೆಲೆ ಏರಿಕೆಯಿಂದ ನಮ್ಮ ಕುಟುಂಬಗಳು ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿವೆ. ಮಕ್ಕಳ ಶಾಲಾ-ಕಾಲೇಜು ಶುಲ್ಕ ಪಾವತಿಸಲು ತುರ್ತಾಗಿ ಹಣದ ಅವಶ್ಯಕತೆ ಇರುವ ಹಿನ್ನೆಲೆಯಲ್ಲಿ ಆಡಳಿತ ವರ್ಗದೊಂದಿಗೆ ಮಾತುಕತೆ ನಡೆಸಿ, ಉಪಧನ ನೀಡಲು ನಿರ್ದೇಶನ ನೀಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನಾಕಾರರಿಂದ ಮನವಿ ಸ್ವೀಕರಿಸಿದ ಉಪ ಕಾರ್ಮಿಕ ಆಯುಕ್ತ ಗುರುಪ್ರಸಾದ್ ಮಾತನಾಡಿ, ತಮ್ಮ ಬಾಕಿ ಗ್ರ್ಯಾಚ್ಯುಟಿ ಪ್ರಕರಣ ಇತ್ಯರ್ಥಪಡಿಸಲು ಇಲಾಖೆಯಿಂದ ಮಹದೇವಸ್ವಾಮಿ ಎಂಬ ಅಧಿಕಾರಿ ನೇಮಿಸಲಾಗಿದೆ ಎಂದು ತಿಳಿಸಿದರು. ಬಳಿಕ ಪ್ರತಿಭಟನೆ ಅಂತ್ಯಗೊಳಿಸಲಾಯಿತು. ಸಂಘಟನೆಯ ಪ್ರಧಾನ ಕಾರ್ಯದರ್ಶಿ ನಾಗೇಶ್‌ಮೂರ್ತಿ, ಪದಾಧಿಕಾರಿಗಳಾದ ಜೇಸುದಾಸ್, ನಾಗೇಗೌಡ, ಮಣಿಕಂಠ, ರವಿ, ಮಹದೇವ್ ಸೇರಿದಂತೆ ಕಾರ್ಮಿಕರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ವಿಶ್ವ ಶುಶ್ರೂಷಕರ ದಿನ; ಮೈಸೂರಲ್ಲಿ ಮ್ಯಾರಥಾನ್

ಸಮಾಜದ ಆರೋಗ್ಯ ಕಾಪಾಡುವಲ್ಲಿ ಶುಶ್ರೂಷಕ ಸಮುದಾಯದ ಪಾತ್ರ ಮಹತ್ತದ್ದು ; ಮೈಸೂರು ಎಸ್‌ಪಿ ಆರ್.ಚೇತನ್



ಮೈಸೂರು,ಮೇ 12(ಪಿಎಂ)- ಜಗತ್ತಿಗೆ ಶುಶ್ರೂಷಕ ಸೇವೆಯ ಮಹತ್ವ ಸಾರಿದ ಫ್ಲಾರೆನ್ಸ್ ನೈಟಿಂಗೇಲ್ ಅವರ ಜನ್ಮದಿನವಾದ 'ಮೇ 12' ಅನ್ನು ಪ್ರತಿವರ್ಷ ವಿಶ್ವ ಶುಶ್ರೂಷಕರ ದಿನವಾಗಿ ಆಚರಿಸಲಾಗುತ್ತದೆ. ಈ ದಿನದ ಅಂಗವಾಗಿ ಗುರುವಾರ ನರ್ಸಿಂಗ್ ವಿದ್ಯಾರ್ಥಿಗಳು ಹಾಗೂ ಬೋಧಕರು ನೂರಾರು ಸಂಖ್ಯೆಯಲ್ಲಿ ನಗರದಲ್ಲಿ ಮ್ಯಾರಥಾನ್ ನಡೆಸಿದರು.

ಕೋವಿಡ್ ತೀವ್ರವಾಗಿದ್ದ ಸಂದರ್ಭದಲ್ಲಿ ಜೀವದ ಹಂಗು ತೊರೆದು ಸೋಂಕಿತರ ಆರೈಕೆಗಾಗಿ ಸೇವೆ ಸಲ್ಲಿಸಿದ ಶುಶ್ರೂಷಕ ಸಮುದಾಯಕ್ಕೆ ಗೌರವ ಸಲ್ಲಿಸಲು ಹಮ್ಮಿಕೊಂಡಿದ್ದ ಈ ಮ್ಯಾರಥಾನ್‌ನಲ್ಲಿ ಅದರ ಜೊತೆಗೆ ಫ್ಲಾರೆನ್ಸ್ ನೈಟಿಂಗೇಲ್ ಅವರನ್ನೂ ಸ್ಮರಿಸಲಾಯಿತು.

ಜೆಎಸ್‌ಎಸ್ ಆಸ್ಪತ್ರೆ, ಜೆಎಸ್‌ಎಸ್ ನರ್ಸಿಂಗ್ ಕಾಲೇಜು ಹಾಗೂ ಜೆಎಸ್‌ಎಸ್ ಸ್ಕೂಲ್ ಆಫ್ ನರ್ಸಿಂಗ್ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಈ ಮ್ಯಾರಥಾನ್‌ಗೆ ಮೈಸೂರು ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಆವರಣದಲ್ಲಿ ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಚೇತನ್ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಸಮಾಜದ ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ ಶುಶ್ರೂಷಕ ಸಮುದಾಯ ಶ್ರಮಿಸುತ್ತಿದೆ. ಹಾಗಾಗಿ ಅತ್ಯಂತ ಪ್ರಾಮುಖ್ಯತೆ ಹೊಂದಿದ್ದ ವೃತ್ತಿಯೂ ಇದಾಗಿದೆ. ಆಸ್ಪತ್ರೆಗಳಲ್ಲಿ ಮೂಲಸೌಲಭ್ಯ, ವೈದ್ಯಕೀಯ ಸಲಕರಣೆ ಹಾಗೂ ವೈದ್ಯರು ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ಶುಶ್ರೂಷಕ ವರ್ಗ ಎಂದು ಹೇಳಿದರು.

ಪ್ರತಿಯೊಬ್ಬರ ಆರೋಗ್ಯ ದೃಷ್ಟಿಯಲ್ಲಿ ಮ್ಯಾರಥಾನ್ ಸೇರಿದಂತೆ ವ್ಯಾಯಾಮ ಅಭ್ಯಾಸ ಅಗತ್ಯ. ನಿಮ್ಮ ಆರೋಗ್ಯಕ್ಕಾಗಿ ಮ್ಯಾರಥಾನ್ ಅಥವಾ ಯಾವುದೇ ವ್ಯಾಯಾಮದ ಅಭ್ಯಾಸ ರೂಢಿಸಿಕೊಳ್ಳಿ, ನಿಮ್ಮ ಆರೋಗ್ಯದಿಂದ ಮಾತ್ರವೇ ಸಮಾಜದ ಆರೋಗ್ಯ ಕಾಪಾಡಲು ಸಾಧ್ಯ ಎಂದು ತಿಳಿಸಿದರು.

ದೊಡ್ಡಗಡಿಯಾರ ವೃತ್ತ ಗಾಂಧಿಚೌಕ, ಚಿಕ್ಕಗಡಿಯಾರ, ಹಳೇ ಸಂತೆಪೇಟೆ, ಬೆಂಗಳೂರು-ನೀಲಗಿರಿ ರಸ್ತೆ ಸೇರಿದಂತೆ ವಿವಿಧ ಮಾರ್ಗಗಳಲ್ಲಿ ಸಂಚರಿಸಿದ ಮ್ಯಾರಥಾನ್, ಅಂತಿಮವಾಗಿ ಮತ್ತೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ ಆವರಣದಲ್ಲಿ ಕೊನೆಗೊಂಡಿತು.

ಜೆಎಸ್‌ಎಸ್ ಮಹಾವಿದ್ಯಾಪೀಠದ ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್.ಮಹೇಶ್, ಜೆಎಸ್‌ಎಸ್ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲರಾದ ಅಶ್ವತಿದೇವಿ, ಜೆಎಸ್‌ಎಸ್ ಸ್ಕೂಲ್ ಆಫ್ ನರ್ಸಿಂಗ್‌ನ ಪ್ರಾಂಶುಪಾಲರಾದ ರೇಣುಕಾದೇವಿ, ಜೆಎಸ್‌ಎಸ್ ಆಸ್ಪತ್ರೆಯ ನರ್ಸಿಂಗ್ ಮುಖ್ಯಸ್ಥೆ ಜಾನೆಟ್, ಉಪನ್ಯಾಸಕ ಸುನೀಲ್‌ಕುಮಾರ್ ಮತ್ತಿತರರು ಹಾಜರಿದ್ದರು.

ನಾಳೆಯಿಂದ ಷಟಲ್ ಬ್ಯಾಡ್ಮಿಂಟನ್ ಪಂದ್ಯಾವಳಿ



ಮೈಸೂರು, ಮೇ 12- ಮೈಸೂರಿನ 46ನೇ ವಾರ್ಡಿನ ನಿವಾಸಿಗಳಿಗಾಗಿ ರಾಮಕೃಷ್ಣನಗರ ಸಾಂಸ್ಕೃತಿಕ ಮತ್ತು ಕ್ರೀಡಾ ಸಂಸ್ಥೆಯ ವತಿಯಿಂದ ಮೇ 14 ಮತ್ತು 15 ರಂದು ಕಾರ್ಪೊರೇಟರ್ ಕಪ್ ಷಟಲ್ ಬ್ಯಾಡ್ಮಿಂಟನ್ ಟೂರ್ನಮೆಂಟ್ ಅನ್ನು ರಾಮಕೃಷ್ಣನಗರ 'ಐ' ಬ್ಲಾಕ್‌ನಲ್ಲಿರುವ ನಂದನ ಪಾರ್ಕ್ (ಗಣಪತಿ ದೇವಸ್ಥಾನದ ಬಳಿ)ನಲ್ಲಿ ಏರ್ಪಡಿಸಲಾಗಿದೆ.

ಮೆನ್ಸ್ ಡಬಲ್ಸ್‌ನಲ್ಲಿ 40 ವರ್ಷ ಒಳಪಟ್ಟವರು ಮತ್ತು 40 ವರ್ಷ ಮೇಲ್ಪಟ್ಟವರಿಗೆ ಹಾಗೂ ಮಹಿಳೆಯವರ ಡಬಲ್ಸ್ ವಿಭಾಗದಲ್ಲಿ ಪಂದ್ಯಗಳನ್ನು ಆಡಿಸಲಾಗುವುದು. ಪ್ರತಿ ವಿಭಾಗದಲ್ಲೂ ಮೊದಲನೇ ಬಹುಮಾನ 7500 ರೂ., ದ್ವಿತೀಯ ಬಹುಮಾನ 5000 ರೂ. ಮತ್ತು ತೃತೀಯ ಬಹುಮಾನ 2500 ರೂ.ಗಳನ್ನು ನೀಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಮೊ. 87620 81023, 9880323982 ಮೂಲಕ ಸಂಪರ್ಕಿಸಬಹುದಾಗಿದೆ ಎಂದು ಬಿಜೆಪಿ ಮುಖಂಡ ಕಿರಣ್‌ಕುಮಾರ್ ತಿಳಿಸಿದ್ದಾರೆ.

ಕಾರ್ಯಕ್ರಮದಲ್ಲಿ ಮುಖಂಡರುಗಳು, ಕ್ರೀಡಾಪಟುಗಳು, ಕಾರ್ಪೊರೇಟರ್‌ಗಳು ಮತ್ತು ವಾರ್ಡಿನ ಮುಖಂಡರುಗಳು ಪಾಲ್ಗೊಳ್ಳುವರು. ಈ ಪಂದ್ಯಾವಳಿಯಲ್ಲಿ 46ನೇ ವಾರ್ಡಿನ ನಿವಾಸಿಗಳು ಮಾತ್ರ ಭಾಗವಹಿಸಬಹುದಾಗಿದೆ.

ದಸರಾ ವಸ್ತುಪ್ರದರ್ಶನದಲ್ಲಿ ಪ್ರಾಣಿ-ಪಕ್ಷಿಗಳ ಅಬ್ಬರ!

'ದಿ ಮಡಗಾಸ್ಕರ್ ಆರ್ಟ್ ಸ್ಟುಡಿಯೋ'ದಲ್ಲಿ ಪುಟಾಣಿಗಳ ಫೋಟೋ ಸೆಷನ್...



ಮೈಸೂರು, ಮೇ 12(ಎಂಕೆ)- ಕುಣಿದು ನಲಿಯುತ್ತಿರುವ ಪ್ರಾಣಿ-ಪಕ್ಷಿಗಳು, ಅಬ್ಬರಿಸುವ ಡೈನೋಸಾರ್, ಗೀಳಿಡುವ ಆನೆಗಳು, ಗರ್ಜಿಸುವ ಹುಲಿ-ಸಿಂಹ-ಚಿರತೆಗಳ ಹಿಂಡು ಮೈಸೂರಿಗೆ ಬಂದಿವೆ....!

ಮೈಸೂರು ದಸರಾ ವಸ್ತುಪ್ರದರ್ಶನ ಮೈದಾನದಲ್ಲಿ ಆಯೋಜಿಸಿರುವ 'ಬೇಸಿಗೆ ಮೇಳ'ದಲ್ಲಿನ 'ದಿ ಮಡಗಾಸ್ಕರ್ ಆರ್ಟ್ ಸ್ಟುಡಿಯೋ'ದಲ್ಲಿ ಜಿರಾಫೆಯ ಉದ್ದನೆಯ ಕತ್ತನ್ನು ಹಿಡಿದು ಕೋತಿಗಳು ನೇತಾಡುತ್ತಿದ್ದರೆ, ಸಿಂಹವೊಂದು ಗರ್ಜಿಸುತ್ತಾ ನಿಂತಿದೆ. ಹಿಮದಲ್ಲಿ ಪೆಂಗ್ವಿನ್‌ಗಳನ್ನು ಕುಣಿಯುತ್ತಿದ್ದರೆ, ಝೀಬ್ರಾ, ಮೊಲ, ಮೊಸಳೆ ಕಣ್ಣರಳಿಸಿ ನೋಡುತ್ತಾ ಅತ್ತಿತ್ತಾ ಓಡಾಡುತ್ತಿವೆ.




ಕಾಡುಪ್ರಾಣಿ-ಪಕ್ಷಿಗಳ ಮಾದರಿಯ ಆಟಿಕೆಗಳನ್ನೊಳಗೊಂಡ 'ದಿ ಮಡಗಾಸ್ಕರ್ ಆರ್ಟ್ ಸ್ಟುಡಿಯೋ' ನೋಡಲು ನಯನ ಮನೋಹರವಾಗಿದ್ದು, ನೋಡುಗರ ನಡುವೆಯೇ ಪ್ರಾಣಿಗಳ ನೃತ್ಯ ಪುಟಾಣಿಗಳ ಮನಸ್ಸಿಗೆ ಮುದ ನೀಡುವಂತಿದೆ. ಜುರಾಸಿಕ್ ಪಾರ್ಕ್ ಸಿನಿಮಾದಲ್ಲಿರುವಂತೆಯೇ ದೈತ್ಯಾಕಾರದ ಡೈನೋಸಾರ್‌ಗಳು ಸಣ್ಣ ಪ್ರಾಣಿಗಳನ್ನು ಗಬಗಬನೆ ತಿಂದು ಅಬ್ಬರಿಸುವುದು ಮಕ್ಕಳಲ್ಲಿ ರೋಮಾಂಚನ ಉಂಟುಮಾಡುತ್ತದೆ.

ಇದೇ ಮೊದಲು: ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ ಮೊದಲ ಬಾರಿಗೆ 'ದಿ ಮಡಗಾಸ್ಕರ್ ಆರ್ಟ್ ಸ್ಟುಡಿಯೋ' ನಿರ್ಮಿಸಿದ್ದು, ಪುಟಾಣಿ ಮಕ್ಕಳು ತಮಗೆ ಪ್ರಿಯವಾದ ಪ್ರಾಣಿ-ಪಕ್ಷಿಗಳೊಂದಿಗಿನ ಆಟವಾಡಿದ ಅನುಭವ ಪಡೆಯಬಹುದಾಗಿದೆ. ಅಲ್ಲದೆ ಪ್ರಾಣಿಗಳು ನಿಂತಿರುವ ಭಂಗಿಯಲ್ಲಿ ನಿಂತು ಫೋಟೊ ಕ್ಲಿಕ್ಕಿಸಿಕೊಳ್ಳಬಹುದಾಗಿದೆ.

ಪುಟಾಣಿಗಳ ಕಲರವ: 45 ದಿನಗಳ 'ಬೇಸಿಗೆ ಮೇಳ'ದಲ್ಲಿ ಪುಟಾಣಿಗಳ ಕಲರವ ಹೆಚ್ಚಾಗುತ್ತಿದೆ. ಮಳೆಯ ನಡುವೆಯೂ ಸಂಜೆ ವೇಳೆ ಮೇಳಕ್ಕೆ ಭೇಟಿ ನೀಡುವವರ ಸಂಖ್ಯೆ ಹೆಚ್ಚಾಗುತ್ತಿದ್ದು, ಪೋಷಕರು ತಮ್ಮ ಮಕ್ಕಳೊಂದಿಗೆ ಬೆರೆತು ಮೋಜು, ಮಸ್ತಿ ಮಾಡುತ್ತಿದ್ದಾರೆ. ಮಕ್ಕಳನ್ನು ಪ್ರಾಣಿಗಳ ಮಾದರಿಯ ಬೊಂಬೆಗಳ ಎದುರು ನಿಲ್ಲಿಸಿ ಫೋಟೊ ಕ್ಲಿಕ್ಕಿಸಿಕೊಳ್ಳುತ್ತಿದ್ದಾರೆ. ಜೊತೆಗೆ ಜಾಯಿಂಟ್ ವೀಲ್ಸ್‌ಗಳಲ್ಲಿ ಆಟವಾಡಿ ಸಂಭ್ರಮಿಸುತ್ತಿದ್ದಾರೆ.

ಮಳೆ ನಿಂತರೆ ಚೆನ್ನಾಗಿರುತ್ತಿತ್ತು: 'ಬೇಸಿಗೆ ಮೇಳ' ಚೆನ್ನಾಗಿದ್ದು, ಮಳೆ ಇಲ್ಲದಿದ್ದರೆ ತುಂಬಾ ಸಮಯ ಮಕ್ಕಳೊಂದಿಗೆ ಆಟವಾಡಬಹುದಾಗಿತ್ತು. ಬೇಸಿಗೆ ರಜೆ ಇರುವುದರಿಂದ ಇಂತಹ ಮೇಳಗಳು ಎಲ್ಲರಿಗೂ ಇಷ್ಟವಾಗುತ್ತದೆ ಎಂದು ಮೈಸೂರಿನ ಎಸ್‌ಬಿಎಂ ಬಡಾವಣೆಯ ನಿವಾಸಿಗಳಾದ ರಶ್ಮಿ, ನಂದಾ 'ಮೈಸೂರು ಮಿತ್ರ'ನಲ್ಲಿ ಖುಷಿ ಹಂಚಿಕೊಂಡರು.



ಮಳೆ ಕಡಿಮೆಯಾದರೆ ನಿರೀಕ್ಷೆಗೂ ಮೀರಿ 'ಬೇಸಿಗೆ ಮೇಳ'ಕ್ಕೆ ಜನ ಬರುತ್ತಾರೆ. ಒಂದೇ ಜಾಗದಲ್ಲಿ ಬಗೆ ಬಗೆಯ ತಿಂಡಿ-ತಿನಿಸುಗಳನ್ನು ಸವಿಯುವುದರ ಜೊತೆಗೆ ಮಕ್ಕಳನ್ನು ಆಟವಾಡಿಸಲು 12ಕ್ಕೂ ಹೆಚ್ಚು ಬಗೆಯ ಜಾಯಿಂಟ್ ವೀಲ್ಸ್‌ಗಳಿವೆ. "ದಿ ಮಡಗಾಸ್ಕರ್ ಆರ್ಟ್ ಸ್ಟುಡಿಯೋ' ಎಲ್ಲರ ಆಕರ್ಷಣೆಯಾಗಿದೆ.

-**ವಿನೋದ್ ಕುಮಾರ್ ಸಬರ್‌ವಾಲ್**, ಫನ್‌ವರ್ಲ್ಡ್ ಅಂಡ್ ರೆಸಾರ್ಟ್ ಇಂಡಿಯಾ ಪ್ರೈ.ಲಿ ಮುಖ್ಯಸ್ಥ

ಕೇರಳದ ಕೊಲ್ಲಂನಲ್ಲಿ ತೀವ್ರಗೊಂಡ ಟೊಮೆಟೊ ಜ್ವರ

ಬಾವಲಿ ಚೆಕ್‌ಪೋಸ್ಟ್‌ನಲ್ಲಿ ಹೈ ಅಲರ್ಟ್

- ವಾಹನಗಳ ತಪಾಸಣೆ
- ಪ್ರಯಾಣಿಕರಿಗೆ ವೈದ್ಯಕೀಯ ಪರೀಕ್ಷೆ



ಸೋಂಕಿತ ಮಕ್ಕಳೊಂದಿಗೆ ಅಂತರ ಕಾಯ್ದುಕೊಳ್ಳುವ ಮೂಲಕ ಸೋಂಕು ಹರಡುವುದನ್ನು ತಡೆಯಬಹುದಾಗಿದೆ. ಸೋಂಕು ಬಹು ಬೇಗ ಹರಡುವುದರಿಂದ ಸೋಂಕಿತರನ್ನು ಪ್ರತ್ಯೇಕವಾಗಿರಿಸಿ ಚಿಕಿತ್ಸೆ ಕೊಡುವುದನ್ನು ಅನುಸರಿಸಲಾಗುತ್ತಿದೆ. ಜ್ವರದಿಂದಾಗುವ ಬಳಲಿಕೆಯ ಪರಿಣಾಮಗಳಿಂದ ಹೊರಬರಲು ರೋಗಿಗಳು ಅಗತ್ಯ ವಿಶ್ರಾಂತಿ ತೆಗೆದುಕೊಳ್ಳಬೇಕಾಗುತ್ತದೆ.

ಹೆಚ್.ಡಿ.ಕೋಟೆ, ಮೇ 12(ಮಂಜು)– ಕೇರಳದ ಕೊಲ್ಲಂ ಜಿಲ್ಲೆಯಲ್ಲಿ ಸುಮಾರು 80ಕ್ಕೂ ಹೆಚ್ಚು ಮಕ್ಕಳಲ್ಲಿ ಟೊಮೆಟೊ ಜ್ವರ ಕಾಣಿಸಿಕೊಂಡಿರುವ ಹಿನ್ನೆಲೆಯಲ್ಲಿ ಕರ್ನಾಟಕದ ಕೇರಳ ಗಡಿಭಾಗವಾದ ಬಾವಲಿ ಚೆಕ್ ಪೋಸ್ಟ್‌ನಲ್ಲಿ ಹೈ ಅಲರ್ಟ್ ಘೋಷಿಸಲಾಗಿದೆ.

ಐದು ವರ್ಷಕ್ಕೂ ಕಡಿಮೆ ವಯಸ್ಸಿನ ಮಕ್ಕಳಲ್ಲಿ ಈ ಜ್ವರ ಕಾಣಿಸಿಕೊಂಡಿದ್ದು, ಆತಂಕವನ್ನುಂಟು ಮಾಡಿದೆ. ಇದು ಒಬ್ಬರಿಂದ ಮತ್ತೊಬ್ಬರಿಗೆ ಹರಡುವ ಸಾಧ್ಯತೆ ಇರುವುದರಿಂದ ಕೇರಳದಿಂದ ಬರುವ ಸೋಂಕಿತರನ್ನು ಪರೀಕ್ಷಿಸಿ, ಚಿಕಿತ್ಸೆ ನೀಡಲು ತಾಲೂಕು ಆಡಳಿತ ಮುಂದಾಗಿದೆ.

ಮಕ್ಕಳ ಮೈಮೇಲೆ ಕೆಂಪು ಗುಳ್ಳೆ ಮತ್ತು ತೀವ್ರ ಜ್ವರದಿಂದ ಬಳಲುತ್ತಿರುವುದು ಇದರ ಪ್ರಮುಖ ಲಕ್ಷಣಗಳಾಗಿದ್ದು, ಈ ಕಾಯಿಲೆಯನ್ನು 'ಟೊಮೆಟೊ ಜ್ವರ' (tomato flu) ಎಂದು ಕರೆಯಲಾಗಿದೆ. ಈ ಹಿನ್ನೆಲೆಯಲ್ಲಿ ಹಿರಿಯ ಅಧಿಕಾರಿಗಳ ಆದೇಶದ ಮೇರೆಗೆ ಕೇರಳ ಗಡಿಭಾಗವಾದ ಬಾವಲಿ ಚೆಕ್‌ಪೋಸ್ಟ್‌ನಲ್ಲಿ ತಹಸೀಲ್ದಾರ್ ರತ್ನಾಂಬಿಕ, ತಾಲೂಕು ಆರೋಗ್ಯಾಧಿಕಾರಿ ಡಾ. ರವಿಕುಮಾರ್ ವೈದ್ಯರುಗಳ ತಂಡ ಭೇಟಿ ನೀಡಿ ಪರಿಶೀಲನೆ ನಡೆಸಿ, ಅಲ್ಲಿ ಕ್ಯಾಂಪ್ ನಿರ್ಮಿಸುವ ಕುರಿತು ನಿರ್ಧಾರ ಮಾಡಲಾಯಿತು. ಕೇರಳದಿಂದ ರಾಜ್ಯಕ್ಕೆ ಬರುವ ಎಲ್ಲಾ ವಾಹನಗಳನ್ನು ತಪಾಸಣೆ ನಡೆಸಿ, ಪ್ರಯಾಣಿಕರು ಮತ್ತು ಮಕ್ಕಳನ್ನು ವೈದ್ಯಕೀಯ ತಂಡ ಪರೀಕ್ಷೆಗೆ ಒಳಪಡಿಸಿ, ಈ ಕಾಯಿಲೆಯಿಂದ ಬಳಲುತ್ತಿರುವವರಿಗೆ ಸೂಕ್ತ ಚಿಕಿತ್ಸೆ ನೀಡಲಾಗುವುದು. ಈ ಜ್ವರ ಹೆಚ್ಚಿನ ಪ್ರಮಾಣದಲ್ಲಿ ಒಬ್ಬರಿಂದ ಮತ್ತೊಬ್ಬ ರಿಗೆ ಹರಡುವುದನ್ನು ತಡೆಯುವ ಸಲುವಾಗಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ತಾಲೂಕು ಆರೋಗ್ಯಾಧಿಕಾರಿ ಡಾ. ರವಿಕುಮಾರ್ ತಿಳಿಸಿದ್ದಾರೆ.

ಜ್ವರದ ಲಕ್ಷಣಗಳು: ಹಲವು ವರ್ಷಗಳಿಂದ ದೇಶದಾದ್ಯಂತ ಆಗಾಗ್ಗೆ ಬಾಧಿಸುತ್ತಿರುವ 'ಚಿಕೂನ್ ಗುನ್ಯಾ' ರೀತಿಯ ಕೆಲವು ಲಕ್ಷಣಗಳು ಟೊಮೆಟೊ ಜ್ವರದಲ್ಲೂ ಕಾಣಿಸಿಕೊಂಡಿದೆ. ತೀವ್ರ ಜ್ವರ, ಇಡೀ ದೇಹದಲ್ಲಿ ನೋವು, ಕೀಲುಗಳಲ್ಲಿ ಊತ, ಅತಿಯಾದ ಆಯಾಸದಂತಹ ಲಕ್ಷಣಗಳನ್ನು ಹೊಂದಿದೆ.

ಜೊತೆಗೆ ಮಕ್ಕಳ ಚರ್ಮದ ಮೇಲೆ ಗುಳ್ಳೆಗಳು ಎದ್ದಿದ್ದು, ಕಡಿತ ಬರುತ್ತದೆ. ಇದರೊಂದಿಗೆ ಕೆಮ್ಮು, ನೆಗಡಿ, ಹೊಟ್ಟೆ ನೋವು, ವಾಂತಿ ಅಥವಾ ಬೇಧಿ, ಹೊಟ್ಟೆ ತೊಳಸುವಿಕೆ, ಕೈಗಳು, ಮಂಡಿಗಳಲ್ಲಿ ಬಣ್ಣ ಬದಲಾವಣೆ ಉಂಟಾಗುವ ಲಕ್ಷಣಗಳು ಕಾಣಿಸಿಕೊಳ್ಳುತ್ತಿದೆ.

ಈ ಟೊಮೆಟೊ ಜ್ವರಕ್ಕೆ ಕಾರಣವಾಗಿರುವ ಅಂಶಗಳ ಬಗ್ಗೆ ಇನ್ನಷ್ಟೇ ತಿಳಿಯಬೇಕಿದೆ. ಆರೋಗ್ಯ ಅಧಿಕಾರಿಗಳು ಈ ಸೋಂಕಿನ ಕುರಿತು ಅಧ್ಯಯನ ನಡೆಸುತ್ತಿದ್ದಾರೆ. ಕೇರಳದ ಕೊಲ್ಲಂ ಸೇರಿದಂತೆ ಹಲವು ಭಾಗಗಳಲ್ಲಿ ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಲ್ಲಿ ಈ ಸೋಂಕು ಕಾಣಿಸಿಕೊಂಡಿರುವುದು ವರದಿಯಾಗಿದೆ.

ಸೋಂಕು ತಡೆಗಟ್ಟಲು ಶುಚಿತ್ವ ಮತ್ತು ಸ್ವಚ್ಛತೆ ಕಾಯ್ದುಕೊಳ್ಳುವುದು ಬಹು ಮುಖ್ಯವಾಗಿರುತ್ತದೆ. ದೇಹಕ್ಕೆ ಅಗತ್ಯ ನೀರಿನ ಅಂಶ ಸೇರುವಂತೆ ನೋಡಿಕೊಳ್ಳಲು ತಜ್ಞರು ಸಲಹೆ ನೀಡಿದ್ದಾರೆ. ಸೋಂಕಿನ ಯಾವುದೇ ಲಕ್ಷಣಗಳು ಕಂಡು ಬಂದ ಕೂಡಲೇ ಪಾಲಕರು ಸ್ಥಳೀಯ ವೈದ್ಯರನ್ನು ಸಂಪರ್ಕಿಸುವುದು ಒಳ್ಳೆಯದು. ಸೋಂಕಿಗೆ ಒಳಗಾಗಿರುವ ಮಕ್ಕಳಿಗೆ ತುರಿಕೆಯ ಲಕ್ಷಣಗಳು ಹಾಗೂ ಗುಳ್ಳೆಗಳು ಕಾಣಿಸಿಕೊಂಡರೆ, ಕೆರೆದುಕೊಳ್ಳುವುದನ್ನು ತಪ್ಪಿಸಬೇಕಾಗುತ್ತದೆ. ಇಲ್ಲವಾದರೆ, ಇನ್ನಷ್ಟು ತುರಿಕೆ ಹೆಚ್ಚಾಗಿ ವಿಪರೀತಕ್ಕೆ ಹೋಗುವ ಸಾಧ್ಯತೆ ಇರುತ್ತದೆ.

ವರದಿಗಳ ಪ್ರಕಾರ, ಈ ಜ್ವರಕ್ಕೆ ನಿರ್ದಿಷ್ಟವಾದ ಔಷಧ ಇಲ್ಲ. ಸೂಕ್ತ ಆರೈಕೆ ಮತ್ತು ವಿಶ್ರಾಂತಿಯಿಂದ ರೋಗ ಗುಣಮುಖವಾಗುವುದು ಎಂದು ಡಾ. ರವಿಕುಮಾರ್ ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಪೊಲೀಸ್ ಇಲಾಖೆಯ ಸಬ್‌ಇನ್ಸ್‌ಪೆಕ್ಟರ್ ಭರತ್, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಟಿ. ರವಿರಾಜ್, ಅರಣ್ಯ ಇಲಾಖೆಯ ಚಿಕ್ಕಣ್ಣ, ಆರೋಗ್ಯ ಇಲಾಖೆ ಸಿಬ್ಬಂದಿ ವರ್ಗದವರಾದ ಸೌಮ್ಯ, ಆಶಾ ಕಾರ್ಯಕರ್ತೆ ಮಂಜುಳಾ ಇನ್ನಿತರರಿದ್ದರು.

ನೇತ್ರ, ದಂತ ತಪಾಸಣಾ ಶಿಬಿರ ಯಶಸ್ವಿ



ಹುಣಸೂರು, ಮೇ12(ಕೆಕೆ)– ಛತ್ರಪತಿ ಷಾಹು ಮಹಾರಾಜ್ ಅವರ ಸ್ಮರಣಾರ್ಥ ಸತ್ಯ ಎಂ.ಎ.ಎಸ್ ಫೌಂಡೇಶನ್ ಮತ್ತು ಛತ್ರಪತಿ ಶಿವಾಜಿ ಮರಾಠ ಕ್ಷೇಮಾಭಿವೃದ್ಧಿ ಸಮಿತಿ ವತಿಯಿಂದ ಉಚಿತ ನೇತ್ರ ಹಾಗೂ ದಂತ ತಪಾಸಣಾ ಶಿಬಿರ ಆಯೋಜಿಸಲಾಗಿತ್ತು.

ಸುಮಾರು 150 ಮಂದಿ ನೇತ್ರ ತಪಾಸಣೆ ಮಾಡಿಸಿಕೊಂಡರು. 20 ಮಂದಿಯನ್ನು ಕಣ್ಣಿನ ಶಸ್ತ್ರಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್. ಆಸ್ಪತ್ರೆಗೆ ಕಳುಹಿಸಲಾಯಿತು. ಸುಮಾರು 85 ಜನರು ದಂತ ತಪಾಸಣೆಗೆ ಒಳಗಾದರು. ಸುಮಾರು 25 ಜನರಿಗೆ ದಂತದ ಚಿಕಿತ್ಸೆ ನೀಡಿ ಉಚಿತವಾಗಿ ಔಷಧಿಗಳನ್ನು ವಿತರಿಸಲಾಯಿತು.

ನೇತ್ರ ತಜ್ಞ ಡಾ. ಬಿ.ಕೆ. ಶ್ರೀನಿವಾಸ್, ಡಾ.ದಿನೇಶ್ ಬಾಬು, ಡಾ. ಗೀತಾಂಜಲಿ, ಸಿಬ್ಬಂದಿ ಮೋಹನ್ ಕುಮಾರ್, ಗಿರಿಜಾ ಕೆ.ಎಸ್, ನಾಜೀರಾ ಬಾನು, ಶ್ರೀನಿವಾಸ ಸಿಂದೆ, ಮಾದೇವಿ. ಪಿ.ಎಸ್, ಇಂದಿರಾ ಜೆ.ಸಿ, ಅಂಬರೀಷ್ ಅರಸ್ ಎಂ.ಕೆ, ಅವಿನಾಶ್ ಎಂ.ಎಂ. , ದಂತ ತಜ್ಞರಾದ ಡಾ. ಅನುದರ್ಶ್, ಡಾ|| ಯಾಮಿನಿ, ನೇಹಾ ಎಸ್.ಎಂ., ಪಾರ್ವತಿ ಮುರಳಿ, ಅದ್ವೈತ್ ರತೀಶ್ ಕೆ ಅನನ್ಯ ಕೆ.ವೈ, ಅನಿತಾ ಆಗಸ್ಟೀನ್, ಅಂಜುನಾ ಕೆ, ಗಗನ್, ಗಣೇಶ್, ಗ್ರಾಮದ ಮುಖಂಡರಾದ ಸತ್ಯಪ್ಪ ಹೊನ್ನಪ್ಪರಾವ್ ಕಾಳಿಂಗೆ, ಮೆಂಕೋಬ ರಾವ್, ಮುಕುಂದ್ ರಾವ್, ಸತ್ಯವತಿ ಬಾಯಿ ಹಾಗೂ ಗ್ರಾಮಸ್ಥರು ಹಾಜರಿದ್ದರು.

ರಾಜ್ಯ ಬಿಜೆಪಿ ಸರ್ಕಾರಕ್ಕೆ ನೈತಿಕತೆ, ಬದ್ಧತೆ ಇಲ್ಲ

ಕೆಪಿಸಿಸಿ ಪರಿಶಿಷ್ಟರ ವಿಭಾಗದ ರಾಜ್ಯಾಧ್ಯಕ್ಷ ಧರ್ಮಸೇನಾ ವಾಗ್ದಾಳಿ



ತಿ.ನರಸೀಪುರ, ಮೇ 12(ಎಸ್‌ಕೆ)– ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರ ಆಡಳಿತ ನಡೆಸಲು ಸಂಪೂರ್ಣ ವಿಫಲವಾಗಿದ್ದು, ಸರ್ಕಾರಕ್ಕೆ ನೈತಿಕತೆ ಹಾಗೂ ಬದ್ಧತೆ ಇಲ್ಲದಂತಾಗಿದೆ, ಒಂದಲ್ಲ ಒಂದು ಹಗರಣಗಳು ಹೊರ ಬರ ತೊಡಗಿದೆ ಎಂದು ಕೆಪಿಸಿಸಿ ಪರಿಶಿಷ್ಟ ವಿಭಾಗದ ರಾಜ್ಯಾಧ್ಯಕ್ಷ ಆರ್. ಧರ್ಮಸೇನ ವಾಗ್ದಾಳಿ ನಡೆಸಿದ್ದಾರೆ.

ಪಟ್ಟಣದ ಅವರ ನಿವಾಸದಲ್ಲಿ ಮಾಜಿ ಸಚಿವ ಎನ್. ರಾಚಯ್ಯ ಅವರ ಜಯಂತಿ ಪ್ರಯುಕ್ತ ಏರ್ಪಡಿಸಲಾಗಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು ಬಿಜೆಪಿ ಸರ್ಕಾರ ಆಡಳಿತಕ್ಕೆ ಬಂದಾಗಿನಿಂದಲೂ ಭ್ರಷ್ಟಾಚಾರ, ಅಕ್ರಮ ನಿರಂತರವಾಗಿ ಹೊರಬರುತ್ತಿವೆ ಎಂದರು. ಉಪನ್ಯಾಸಕರ ನೇಮಕಾತಿಯಲ್ಲಿ ಅಕ್ರಮ ರಾಜ್ಯ ಸರ್ಕಾರದ ದುರಾಡಳಿತಕ್ಕೆ ಸಾಕ್ಷಿಯಾಗಿದೆ, ರಾಜ್ಯ ಸರ್ಕಾರದ ವರ್ಗಾವಣೆಯಲ್ಲಿ ದಂಧೆ ನಡೆಯುತ್ತಿದ್ದು, ಇದು ಬಿಜೆಪಿ ಶಾಸಕರಿಗೆ ವರದಾನವಾಗಿದೆ. ಆದ್ದರಿಂದ ಕಾಂಗ್ರೆಸ್ ಪಕ್ಷವನ್ನು ಮತ್ತಷ್ಟು ಬಲಿಷ್ಠ ಪಡಿಸಬೇಕಾಗಿದ್ದು, ರಾಜ್ಯದ ಜನತೆ ಮುಂಬರುವ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಬೇಕೆಂದರು. ಬಿಜೆಪಿ ಸರ್ಕಾರದಲ್ಲಿ ಪರಿಶಿಷ್ಟ ಜನಾಂಗಕ್ಕೆ ಸಾಕಷ್ಟು ಸೌಲತ್ತು ದೊರೆಯುತ್ತಿಲ್ಲ ಎಂದು ಆರೋಪಿಸಿದರು. ಕಾಂಗ್ರೆಸ್ ಪಕ್ಷದ ಪರಿಶಿಷ್ಟ ಘಟಕದ ಪದಾಧಿಕಾರಿಗಳು ಈಗಿನಿಂದಲೇ ಕಾರ್ಯಪ್ರವೃತ್ತರಾಗಿ ಪಕ್ಷ ಸಂಘಟನೆಯಲ್ಲಿ ತೋರಿಸಿಕೊಂಡು ಪಕ್ಷವನ್ನು ಬಲಿಷ್ಠಗೊಳಿಸುವ ಮೂಲಕ ಅಧಿಕಾರಕ್ಕೆ ತರುವ ನಿಟ್ಟಿನಲ್ಲಿ ಸಂಘಟನೆ ಮಾಡುವಂತೆ ಕರೆ ನೀಡಿದರು,

ಕಾಂಗ್ರೆಸ್ ವೈದ್ಯಕೀಯ ವಿಭಾಗದ ಜಿಲ್ಲಾಧ್ಯಕ್ಷ ಡಾ. ಪ್ರದೀಪ್ ಮಾತನಾಡಿ ಭಾರತ ದೇಶದ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಲೋಕಸಭೆಗೆ ಎನ್. ರಾಚಯ್ಯ ನವರು ಸ್ಪರ್ಧಿಸಿ ಗೆದ್ದು ಸಂಸದರಾಗಿ ಆಯ್ಕೆಯಾದ ದಲಿತ ಆಶಾಕಿರಣ ಎಂದರೆ ತಪ್ಪಾಗಲಾರದು ಎಂದರು.

ಡಾ. ಬಿಆರ್ ಅಂಬೇಡ್ಕರ್ ಅವರು ರಚಿಸಿದ ಸಂವಿಧಾನವನ್ನು ಅಧ್ಯಯನ ಮಾಡಿ ಹಾಗೂ ಅಂಬೇಡ್ಕರ್ ಅವರ ನಿಕಟ ಸಂಪರ್ಕ ಹೊಂದಿದ್ದರಿಂದ ದಲಿತರ ಏಳಿಗೆಗಾಗಿ ಸಮಾಜ ಕಲ್ಯಾಣ ಇಲಾಖೆ ಸಚಿವರಾಗಿ ದೀನದಲಿತರ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿ ಆ ವರ್ಗದ ಜನರ ಪ್ರೀತಿ ವಿಶ್ವಾಸವನ್ನು ಗಳಿಸಿ ಜನಪರ ಯೋಜನೆಗಳನ್ನು ಜಾರಿಗೆ ತಂದು ಅವರ ಸಮಸ್ಯೆಗಳಿಗೆ ಸದಾ ಸ್ಪಂದಿಸುತ್ತಿದ್ದರು ಎಂದರು

ಕಾರ್ಮಿಕ ವಿಭಾಗದ ಕಾರ್ಯದರ್ಶಿ ಜೆ ಶ್ರೀಕಾಂತ್, ಬಾಲರಾಜ್, ಮಲೆಯೂರು ಶಿವಣ್ಣ, ವಿಜಯ ಸ್ವಾಮಿ, ಪ್ರಮೋದ್, ಕಾಳಯ್ಯ, ಪ್ರಭಾಕರ್, ಎಡದೊರೆ ಮಹದೇವಸ್ವಾಮಿ, ಕಾಳೇಗೌಡ, ಚಂದ್ರು, ಬಸವರಾಜು, ಗರ್ಗೇಶ್ವರಿ ಹಾಳೇಗೌಡ, ನಂಜುಂಡ ಹಾಗೂ ಮಹಿಳಾ ಸಂಘದವರು ಉಪಸ್ಥಿತರಿದ್ದರು,



ಮೈಸೂರು ತಾಲೂಕು ಕಡಕೊಳ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದ ವತಿಯಿಂದ "ವಿಶ್ವ ಮಲೇರಿಯಾ ದಿನಾಚರಣೆ ಅಂಗವಾಗಿ ಏರ್ಪಡಿಸಲಾಗಿದ್ದ ಅರಿವು ಮೂಡಿಸುವ ಜಾಥಾಕ್ಕೆ ಮೈಸೂರು ತಾಲೂಕು ವೈದ್ಯಾಧಿಕಾರಿ ಡಾ.ರಾಜೇಶ್ವರಿ ಚಾಲನೆ ನೀಡಿದರು. ಈ ವೇಳೆ ನೋಡಲ್ ಅಧಿಕಾರಿ ಸಿರಾಜ್ ಅಹಮದ್, ವೈದ್ಯಾಧಿಕಾರಿ ಡಾ. ಅರುಣ್ ಕುಮಾರ್, ಕಡಕೊಳ ಪಪಂ ಮುಖ್ಯ ಅಧಿಕಾರಿ ವೆಂಕಟೇಶ, ಜಿಲ್ಲಾ ಉಪ ಆರೋಗ್ಯ ಅಧಿಕಾರಿ ಪ್ರಭಾವತಿ, ಆರೋಗ್ಯ ಇಲಾಖೆಯ ಸಿಬ್ಬಂದಿ ರಾಜೇಶ್, ಅಂಗನವಾಡಿ, ಆಶಾ ಕಾರ್ಯಕರ್ತೆಯರು ಇದ್ದರು.



ಪಿರಿಯಾಪಟ್ಟಣ ತಾಲೂಕು ಕಿತ್ತೂರು ಗ್ರಾಮದ ಕಾಂಗ್ರೆಸ್ ಮುಖಂಡ ಪ್ರಕಾಶ್ ಕಾಂಗ್ರೆಸ್ ತೊರೆದು ಜೆಡಿಎಸ್ ಮುಖಂಡ ಗಗನ್ ಹಾಗೂ ಮಾಜಿ ಜಿಪಂ ಸದಸ್ಯ ಕೆ ಎಸ್ ಮಂಜುನಾಥ್ ನೇತೃತ್ವದಲ್ಲಿ ಜೆಡಿಎಸ್ ಸೇರ್ಪಡೆಗೊಂಡರು.

ಶ್ರೀ ಪಟ್ಟಲದಮ್ಮನವರ ವಾರ್ಷಿಕೋತ್ಸವ



ಸರಗೂರು, ಮೇ 12 (ನಾಗೇಶ್)– ಇಲ್ಲಿನ ಪೌರಕಾರ್ಮಿಕರ ಕಾಲೋನಿಯಲ್ಲಿ ಶ್ರೀ ಪಟ್ಟಲದಮ್ಮನವರ ವಾರ್ಷಿಕೋತ್ಸವ ಆಚರಿಸಲಾಯಿತು. ಬೆಳಗಿನ ಜಾವ ಗಣಪತಿ ಹೋಮ ಪುಣ್ಯಾಹ, ಕಳಸ ಪ್ರತಿಷ್ಠಾಪನೆ, ನವಗ್ರಹ ಹೋಮ, ಪೂಜಾ ಕೈಂಕರ್ಯಗಳು ಜರುಗಿದವು.

ಮೆರವಣಿಗೆಯಲ್ಲಿ ಹೆಣ್ಣು ಮಕ್ಕಳು 101 ಕಳಸ ಹೊತ್ತು ಭಕ್ತಿ ಸಮರ್ಪಿಸಿದರು. ಪಟ್ಟಲದಮ್ಮನವರ ಹರಕೆ ಹೊತ್ತ ಭಕ್ತರು ಮುಡಿಸೇವೆ ಸಮರ್ಪಿಸಿದರು. ನಂತರ ತಾಯಿಗೆ ವಿಶೇಷ ಪೂಜೆ, ಮಹಾಮಂಗಳಾರತಿ ನೆರವೇರಿಸಿ, ಪ್ರಸಾದ ವಿನಿಯೋಗ ಮಾಡಲಾಯಿತು. ಪೌರಕಾರ್ಮಿಕರ ಯಜಮಾನರಾದ ಮಗಾಳಿ, ಎಸ್.ಆರ್,ರಾಜ, ಗುಡಿ ಯಜಮಾನರಾದ ಪಳನಿಸ್ವಾಮಿ, ವೆಂಕಟೇಶ್, ಮುಖಂಡರಾದ ಸೋಮು, ಶಿವಕುಮಾರ್, ಅರ್ಜನ, ಶಶಿಕುಮಾರ್, ಸುಬ್ರಹ್ಮಣ್ಯ, ಆರ್ಮಗ, ಚಿನ್ನಸ್ವಾಮಿ, ಹರೀಶ್, ವಿಜಯ್, ಮಂಜು, ಅಕ್ಷಯ, ಮಂಜುನಾಥ್, ಮಗಾಳಿ, ರಂಗನಾಥ್, ಬಣ್ಣಾರಿ, ಪರಮೇಶ್ ಇನ್ನಿತರರಿದ್ದರು.

ಹೊಸ ಅಗ್ರಹಾರ ಗ್ರಾಪಂ ಅಧ್ಯಕ್ಷೆ ಸುಕನ್ಯ ಬೆಟ್ಟೇಗೌಡ



ಭೇರ್ಯ, ಮೇ 12–ಹೊಸ ಅಗ್ರಹಾರ ಗ್ರಾಮ ಪಂಚಾಯಿತಿ ಅಧ್ಯಕ್ಷೆಯಾಗಿ ಮಂಡಿಗನಹಳ್ಳಿ ಗ್ರಾಮದ ಸುಕನ್ಯ ಬೆಟ್ಟೇಗೌಡ ಅವಿರೋಧವಾಗಿ ಆಯ್ಕೆಯಾದರು.

ಈ ಹಿಂದೆ ಅಧ್ಯಕ್ಷೆಯಾಗಿದ್ದ ಪುಷ್ಪ ಜಯರಾಂ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಸುಕನ್ಯಾ ಬೆಟ್ಟೇಗೌಡ ಒಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಅವರ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಪಶುವೈದ್ಯ ಇಲಾಖೆಯ ಸಹಾಯಕ ನಿರ್ದೇಶಕ ಡಾ.ನಾಗರಾಜು ಘೋಷಿಸಿದರು.

ನೂತನ ಅಧ್ಯಕ್ಷೆ ಸುಕನ್ಯಾ ಬೆಟ್ಟೇಗೌಡ ಮಾತನಾಡಿ, ಶಾಸಕ ಸಾ.ರಾ.ಮಹೇಶ್ ಅವರ ಸೂಚನೆ ಮೇರೆಗೆ ನನಗೆ ಅಧ್ಯಕ್ಷ ಸ್ಥಾನ ನೀಡಲು ಸರ್ವ ಸದಸ್ಯರು ಒಮ್ಮತದಿಂದ ನಿರ್ಧರಿಸಿ ನನ್ನನ್ನು ಆಯ್ಕೆ ಮಾಡಿದ್ದಾರೆ. ಎಲ್ಲರಿಗೂ ಕೃತಜ್ಞತೆ ಸಲ್ಲಿಸುವುದಾಗಿ ತಿಳಿಸಿದರು.

ನರೇಗಾ ಯೋಜನೆ ಮೂಲಕ ಪಂಚಾಯಿತಿ ವ್ಯಾಪ್ತಿಯ ಕೆರೆಕಟ್ಟೆಗಳ ಅಭಿವೃದ್ಧಿ ಪಡಿಸಲಾಗುತ್ತಿದ್ದು, ಮಂಡಿಗನಹಳ್ಳಿ, ಹರಂಬಳ್ಳಿ, ಬೋರೇಗೌಡನಕೊಪ್ಪಲು, ಹರಂಬಳ್ಳಿಕೊಪ್ಪಲು ಗ್ರಾಮಗಳ ಕೆರೆಕಟ್ಟೆ ಗಳನ್ನು ತುಂಬಿಸಲು ನಮ್ಮ ಶಾಸಕರು 20 ಕೋಟಿ ವೆಚ್ಚದಲ್ಲಿ ಏತ ನೀರಾವರಿ ಯೋಜನೆಗೆ ಚಾಲನೆ ನೀಡಿದ್ದಾರೆ ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ ನೂತನ ಅಧ್ಯಕ್ಷೆ ಸುಕನ್ಯಾಬೆಟ್ಟೇಗೌಡ ಅವರನ್ನು ಜೆಡಿಎಸ್ ಮುಖಂಡರು ಅಭಿನಂದಿಸಿದರು.

ಪಿಡಿಓ ಅಶ್ವಿನಿ.ವಿ.ಎ., ಗ್ರಾ.ಪಂ.ಮಾಜಿ ಅಧ್ಯಕ್ಷರಾದ ಪುಷ್ಪಜಯರಾಂ, ಬೇಬಿ ಮಹೇಶ್, ಮಾಜಿ ಉಪಾಧ್ಯಕ್ಷೆ ಪೂರ್ಣಿಮಾ, ಸದಸ್ಯರಾದ ಮಹದೇವಮ್ಮ, ಸೌಮ್ಯ ಶಿವಕುಮಾರ್, ಆಶಾಮಹೇಶ್, ಜಯಲಕ್ಷ್ಮೀ, ಮಂಜೇಗೌಡ, ಹೆಚ್.ಎಂ.ರಾಮಚಂದ್ರೇಗೌಡ, ಮಲ್ಲಿಕಾರ್ಜುನ, ಶೇಖರ್, ಮಂಡಿಗನಹಳ್ಳಿ ಗ್ರಾಮ ಮುಖಂಡರಾದ ದೇವರಜೇಗೌಡ, ಸಹಕಾರ ಸಂಘದ ನಿರ್ದೇಶಕ ಮಂಜೇಗೌಡ, ಸಹಕಾರ ಸಂಘದ ನಿವೃತ್ತ ಗುಮಾಸ್ತ ನರಸಿಂಹೇಗೌಡ, ಎಂ.ವಿ. ಯೋಗಿ, ಸಂತೋಷ್, ಸಂಜು, ಚಂದು ಸೇರಿದಂತೆ ಅನೇಕರು ಶುಭ ಕೋರಿದರು.

ಕೆ.ಪಿ. ರಮೇಶಗೆ ಪಿಹೆಚ್.ಡಿ



ಮೈಸೂರು: ಡಾ. ಎಸ್. ಸತೀಶ್ ಅವರ ಮಾರ್ಗದರ್ಶನದಲ್ಲಿ ಕೆ.ಪಿ. ರಮೇಶ ಅವರು ಸೂಕ್ಷ್ಮ ಜೀವಾಣು ಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಗೋಳೂರು ಗ್ರಾಮಕ್ಕೆ ಮೂಲ ಸೌಲಭ್ಯ ಒದಗಿಸಲು ಆದ್ಯತೆ

ಸಂಸದ ವಿ. ಶ್ರೀನಿವಾಸ ಪ್ರಸಾದ್ ಭರವಸೆ



ನಂಜನಗೂಡು ತಾಲೂಕಿನ ಗೋಳೂರು ಗ್ರಾಮದಲ್ಲಿ ಗುರುವಾರ ಸಂಸದ ವಿ.ಶ್ರೀನಿವಾಸ ಪ್ರಸಾದ್ ರಸ್ತೆ ಅಭಿವೃದ್ಧಿ ಕಾಮಗಾರಿಯ ಭೂಮಿ ಪೂಜೆ ನಡೆಸಿದರು. ಶಾಸಕ ಬಿ.ಹರ್ಷವರ್ಧನ್ ಇದ್ದಾರೆ.

ನಂಜನಗೂಡು, ಮೇ 12– ಆರ್ಥಿಕವಾಗಿ ಹಿಂದುಳಿದಿರುವ ಉಪ್ಪಾರ ಸಮಾಜವನ್ನು ಶೈಕ್ಷಣಿಕ, ಸಾಮಾಜಿಕವಾಗಿ ಮೇಲೆತ್ತಲು ಹಾಗೂ ಹೆಚ್ಚಿನ ಅನುದಾನ ನೀಡಿ ಗೋಳೂರು ಗ್ರಾಮಕ್ಕೆ ಉತ್ತಮ ಮೂಲ ಸೌಲಭ್ಯ ಒದಗಿಸಲು ಆದ್ಯತೆ ನೀಡುತ್ತೇನೆ ಎಂದು ಸಂಸದ ವಿ.ಶ್ರೀನಿವಾಸ ಪ್ರಸಾದ್ ಭರವಸೆ ನೀಡಿದ್ದಾರೆ.

ತಾಲೂಕಿನ ಗೋಳೂರು ಗ್ರಾಮದಲ್ಲಿ ಗುರುವಾರ ಸಿ.ಸಿ. ರಸ್ತೆ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಗ್ರಾಮಕ್ಕೆ 85 ಲಕ್ಷ ವೆಚ್ಚದ ಸಿ.ಸಿ.ರಸ್ತೆ, ಚರಂಡಿ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಾಗಿದೆ, 40 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲಾದ ಉಪ್ಪಾರ ಸಮುದಾಯ ಭವನವನ್ನು ಲೋಕಾರ್ಪಣೆಗೊಳಿಸಲಾಗಿದೆ. ನಗರದ ಬೈಪಾಸ್ ರಸ್ತೆಯಲ್ಲಿ ಸುಸಜ್ಜಿತ ಭಗಿರಥ ಭವನ ನಿರ್ಮಾಣಕ್ಕಾಗಿ 20 ಗುಂಟೆ ಜಾಗವನ್ನು ನಿಗಧಿಪಡಿಸಲಾಗಿದೆ, 2 ಕೋಟಿ ವೆಚ್ಚದಲ್ಲಿ ಭವನ ನಿರ್ಮಿಸಲು ಬದ್ಧನಾಗಿದ್ದೇನೆ ಎಂದು ಹೇಳಿದರು.

ಶಾಸಕ ಬಿ.ಹರ್ಷವರ್ಧನ್ ಮಾತನಾಡಿ ಶಾಸಕನಾದ ನಂತರ ಮೊದಲ ಬಾರಿಗೆ ಗೋಳೂರು ಗ್ರಾಮಕ್ಕೆ ಭೇಟಿ ನೀಡಿದ್ದಾಗ, ಗ್ರಾಮಕ್ಕೆ ಮೂಲ ಸೌಲಭ್ಯದ ಕೊರತೆ ಇರುವುದನ್ನು ಗಮನಿಸಿದ್ದೆ, ಗ್ರಾಮದ ಅಭಿವೃದ್ಧಿಗಾಗಿ 1 ಕೋಟಿ ಅನುದಾನ ನೀಡಿ ಸಿಸಿ ರಸ್ತೆ ನಿರ್ಮಾಣ ಮಾಡಿದ್ದೇನೆ. ಈಗ 85 ಲಕ್ಷ ರೂಗಳನ್ನು ಪಂಚಾಯತ್ ರಾಜ್ ಇಲಾಖೆಯಿಂದ ಬಿಡುಗಡೆ ಮಾಡಿಸಿದ್ದು, ಹೆಚ್ಚಿನ ಅನುದಾನ ನೀಡಿ ಚರಂಡಿ ಸಮಸ್ಯೆ ನಿವಾರಿಸುವುದರ ಜೊತೆಗೆ ಶಾಲೆಗೆ ಹೆಚ್ಚುವರಿ ಕಟ್ಟಡ, ಅಂಗನವಾಡಿ ಕೇಂದ್ರದ ಕಟ್ಟಡ ನಿರ್ಮಿಸಿಕೊಡಲಾಗುವುದು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ನಗರಸಭೆ ಅಧ್ಯಕ್ಷ ಎಚ್.ಎಸ್. ಮಹದೇವಸ್ವಾಮಿ,ರಾಜ್ಯ ಬಿಜೆಪಿ ಕಾರ್ಯಕಾರಿಣಿ ಸದಸ್ಯ ಕುಂಬ್ರಳ್ಳಿ ಸುಬ್ಬಣ್ಣ, ತಾಲೂಕು ಉಪ್ಪಾರ ಸಂಘದ ಗೌರವ ಅಧ್ಯಕ್ಷ ಬಾಲಚಂದ್ರ, ಬಿಜೆಪಿ ತಾಲೂಕು ಅಧ್ಯಕ್ಷ ಹೊರಳವಾಡಿ ಮಹೇಶ್, ಜಿ.ಸಿ.ಮಂಜುನಾಥ್, ಜಿ.ಸಿ.ಮಹದೇವ, ಚಿನ್ನುಕೃಷ್ಣ, ತಾಪಂ ಮಾಜಿ ಸದಸ್ಯ ಬಿ.ಎಸ್.ರಾಮು, ಮುಖಂಡರಾದ ಮಹದೇವಸ್ವಾಮಿ, ಮಂಜು, ಗ್ರಾ.ಪಂ.ಸದಸ್ಯರಾದ ಗೋವರ್ಧನ್, ಚಿನ್ನುಪ್ರಸನ್ನ, ಮುದ್ದುಮಾದಶೆಟ್ಟಿ, ಜಯಮ್ಮ ,ದೊಡ್ಡಮ್ಮ ಉಪಸ್ಥಿತರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

- ಸ್ಕ್ರೀನ್ 1 ಡಾಕ್ಟರ್ ಸ್ಟ್ರೇಂಜ್ (3ಡಿ)(ಇಂ): ಬೆ.9.15ಕ್ಕೆ, ಬೆ.11.40ಕ್ಕೆ, ಮ.2.05ಕ್ಕೆ, ರಾ.7.35ಕ್ಕೆ, ಸರ್ಕಾರು ವಾರಿ ಪಾಟ (ತೆ): ಸಂ.4.30ಕ್ಕೆ, ಕೆಜಿಎಫ್ 2 (ಕ): ರಾ.10ಕ್ಕೆ.
- ಸ್ಕ್ರೀನ್ 2 ಡಾನ್ (ತ): ಬೆ.10.10ಕ್ಕೆ, ಸಂ.4ಕ್ಕೆ, ಜಯೇಶ್‌ಬಾಯ್ ಜೋರ್ದಾರ್ (ಹಿಂ): ಮ.1.20ಕ್ಕೆ, ರಾ.7.15ಕ್ಕೆ, ರಾ.9.55ಕ್ಕೆ.
- ಸ್ಕ್ರೀನ್ 3 ಸೆಲ್ಫಿ ಮಮ್ಮಿ ಗೂಗಲ್ ಡ್ಯಾಡಿ (ಕ): ಬೆ.10.40ಕ್ಕೆ, ಅಯ್ಯಂಗಾರನ್ (ತ): ಮ.1.15ಕ್ಕೆ, ಕ್ರಿಟಿಕಲ್ ಕೀರ್ತನೆಗಳು (ಕ): ಸಂ.4ಕ್ಕೆ, ಸರ್ಕಾರು ವಾರಿ ಪಾಟ (ತೆ): ಸಂ.6.50ಕ್ಕೆ, ಮೇರಿ ಆವಾಜ್ ಸುನೊ (ಮ): ರಾ.9.55ಕ್ಕೆ.
- ಸ್ಕ್ರೀನ್ 4 ಕಸ್ತೂರಿ ಮಹಲ್ (ಕ): ಬೆ.10.25ಕ್ಕೆ, ಕೆಜಿಎಫ್ 2(ಕ): ಮ.12.55ಕ್ಕೆ, ಸಂ.6.35ಕ್ಕೆ, ಅವತಾರ ಪುರುಷ (ಕ): ಸಂ.4.10ಕ್ಕೆ, ಸರ್ಕಾರು ವಾರಿ ಪಾಟ (ಕ): ರಾ.9.50ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

- ಸ್ಕ್ರೀನ್ 1 ಡಾಕ್ಟರ್ ಸ್ಟ್ರೇಂಜ್ (3ಡಿ)(ಇಂ): ಬೆ.10ಕ್ಕೆ, ಸಂ.4.10ಕ್ಕೆ, ಸಂ.6.55ಕ್ಕೆ, ಡಾನ್ (ತ): ಮ.12.45ಕ್ಕೆ, ರಾ.9.40ಕ್ಕೆ.
- ಸ್ಕ್ರೀನ್ 2 ಜಯೇಶ್‌ಬಾಯ್ ಜೋರ್ದಾರ್ (ಹಿಂ): ಬೆ.10.05ಕ್ಕೆ, ಮ.12.50ಕ್ಕೆ, ರಾ.7.05ಕ್ಕೆ, ಕೆಜಿಎಫ್ 2(ಕ): ಮ.3.35ಕ್ಕೆ, ರಾ.9.50ಕ್ಕೆ.
- ಸ್ಕ್ರೀನ್ 3 ಸರ್ಕಾರು ವಾರಿ ಪಾಟ (ತೆ): ಬೆ.9.40ಕ್ಕೆ, ಮ.3.50ಕ್ಕೆ, ರಾ.10ಕ್ಕೆ, ಅವತಾರ ಪುರುಷ (ಕ): ಮ.1ಕ್ಕೆ, ಕ್ರಿಟಿಕಲ್ ಕೀರ್ತನೆಗಳು (ಕ): ರಾ.7.10ಕ್ಕೆ.
- ಸ್ಕ್ರೀನ್ 4 ಕೆಜಿಎಫ್ 2(ಕ): ಬೆ.9.55ಕ್ಕೆ, ಕಸ್ತೂರಿ ಮಹಲ್ (ಕ): ಮ.1.25ಕ್ಕೆ, ಅಯ್ಯಂಗಾರನ್ (ತ): ಸಂ.4.05ಕ್ಕೆ, ಸೆಲ್ಫಿ ಮಮ್ಮಿ ಗೂಗಲ್ ಡ್ಯಾಡಿ (ಕ): ಸಂ.6.55ಕ್ಕೆ, ಜಯೇಶ್‌ಬಾಯ್ ಜೋರ್ದಾರ್ (ಹಿಂ): ರಾ.9.30ಕ್ಕೆ,

ಮೈಸೂರು ವಿಷನ್ ಸಿನಿಮಾ

ದೂ : 0821–2973519

- ಸ್ಕ್ರೀನ್ 1 ಸೆಲ್ಫಿ ಮಮ್ಮಿ ಗೂಗಲ್ ಡ್ಯಾಡಿ (ಕ): ಬೆ.11ಕ್ಕೆ, ಸಂ.4ಕ್ಕೆ, ಕ್ರಿಟಿಕಲ್ ಕೀರ್ತನೆಗಳು (ಕ): ಮ.1.20ಕ್ಕೆ, ಡಾನ್ (ತ): ಸಂ.6.25ಕ್ಕೆ, ರಾ.9.30ಕ್ಕೆ.
- ಸ್ಕ್ರೀನ್ 2 ಕಸ್ತೂರಿ ಮಹಲ್ (ಕ): ಬೆ.10.45ಕ್ಕೆ, ಜಯೇಶ್‌ಬಾಯ್ ಜೋರ್ದಾರ್ (ಹಿಂ): ಮ.1.25ಕ್ಕೆ, ಕ್ರಿಟಿಕಲ್ ಕೀರ್ತನೆಗಳು (ಕ): ಮ.3.55ಕ್ಕೆ, ಸರ್ಕಾರು ವಾರಿ ಪಾಟ (ತೆ): ಸಂ.6.25ಕ್ಕೆ, ರಾ.9.30ಕ್ಕೆ.
- ಸ್ಕ್ರೀನ್ 3 ಸರ್ಕಾರು ವಾರಿ ಪಾಟ (ತೆ): ಬೆ.10.30ಕ್ಕೆ, ಮ.1.35ಕ್ಕೆ, ಸಂ.4.40ಕ್ಕೆ, ಕೆಜಿಎಫ್ 2 (ಕ): ರಾ.7.45ಕ್ಕೆ.
- ಸ್ಕ್ರೀನ್ 4 ಕೆಜಿಎಫ್ 2 (ಕ): ಮ.1.20ಕ್ಕೆ, ಅವತಾರ ಪುರುಷ (ಕ): ಸಂ.4.30ಕ್ಕೆ, ಜಯೇಶ್‌ಬಾಯ್ ಜೋರ್ದಾರ್ (ಹಿಂ): ರಾ.7.05ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ಫೋರಂ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕೆಜಿಎಫ್ 2 (ಕ): ಬೆ.8ಕ್ಕೆ, ಬೆ.9ಕ್ಕೆ, ಬೆ.10.30ಕ್ಕೆ, ಬೆ.11.15ಕ್ಕೆ, ಬೆ.11.30ಕ್ಕೆ, ಮ.12.30ಕ್ಕೆ, ಮ.2ಕ್ಕೆ, ಮ.2.45ಕ್ಕೆ, ಮ.3ಕ್ಕೆ, ಸಂ.4ಕ್ಕೆ, ಸಂ.5.30ಕ್ಕೆ, ಸಂ.6.15ಕ್ಕೆ, ಸಂ.6.30ಕ್ಕೆ, ರಾ.7.30ಕ್ಕೆ, ರಾ.9ಕ್ಕೆ, ರಾ.9.45ಕ್ಕೆ, ರಾ.10ಕ್ಕೆ, ಆರ್‌ಆರ್‌ಆರ್ (ಕ): ರಾ.9.30ಕ್ಕೆ, ಕೆಜಿಎಫ್ 2 (ಹಿಂ): ಬೆ.10.45ಕ್ಕೆ, ಸಂ.6ಕ್ಕೆ, ಆರ್‌ಆರ್‌ಆರ್ (ತೆ): ಮ.2.15ಕ್ಕೆ, ಬೀಸ್ಟ್ (ತ): ಬೆ.11.30ಕ್ಕೆ, ಮ.2.50ಕ್ಕೆ, ಸಂ.6.10ಕ್ಕೆ, ರಾ.9.30ಕ್ಕೆ.

ಗರುಡ ಮಾಲ್, 1ನೇ ಮಹಡಿ, ಮೊ.ನಂ: 9901373210

ಹರೀಶ ವಯಸ್ಸು 36 (ಕ): ಮ.3.30ಕ್ಕೆ, ಲವ್ ಮಾಕ್ಟೇಲ್ 2 (ಕ): ಮ.12.25ಕ್ಕೆ, ಮ.3.05ಕ್ಕೆ, ರಾಧೇಶ್ಯಾಮ್ (ತೆ): ಬೆ.9.15ಕ್ಕೆ, ಬೆ.10.20ಕ್ಕೆ, ಮ.12.10ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ಸಂ.6.05ಕ್ಕೆ, ರಾ.7.05ಕ್ಕೆ, ರಾ.9ಕ್ಕೆ, ರಾ.10ಕ್ಕೆ, ದಿ ಬ್ಯಾಟ್‌ಮ್ಯಾನ್ (ಇಂ): ಬೆ.11.55ಕ್ಕೆ, ಸಂ.5.55ಕ್ಕೆ, ಗಂಗೂಬಾಯ್ ಕಾಠಿಯಾವಾಡಿ (ಹಿಂ): ರಾ.9.30ಕ್ಕೆ, ಎದರ್ಕುಂ ತುನಿಂದವನ್ (ತ): ಬೆ.9.15ಕ್ಕೆ, ಮ.3.25ಕ್ಕೆ, ಸಂ.6.30ಕ್ಕೆ, ರಾ.9.45ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಡಾನ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕೆಜಿಎಫ್–2 (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಇಲ್ಲಿಂದ ಆರಂಭವಾಗಿದೆ (ಕ)	1 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಒಲುಮೈ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಸರ್ಕಾರು ವಾರಿ ಪಾಠ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಕೆಜಿಎಫ್–2(ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಅಯ್ಯಂಗಾರನ್ (ತ)	4 ಪ್ರದರ್ಶನಗಳು
ಸಂಗಂ	
ಸೆಲ್ಫಿ ಮಮ್ಮಿ ಗೂಗ್ಲಿ ಡ್ಯಾಡಿ (ಕ)	2 ಪ್ರದರ್ಶನಗಳು
ಕ್ರಿಟಿಕಲ್ ಕೀರ್ತನಗಳು (ಕ)	2 ಪ್ರದರ್ಶನಗಳು
ಲಿಡೋ	
ಸರ್ಕಾರು ವಾರಿ ಪಾಠ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಸರ್ಕಾರು ವಾರಿ ಪಾಠ (ತೆ)	4 ಪ್ರದರ್ಶನಗಳು
ಸ್ಟರ್ಲಿಂಗ್	
ಸೆಲ್ಫಿ ಮಮ್ಮಿ ಗೂಗ್ಲಿ ಡ್ಯಾಡಿ (ಕ)	4 ಪ್ರದರ್ಶನಗಳು

ಮುಂಬೈಗೆ ಗೆಲುವು: ಟೂರ್ನಿಯಿಂದ ಚೆನ್ನೈ ಔಟ್

ಮುಂಬೈ, ಮೇ 12– ಬೌಲರ್‌ಗಳ ಮಾರಕ ದಾಳಿ ನೆರವಿನಿಂದ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಮುಂಬೈ ಇಂಡಿಯನ್ಸ್ 5 ವಿಕೆಟ್‌ಗಳ ಗೆಲುವು ದಾಖಲಿಸಿತ್ತು. ಇದರೊಂದಿಗೆ ಚೆನ್ನೈ ತಂಡದ ಪ್ಲೇ–ಆಫ್ ಕನಸು ಭಗ್ನಗೊಂಡಿದ್ದು, ಟೂರ್ನಿಯಿಂದ ಹೊರಬಿದ್ದಿದೆ.



ಇಲ್ಲಿನ ವಾಂಖೆಡೆ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಟೂರ್ನಿಯ 59ನೇ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಚೆನ್ನೈ ಬ್ಯಾಟ್ಸ್ ಮನ್‌ಗಳು ಮುಂಬೈ ಬೌಲರ್‌ಗಳ ನಿಖರ ದಾಳಿಯಿಂದ ಪೆವಿಲಿಯನ್ ಪರೇಡ್ ನಡೆಸಿದರು. ನಾಯಕ ಮಹೇಂದ್ರ ಸಿಂಗ್ ಧೋನಿ ಅಜೇಯ 36 ರನ್, ಅವರನ್ನು ಹೊರೆತುಪಡಿಸಿ ಉಳಿದ ಯಾವೊಬ್ಬ ಬ್ಯಾಟ್ಸ್‌ಮನ್‌ಗಳು 20ರ ಗಡಿ ದಾಟಲಿಲ್ಲ. ಇದರೊಂದಿಗೆ ಚೆನ್ನೈ 16 ಓವರ್‌ಗಳಲ್ಲಿ ಕೇವಲ 97ರನ್‌ಗಳಿಗೆ ತನ್ನೆಲ್ಲ ವಿಕೆಟ್‌ಗಳನ್ನು ಕಳೆದುಕೊಂಡಿತು.

ತಂಡದ ಪರವಾಗಿ ಡೆವೊನ್ ಕಾನ್ವೆ, ಮೊಯಿನ್ ಅಲಿ ಶೂನ್ಯಕ್ಕೆ ವಿಕೆಟ್ ಒಪ್ಪಿಸಿದರೆ, ಋತುರಾಜ್ ಗಾಯಕವಾಡ್ 7, ರಾಬಿನ್ ಉತ್ತಪ್ಪ 1, ಅಂಬಟಿ ರಾಯುಡು 10, ಶಿವಂ ದುಬೆ 10, ಡ್ವೇನ್ ಬ್ರಾವೊ 12ರನ್ ಗಳಿಸಿ ನಿರಾಸೆ ಮೂಡಿಸಿದರು. ಬೌಲಿಂಗ್‌ನಲ್ಲಿ ಮುಂಬೈ ಪರವಾಗಿ ಡ್ಯಾನಿಯಲ್ ಸ್ಯಾಮ್ಸ್ 3, ರಿಲೆ ಮೆರಿಡಿತ್, ಕುಮಾರ್ ಕಾರ್ತಿಕೇಯ ತಲಾ 2, ಬುಮ್ರಾ ಒಂದು ವಿಕೆಟ್ ಪಡೆದರು.

ಆದರೆ, 98ರನ್‌ಗಳ ಗುರಿ ಬೆನ್ನತ್ತಿದ್ದ ಮುಂಬೈ ಗೆಲುವು ನಿರೀಕ್ಷಿಸಿದಷ್ಟು ಸುಲಭವಾಗಿರಲಿಲ್ಲ. 33ಕ್ಕೆ 4 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತ್ತು. ಇಶಾನ್‌ಕಿಶನ್ 6, ರೋಹಿತ್ ಶರ್ಮಾ 18, ಡ್ಯಾನಿಯಲ್ ಸ್ಯಾಮ್ಸ್ 1ರನ್, ಚೊಚ್ಚಲ ಪಂದ್ಯ ಆಡುತ್ತಿರುವ ಟ್ರಿಸ್ಟನ್ ಸ್ಟಬ್ಸ್ ಶೂನ್ಯಕ್ಕೆ ಔಟಾಗುವ ಮೂಲಕ ನಿರಾಸೆ ಮೂಡಿಸಿದರು. ಈ ವೇಳೆ ಜವಾಬ್ದಾರಿಯುತ ಬ್ಯಾಟಿಂಗ್ ಮಾಡಿದ ತಿಲಕ್ ವರ್ಮಾ ಅಜೇಯ 34ರನ್ ಗಳಿಸಿ ತಂಡವನ್ನು ಗೆಲುವಿನ ದಡ ಸೇರಿಸಿದರು. ಅವರಿಗೆ ಹೃತಿಕ್ ಶೋಕಿನ್ 18 ಹಾಗೂ ಟಿಮ್ ಡೇವಿಡ್ 16 ಉತ್ತಮ ಬೆಂಬಲ ನೀಡಿದರು. ಈ ಮೂಲಕ ಮುಂಬೈ 14.5 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 103ರನ್ ಗಳಿಸಿ ಗುರಿ ತಲುಪಿತು. ಚೆನ್ನೈ ಪರ ಮುಖೇಶ್ ಚೌಧರಿ 3, ಸಿಮರ್ಜೀತ್ ಸಿಂಗ್, ಮೊಹಿನ್ ಅಲಿ ತಲಾ ಒಂದೊಂದು ವಿಕೆಟ್ ಪಡೆದರು. ಉತ್ತಮ ಬೌಲಿಂಗ್ ಮಾಡಿದ ಡ್ಯಾನಿಯಲ್ ಸ್ಯಾಮ್ಸ್ ಪಂದ್ಯ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಸಾರ್ವಜನಿಕ ಪ್ರಕಟಣೆ

ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ನಮ್ಮ ಕಕ್ಷಿದಾರರಾದ ಬೆಂಗಳೂರು ಸಿಟಿ, ಜಯನಗರ, 7ನೇ ಬ್ಲಾಕ್, 10ನೇ ಕ್ರಾಸ್, ಮನೆ ನಂ: 610 ರಲ್ಲಿ ವಾಸವಾಗಿರುವ ಶ್ರೀ. ಸಿ. ಚಿಕ್ಕೇಗೌಡ ರವರ ಮಗನಾದ **ಶ್ರೀ. ಯಶವಂತ್ .ಸಿ.** ರವರು, ಷೆಡ್ಯೂಲ್ ಸ್ವತ್ತುಗಳ ಮಾಲೀಕರಾದ ಮೈಸೂರು ಜಿಲ್ಲೆ, ಕೆ.ಆರ್.ನಗರ ಟೌನ್, ಕಂಠೇನಹಳ್ಳಿ ಹೊಸ ಬಡಾವಣೆ, ವಾರ್ಡ್ ನಂ: 12, ಅನುಗ್ರಹ ನಿಲಯ ಇಲ್ಲಿ ವಾಸವಾಗಿರುವ ಲೂಯಿಸ್ ಮ್ಯಾಸ್ಕರ್‌ನಾಸ್ ರವರ ಮಗನಾದ **ಸಿ.ಎಲ್.ರವೀಶ್** ರವರಿಂದ ಕ್ರಯಕ್ಕೆ ಪಡೆಯಲು ಇಚ್ಛಿಸಿದ್ದು, ಈ ಷೆಡ್ಯೂಲ್ ಸ್ವತ್ತುಗಳ ಸಂಬಂಧ ಇತರೆ ಬೇರೆ ಯಾರಿಗಾದರೂ ಮಾಲೀಕತ್ವದ ಹಕ್ಕುಬಾಧ್ಯತೆ, ಭಾಗಾಂಶ, ಹಿತಾಸಕ್ತಿ ಇತ್ಯಾದಿಗಳು ಇದ್ದಲ್ಲಿ ಕೂಡಲೇ ನಮ್ಮ ಕಕ್ಷಿದಾರರಿಗೆ ಅಥವಾ ಅವರ ವಕೀಲರಿಗೆ ಈ ದಿನದಿಂದ ಹದಿನೈದು (15) ದಿನಗಳ ಒಳಗಾಗಿ ಸೂಕ್ತ ದಾಖಲಾತಿಗಳೊಡನೆ ಖುದ್ದು ಭೇಟಿಯಾಗಿ ತಕರಾರು ಸಲ್ಲಿಸಬಹುದಾಗಿರುತದೆ ಎಂದು ಈ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸುತ್ತೇವೆ. ಒಂದು ವೇಳೆ ಈ ನಿಗದಿತ ವೇಳೆಯಲ್ಲಿ ಯಾವುದೇ ವ್ಯಕ್ತಿಗಳಿಂದ ಷೆಡ್ಯೂಲ್ ಸ್ವತ್ತುಗಳ ಸಂಬಂಧ ತಕರಾರು ಬಾರದೇ ಇದ್ದ ಪಕ್ಷದಲ್ಲಿ ಷೆಡ್ಯೂಲ್ ಸ್ವತ್ತುಗಳ ಸಂಬಂಧ ಬೇರೆ ಯಾವುದೇ ವ್ಯಕ್ತಿಗಳಿಗೆ ಹಕ್ಕು ಹಿತಾಸಕ್ತಿ ಹಾಗೂ ತಕರಾರು ಇಲ್ಲವೆಂದು ಪರಿಗಣಿಸಿ ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತುಗಳ ಮಾಲೀಕರಿಂದ ಷೆಡ್ಯೂಲ್ ಸ್ವತ್ತನ್ನು ಖರೀದಿಸಲು ಹಕ್ಕುಳ್ಳವರಾಗಿರುತ್ತಾರೆ ಎಂದು ಸಾರ್ವಜನಿಕರಲ್ಲಿ ಈ ಮೂಲಕ ತಿಳಿಯಪಡಿಸುತ್ತೇವೆ.

ಷೆಡ್ಯೂಲ್ ಸ್ವತ್ತುಗಳ ವಿವರ

1. ಮೈಸೂರು ಜಿಲ್ಲೆ, ಹೆಗ್ಗಡದೇವನಕೋಟೆ ತಾಲ್ಲೂಕು, ಕಸಬಾ ಹೋಬಳಿ, ಬೊಮ್ಮಲಾಪುರ ಗ್ರಾಮಕ್ಕೆ ಸೇರಿದ ಸರ್ವೆ ನಂ: 12/6 ರಲ್ಲಿ ವಿಸ್ತೀರ್ಣ 2 ಎಕರೆ ಖುಷ್ಕಿ ಜಮೀನಿಗೆ ಚಕ್ಕುಬಂದಿ:
   - ಪೂರ್ವಕ್ಕೆ : ಲಾ.ಹಿ. ನಂ:12/2
   - ಪಶ್ಚಿಮಕ್ಕೆ : ಲಾ.ಸ. ನಂ:13
   - ಉತ್ತರಕ್ಕೆ : ಲಾ.ಹಿ. ನಂ:12/5
   - ದಕ್ಷಿಣಕ್ಕೆ : ಲಾ.ಹಿ. ನಂ: 12/8
2. ಮೈಸೂರು ಜಿಲ್ಲೆ, ಹೆಗ್ಗಡದೇವನಕೋಟೆ ತಾಲ್ಲೂಕು, ಕಸಬಾ ಹೋಬಳಿ, ಬೊಮ್ಮಲಾಪುರ ಗ್ರಾಮಕ್ಕೆ ಸೇರಿದ ಸರ್ವೆ ನಂ: 12/8 ರಲ್ಲಿ ವಿಸ್ತೀರ್ಣ 3 ಎಕರೆ ಖುಷ್ಕಿ ಜಮೀನಿಗೆ ಚಕ್ಕುಬಂದಿ:
   - ಪೂರ್ವಕ್ಕೆ : ಲಾ.ಹಿ. ನಂ:12/2
   - ಪಶ್ಚಿಮಕ್ಕೆ : ಲಾ.ಸ. ನಂ:13
   - ಉತ್ತರಕ್ಕೆ : ಲಾ.ಹಿ. ನಂ:12/6
   - ದಕ್ಷಿಣಕ್ಕೆ : ಲಾ.ಹಿ. ನಂ: 12/9

ಎಂ.ಪಿ. ಜಯಕುಮಾರ್, ಬಿಎಸ್ಸಿ, ಎಲ್‌ಎಲ್‌ಬಿ.,
ವಕೀಲರು, ಕೆ.ಎ.ಆರ್. ನಂ:945/02,
ನಂ: 2099, 1ನೇ ಮಹಡಿ, ಬಸವೇಶ್ವರ ರಸ್ತೆ,
ಕೆ.ಆರ್.ಮೊಹಲ್ಲಾ, ಮೈಸೂರು.
ಮೊ. ನಂ: 93433 16187, 98452 83878

ಸಾರ್ವಜನಿಕ ತಿಳುವಳಿಕೆ ಪತ್ರ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ಈ ಕೆಳಗೆ ಕಾಣಿಸಿರುವ ಅನುಸೂಚಿ ಸ್ವತ್ತನ್ನು, ಅನುಸೂಚಿ ಸ್ವತ್ತಿನ ಮಾಲೀಕರಾದ ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಉದ್ಬೂರು ಗ್ರಾಮ 2ನೇ ಬ್ಲಾಕ್ ಮನೆ ಸಂಖ್ಯೆ: 250 ರಲ್ಲಿ ವಾಸವಾಗಿರುವ ಲೇಟ್ ಎಂ.ನಾರಾಯಣಸ್ವಾಮಿರವರ ಮಗ ಶ್ರೀ ಮಹದೇವಸ್ವಾಮಿ .ಎನ್. ಇವರ ಧರ್ಮಪತ್ನಿ ಶ್ರೀಮತಿ. ಎಂ. ಪ್ರೇಮಕುಮಾರಿ ಹಾಗೂ ಇವರ ಮೈನರ್ ಮಕ್ಕಳಾದ ಚಿ.ಚಂದಾಸ್.ಎಂ ಮತ್ತು ಚಿ.ಮೋಹನ .ಎಂ ರವರುಗಳಿಂದ ಅನುಸೂಚಿ ಸ್ವತ್ತನ್ನು ಅಭಿವೃದ್ಧಿ ಪಡಿಸಲು ಮುಂದಾಗಿರುವುದು ಸರಿಯಷ್ಟೆ. ಅನುಸೂಚಿ ಸ್ವತ್ತಿನ ಸಂಬಂಧ ಯಾರಾದರು ಅಧಿಕಾರ ಪತ್ರ ಹೊಂದಿದ್ದಲ್ಲಿ ಅಥವಾ ಯಾರಿಗಾದರೂ ಹಕ್ಕು, ಆಸಕ್ತಿ, ಕ್ಲೈಮ್, ಆಧಾರ, ಸಾಲ ಬಾಕಿ, ಇತರೆ ತಂಟೆ ತಕಾರರು ಇದ್ದಲ್ಲಿ, ಅವರು ಖುದ್ದಾಗಿ ಸದರಿ ಸ್ವತ್ತಿಗೆ ಸಂಬಂಧಿಸಿದ ದಾಖಲೆಗಳ ಸಹಿತ ಈ ಪತ್ರಿಕಾ ಪ್ರಕಟಣೆಯಾದ 15 (ಹದಿನೈದು) ದಿನಗಳ ಒಳಗೆ ಕೆಳಕಂಡ ನನ್ನ ಕಛೇರಿಯಲ್ಲಿ ಸಂಪರ್ಕಿಸತಕ್ಕದ್ದು ಎಂದು ಈ ಮೂಲಕ ತಿಳಿಸಲಾಗಿದೆ. ತಪ್ಪಿದಲ್ಲಿ ಅನುಸೂಚಿ ಸ್ವತ್ತಿನ ಸಂಬಂಧ ಯಾರು ಅಧಿಕಾರ ಪತ್ರ ಹೊಂದಿಲ್ಲವೆಂದು ಮತ್ತು ಯಾರಿಗೂ ಯಾವುದೇ ರೀತಿಯ ಹಕ್ಕು, ಆಸಕ್ತಿ, ಕ್ಲೈಮ್, ಆಧಾರ, ಸಾಲ ಬಾಕಿ, ಇರುವುದಿಲ್ಲಾ ಎಂದು ಪರಿಗಣಿಸಿ ನನ್ನ ಕಕ್ಷಿದಾರರು ಅನುಸೂಚಿ ಸ್ವತ್ತಿನ ಸಂಬಂಧ ಜಂಟಿ ಅಭಿವೃದ್ಧಿ ಕರಾರು ಪತ್ರವನ್ನು ಬರೆಯಿಸಿ ನೋಂದಾಯಿಸಿಕೊಳ್ಳುವ ಪ್ರಕ್ರಿಯೆಗೆ ಮುಂದಾಗುತ್ತಾರೆ ಎಂದು ತಿಳಿಯುವುದು.

ಅನುಸೂಚಿ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಉದ್ಬೂರು ಗ್ರಾಮದ ಸರ್ವೆ ಸಂಖ್ಯೆ: 494/5 ರಲ್ಲಿ 04 ಎಕರೆ 18 ಗುಂಟೆ ಜಮೀನಿಗೆ ಚಕ್ಕುಬಂದಿ– ಪೂರ್ವಕ್ಕೆ: ಗುರುಕಾರ ಶಿವನಂಜಪ್ಪನವರ ಜಮೀನು, ಪಶ್ಚಿಮಕ್ಕೆ: ಸರ್ವೆ ನಂ.492, ಉತ್ತರಕ್ಕೆ: ರಾಮಣ್ಣ ಮತ್ತು ಶಿವಣ್ಣನವರ ಜಮೀನು, ದಕ್ಷಿಣಕ್ಕೆ : ರಸ್ತೆ.

Sd/- Chandrashekar .H.N
Advocate & Legal Consultant,
KAR:427/01, Chambers
#75/B, 1st Floor, 5th Main,
Kuvempunga, Mysuru - 570023
ದಿನಾಂಕ: 09–05–2022

ಕರ್ನಾಟಕ ಸರ್ಕಾರ ಇಲಾಖೆ

ಸಮಾಜ ಕಲ್ಯಾಣ ಇಲಾಖೆ

ಸಹಾಯಕ ನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, ಪಿರಿಯಾಪಟ್ಟಣ

ಕೊಠಡಿ ಸಂಖ್ಯೆ: 03, ಮೊದಲನೇ ಮಹಡಿ, ತಾಲ್ಲೂಕು ಆಡಳಿತ ಭವನ ಕಟ್ಟಡ

ದೂರವಾಣಿ ಸಂಖ್ಯೆ : 08223-273128, 08223-273563 Email: tswoppatna@gmail.com

ಸಂಖ್ಯೆ:ಸನಿಸಕಇ;ಪಿಪ:ಲೆಕ್ಕ.ಸಿ.ಆರ್.ಮಾವಾಬಾ01:2022–23 ದಿನಾಂಕ: 09–05–2022

"ಜಾಹೀರಾತು ಪ್ರಕಟಣೆ"

ದಿನಾಂಕ: 01–06–2022 ರಿಂದ ದಿನಾಂಕ: 31–05–2023 ರವರೆಗೆ ಒಟ್ಟು 12 ತಿಂಗಳ ಅವಧಿಗೆ Indigo ECS Car / Swift Dzire Car / Toyota Etios Car ನ್ನು ಮಾಹೆಯಾನ ಬಾಡಿಗೆ ಆಧಾರದ ಮೇಲೆ ಹವಾ ನಿಯಂತ್ರಣ ರಹಿತ ಚಾಲಕ ಸಮೇತ ಕಾರನ್ನು ಪಡೆಯಲು ಟೂರ್ ಅಂಡ್ ಟ್ರಾವೆಲ್ಸ್ ಮಾಲೀಕರು ಅಥವಾ ಟ್ರಾವೆಲ್ಸ್ ಏಜೆನ್ಸಿಗಳಿಂದ ಟೆಂಡರ್ ಅರ್ಜಿಗಳನ್ನು ಆಹ್ವಾನಿಸಿದ್ದು, ಆಸಕ್ತಿಯುಳ್ಳ ಟೂರ್ಸ್ ಅಂಡ್ ಟ್ರಾವೆಲ್ಸ್ ಮಾಲೀಕರು ಅಥವಾ ಟ್ರಾವೆಲ್ಸ್ ಏಜೆನ್ಸಿಗಳು ದಿನಾಂಕ: 13–05–2022 ರಿಂದ ದಿನಾಂಕ: 25–05–2022 ರ ಅಪರಾಹ್ನ 2.00 ಗಂಟೆಯೊಳಗೆ ಈ ಕಛೇರಿಯಿಂದ ಟೆಂಡರ್ ಅರ್ಜಿಗಳನ್ನು ನಿಗದಿತ ಶುಲ್ಕ ರೂ.100/– ನ್ನು ಪಾವತಿಸಿ ಪಡೆಯಬಹುದಾಗಿರುತ್ತದೆ ಹಾಗೂ ಭರ್ತಿ ಮಾಡಿದ ಟೆಂಡರ್ ಅರ್ಜಿಗಳನ್ನು ಅಗತ್ಯ ದಾಖಲಾತಿಗಳನ್ನು ತಾಂತ್ರಿಕ ಮತ್ತು ಆರ್ಥಿಕ ಲಕೋಟೆಗಳೊಂದಿಗೆ ದಿನಾಂಕ: 13–05–2022 ರಿಂದ ದಿನಾಂಕ: 27–05–2022 ರ ಅಪರಾಹ್ನ 2.00 ಗಂಟೆಯೊಳಗೆ ಸಹಾಯಕ ನಿರ್ದೇಶಕರು ಶ್ರೇಣಿ – 2, ಸಮಾಜ ಕಲ್ಯಾಣ ಇಲಾಖೆ, ಪಿರಿಯಾಪಟ್ಟಣ ಕಛೇರಿಗೆ ಸಲ್ಲಿಸಬಹುದಾಗಿದೆ.

ಸಹಿ/– ಸಹಾಯಕ ನಿರ್ದೇಶಕರು, ಗ್ರೇಡ್–2
ಸಮಾಜ ಕಲ್ಯಾಣ ಇಲಾಖೆ, ಪಿರಿಯಾಪಟ್ಟಣ ತಾಲ್ಲೂಕು

ಕರ್ನಾಟಕ ಸರ್ಕಾರ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ,

ಆಕುಕ ಇಂಜಿನಿಯರಿಂಗ್ ವಿಭಾಗ,

ಎನ್.ಪಿ.ಸಿ.ಆಸ್ಪತ್ರೆ ಆವರಣ, ನಜರ್‌ಬಾದ್, ಮೈಸೂರು – 10.

Ph No: 0821-2449772 Fax No: 0821-2449772

E-mail: khsdrp.divmys@gmail.com

ಸಂಖ್ಯೆ: ಆಕುಕ/ಇಂ.ವಿ./ಕಾ.ಅ/ಮೈ/ಸಇ–3/ಟೆಂಡರ್–06/2022–23

ದಿನಾಂಕ: 10.05.2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ವಿಭಾಗ, ಮೈಸೂರು ಇವರು ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಲಾದ ಸಿವಿಲ್ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗೆ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ವಿವರಗಳು ಈ ಕೆಳಕಂಡಂತಿವೆ:

ಕ್ರ.ಸಂ. 1. **ಕಾಮಗಾರಿಯ ಹೆಸರು:** ಚಾಮರಾಜನಗರ ಜಿಲ್ಲೆಯ ಕೊಳ್ಳೆಗಾಲ ತಾಲ್ಲೂಕಿನ ಮುಳ್ಳೂರಿನಲ್ಲಿ ಎ.ಎನ್.ಎಂ. ಕೇಂದ್ರ ನಿರ್ಮಾಣ ಕಾಮಗಾರಿ **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):** 40.00 **ಇ.ಎಂ.ಡಿ ಮೊತ್ತ (ರೂ.ಗಳಲ್ಲಿ):** 80000.00 **ಕಾಲಾವಧಿ:** 2 ತಿಂಗಳು **ಗುತ್ತಿಗೆದಾರರ ಅರ್ಹತೆ:** ನಾಲ್ಕನೇ ದರ್ಜೆ & ಮೇಲ್ಪಟ್ಟು.

ಟೆಂಡರ್ ಪ್ರಕ್ರಿಯೆ ವೇಳಾಪಟ್ಟಿ ಮತ್ತು ಇತರೆ ವಿವರಗಳು: 1) ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: 24.05.2022 ಸಂಜೆ 16.00 ಘಂಟೆಯವರೆಗೆ **2)** ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ತಾಂತ್ರಿಕ ಬಿಡ್ ಅನ್ನು ತೆರೆಯುವ ದಿನಾಂಕ ಮತ್ತು ಸಮಯ: 25.05.2022 ಸಂಜೆ 16.01 ಘಂಟೆಗೆ.

ಸೂಚನೆ: ಅಲ್ಪಾವಧಿ ಟೆಂಡರ್ ಪ್ರಕಟಣೆಯಲ್ಲಿ ವ್ಯತ್ಯಾಸವಿದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಅದನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ (www.eproc.karnataka.gov.in.) ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಆಕುಕ ಇಂಜಿನಿಯರಿಂಗ್ ವಿಭಾಗ, ಮೈಸೂರು.

DIPR/DDMYS/MCA/94/2022-23